ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಭು ಬಖ್ರು ಹೈಕೋರ್ಟ್ ಸಿಜೆ

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವಿಭು ಬಖ್ರು ಅವರನ್ನು ನೇಮಿಸಿ ಕೇಂದ್ರ ಸರಕಾರವು ಆದೇಶ ಹೊರಡಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಕುರಿತು ಆದೇಶ ಹೊರಡಿಸಿದ್ದಾರೆ.

ಸೊಂಪಾದ ಪುಟಗಳು

ಹೈಕಮಾಂಡ್ ಅನ್ನೇ ಇಕ್ಕಟ್ಟಿಗೆ ಸಿಲುಕಿಸಿದ ಕರ್ನಾಟಕ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಮೂರನೇ ಮಹಾಯುದ್ಧ ಯಾರು ತಡೆಯಬಲ್ಲರು?
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನಿಮ್ಮ ಶ್ರಮ ಮತ್ತು ಶಕ್ತಿಯನ್ನು ಚಿಂತೆ ಮಾಡುವುದಕ್ಕೇ ವಿನಿಯೋಗಿಸಬೇಡಿ. ಅದರ ಬದಲು ನಿಮ್ಮ ವೈಯಕ್ತಿಕ ಬೆಳವಣಿಗೆ, ಅಭಿವೃದ್ಧಿ, ಚಿಂತನೆ, ಹೊಸ ಪ್ರಯೋಗಗಳಿಗೆ ವಿನಿಯೋಗಿಸಿ. ಅದರಿಂದ ಕೆಲ ದಿನಗಳಲ್ಲಿ ನಿಮ್ಮಲ್ಲಿಯೇ ಅದ್ಭುತ ಪರಿಣಾಮ ಕಾಣಿಸಿಕೊಳ್ಳುತ್ತದೆ.

ವಕ್ರತುಂಡೋಕ್ತಿ

ಈಗಿನ ಜನಾಂಗದವರು ಅದೃಷ್ಟಶಾಲಿಗಳು. ಅವರು ಮೂರನೇ ಮಹಾಯುದ್ಧವನ್ನೂ ನೋಡಬಲ್ಲರು, ನೆಟ್ ಫ್ಲಿಕ್ಸ್‌ನಲ್ಲಿ.

ಪರಾರಿಯಾಗಲು ಯತ್ನಿಸಿದ್ದ ನಾಸೀರ್

ಬೆಂಗಳೂರು: ಉಗ್ರ ಟಿ.ನಾಸಿರ್‌ನನ್ನು ಕೋರ್ಟ್‌ಗೆ ಕರೆತರುವಾಗ ಸ್ಫೋಟಿಸಿ ಪೊಲೀಸರ ಕೈಯಿಂದ ತಪ್ಪಿಸಿ ಕೊಂಡು ಹೋಗುವಂತೆ ಪ್ಲ್ಯಾನ್ ರೂಪಿಸಲಾಗಿತ್ತು ಎಂದು ಎನ್‌ಐಎ ವಿಚಾರಣೆ ತಿಳಿದುಬಂದಿದೆ.

ಭಾರತದ 2ನೇ ಅತಿ ಉದ್ದದ ತೂಗು ಸೇತುವೆ ಲೋಕಾರ್ಪಣೆ

ಸಿಗಂದೂರಿಗೆ ಸೇತುಬಂಧ

ಶಿವಮೊಗ್ಗ: ಬಿಟ್ಟೂ ಬಿಡದೆ ಸುರಿಯುತ್ತಿರುವ ಮಳೆಯ ನಡುವೆ ಸೋಮವಾರ ಮಧ್ಯಾಹ್ನ ಸಾಗರ ತಾಲೂಕಿನ ಅಂಬಾರ ಗೋಡ್ಲು-ಕಳಸವಳ್ಳಿ ನಡುವಿನ ಶರಾವತಿ ಹಿನ್ನೀರಲ್ಲಿ ನಿರ್ಮಿಸಿದ ನೂತನ ತೂಗು ಸೇತುವೆಯನ್ನು ಕೇಂದ್ರದ ಹೆದ್ದಾರಿ ಹಾಗೂ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಲೋಕಾರ್ಪಣೆ ಮಾಡಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದರಾದ ಬಿ.ವೈ. ರಾಘವೇಂದ್ರ, ಕೋಟ ಶ್ರೀನಿವಾಸ ಪೂಜಾರಿ, ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ಆರಗ ಜ್ಞಾನೇಂದ್ರ, ಎಸ್.ಎನ್. ಚನ್ನಬಸಪ್ಪ, ಗುರುರಾಜ ಗಂಟಿಹೊಳೆ, ಸಿಮೆಂಟ್ ಮಂಜು, ಡಿ.ಎಸ್.ಅರುಣ್, ಡಾ.ಧನಂಜಯ ಸರ್ಜಿ, ಭಾರತಿ ಶೆಟ್ಟಿ, ಮಾಜಿ ಸಚಿವರಾದ ಕಾಗೋಡು ತಿಮಪ್ಪ, ಹರತಾಳು ಹಾಲಪ್ಪ, ಮಾಜಿ ಶಾಸಕರಾದ ಎಸ್.ರುದ್ರೇಗೌಡ, ಅಶೋಕನಾಯ್ಕ, ಕೆ.ಜಿ.ಕುಮಾರಸ್ವಾಮಿ, ಸಿಗಂದೂರು ಕ್ಷೇತ್ರದ ಧರ್ಮದರ್ಶಿ ಎಸ್.ರಾಮಪ್ಪ ಉಪಸ್ಥಿತರಿದ್ದರು.

ದೂರ ಉಳಿದ ಕಾಂಗ್ರೆಸ್ ನಾಯಕರು: ಸೇತುವೆ ಲೋಕಾರ್ಪಣೆಗೆ ತಮ್ಮನ್ನು ಆಹ್ವಾನಿಸುವಲ್ಲಿ ಶಿಷ್ಟಾಚಾರ ಪಾಲನೆ ಆಗಿಲ್ಲ ಎಂದು ಅಸಮಾಧಾನ ಗೊಂಡಿದ್ದ ಸಿಎಂ ಸಿದ್ದರಾಮಯ್ಯ, ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳದಂತೆ ಪಕ್ಷದ ಸಚಿವರು, ಶಾಸಕರಿಗೆ ಸೂಚನೆ ನೀಡಿದ್ದರು. ಹೀಗಾಗಿ ಸಚಿವ ಸತೀಶ್ ಜಾರಕಿಹೊಳಿ ಸೋಮವಾರ ಸಾಗರ ಪಟ್ಟಣಕ್ಕೆ ಬಂದರೂ ಸೇತುವೆ ಲೋಕಾರ್ಪಣೆ ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳದೇ ವಾಪಸ್ ಮರಳಿ ದರು. ಶಿವಮೊಗ್ಗ ಜಿಲ್ಲೆ ಉಸ್ತುವಾರಿ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ, ಸಾಗರ ಶಾಸಕ ಬೇಳೂರು ಗೋಪಾಲ ಕೃಷ್ಣ ಸೇರಿ ಕಾಂಗ್ರೆಸ್ ನಾಯಕರು ಗೈರು ಹಾಜರಾದರು.

ಅಂಬಾರಗೋಡ್ಲು-ಕಳಸವಳ್ಳಿ ಸೇತುವೆಯನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಲೋಕಾರ್ಪಣೆ ಮಾಡಿದರು.

ಸೇತುವೆಗೆ ಚೌಡೇಶ್ವರಿ ಹೆಸರು

ಅಂಬಾರಗೋಡ್ಲು-ಕಳಸವಳ್ಳಿ ನಡುವಿನ ಶರಾವತಿ ಹಿನ್ನೀರಿನ ನೂತನ ತೂಗು ಸೇತುವೆಗೆ ಸಿಗಂದೂರು ಚೌಡೇಶ್ವರಿ ಹೆಸರು ಇಡಲಾಗುವುದು ಎಂದು ಕೇಂದ್ರ ಹೆದ್ದಾರಿ ಹಾಗೂ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಘೋಷಣೆ ಮಾಡಿದರು. ನೂತನ ಸೇತುವೆ ಲೋಕಾರ್ಪಣೆ ನಂತರ ಸಾಗರದ ನೆಹರೂ ಮೈದಾನದಲ್ಲಿ ನಡೆದ ಸಾರ್ವಜನಿಕ ಸಮಾರಂಭ ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸೇತುವೆ ನಿರ್ಮಾಣದ ಕೆಲಸ ನನ್ನಿಂದ ಆಗಿಲ್ಲ. ಬದಲಿಗೆ ಸಿಗಂದೂರು ಚೌಡೇಶ್ವರಿ ದೇವಿಯ ಆಶೀರ್ವಾದದಿಂದ ಆಗಿದೆ. ಹೀಗಾಗಿ ಆ ತಾಯಿಯ ಹೆಸರನ್ನು ಇಡಲು ನಿರ್ಧರಿಸಲಾಗಿದೆ. ಆ ಮೂಲಕ ಈ ಭಾಗದ ಜನರ ಭಾವನೆಗಳನ್ನು ಗೌರವಿಸಲಾಗುತ್ತಿದೆ ಎಂದರು.

ಸಿಗಂಧೂರು ಚೌಡೇಶ್ವರಿ ದೇವಸ್ಥಾನವನ್ನು ಸಂಪರ್ಕಿಸುವ ರಾಜ್ಯದ ಉದ್ದನೆಯ ತೂಗು ಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ತಮನ್ನು ಆಹ್ವಾನಿಸಿಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ ಈ ರೀತಿಯ ನಡವಳಿಕೆಗಳು ಸರಿಯಲ್ಲ. ಕಾರ್ಯಕ್ರಮದ ಬಗ್ಗೆ ತಮೊಂದಿಗೆ ಯಾರೂ ಚರ್ಚೆ ಮಾಡಿಲ್ಲ. ನನಗೆ ಹೇಳದೇ ಎಲ್ಲವನ್ನೂ ನಿಗದಿ ಮಾಡಿದ್ದಾರೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸೇತುವೆ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವಂತೆ ಕೋರಿ ಸಿಎಂ ಸಿದ್ದರಾಮಯ್ಯ ಅವರಿಗೆ ಜುಲೈ 11ರಂದು ಅಧಿಕೃತ ಆಹ್ವಾನ ನೀಡಲಾಗಿತ್ತು. ಖುದ್ದು ಹಾಜರಾಗಲು ಸಾಧ್ಯವಾಗದಿದ್ದಲ್ಲಿ ವರ್ಚುವಲ್ ಆಗಿ ಕಾರ್ಯಕ್ರಮ ದಲ್ಲಿ ಭಾಗಿಯಾಗುವಂತೆ ಜುಲೈ 12ರಂದು ಕಳುಹಿಸಿದ ಪತ್ರದಲ್ಲಿ ತಿಳಿಸಲಾಗಿತ್ತು. ಕೇಂದ್ರ ಸರಕಾರ ಯಾವುದೇ ಶಿಷ್ಟಾಚಾರ ಉಲ್ಲಂಘಿಸಿಲ್ಲ.

-ನಿತಿನ್ ಗಡ್ಕರಿ, ಕೇಂದ್ರ ಸಚಿವ

ಮುಖ್ಯಮಂತ್ರಿ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುವ ವಿಚಾರದಲ್ಲಿ ಕೆಲವರಿಂದ ತಪ್ಪುಗಳು ಆಗಿವೆ. ಯೋಜನೆ ಅವರದ್ದೇ (ಕೇಂದ್ರ) ಆದರೂ ಭೂಮಿ ನಮ್ಮದು. ಹೀಗಾಗಿ ಪರಸ್ಪರ ಸಮನ್ವಯ ಅಗತ್ಯ. ಮುಂದೆ ಇಂತಹ ಸಂಗತಿಗಳು ಮರುಕಳಿಸಬಾರದು.

-ಸತೀಶ್ ಜಾರಕಿಹೊಳಿ, ಸಚಿವ

1938-2025

ಇಂದು ಬೆಳಗ್ಗೆ 11.30ಕ್ಕೆ ದಶಾವರದಲ್ಲಿ ಅಂತ್ಯಕ್ರಿಯೆ

ಬಿ.ಸರೋಜಾ ದೇವಿ ನಿಧನ

ಬೆಂಗಳೂರು: ಬಹುಭಾಷಾ ನಟಿ ಬಿ.ಸರೋಜಾದೇವಿ(87) ಅವರು ವಯೋಸಹಜ ಅನಾರೋಗ್ಯದಿಂದಾಗಿ ಸೋಮವಾರ ಮಲ್ಲೇಶ್ವರದ ಸ್ವಗೃಹದಲ್ಲಿ ನಿಧನರಾಗಿದ್ದಾರೆ. 1955ರಲ್ಲಿ ತಮ್ಮ 14ನೇ ವಯಸ್ಸಿಗೆ 'ಮಹಾಕವಿ ಕಾಳಿದಾಸ' ಸಿನಿಮಾ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದ ಅವರು ಆರೂವರೆ ದಶಕ ಚಿತ್ರರಂಗದಲ್ಲಿ ಕ್ರಿಯಾಶೀಲರಾಗಿದ್ದರು. ಐದು ಭಾಷೆಗಳಲ್ಲಿ 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ. 2019ರಲ್ಲಿ ಬಿಡುಗಡೆಯಾದ ಪುನೀತ್ ರಾಜ್‌ಕುಮಾರ್ ನಟನೆಯ 'ನಟಸಾರ್ವಭೌಮ' ಅವರು ನಟಿಸಿದ ಕೊನೆಯ ಚಿತ್ರ. ಮಂಗಳವಾರ ಬೆಳಗ್ಗೆ 11.30ಕ್ಕೆ ಅವರ ಹುಟ್ಟೂರು ಚನ್ನಪಟ್ಟಣ ತಾಲೂಕಿನ ದಶಾವರದಲ್ಲಿ ಅಂತ್ಯಕ್ರಿಯೆ ನಡೆಸಲಾಗುತ್ತದೆ ಎಂದು ಪುತ್ರ ಗೌತಮ್ ತಿಳಿಸಿದ್ದಾರೆ. → 11

ವಿಶೇಷ ಪುಟಗಳು ▸▸ 4, 5

ನ್ಯಾಷನಲ್ ಹೆರಾಲ್ಡ್ ಪ್ರಕರಣ: 29ಕ್ಕೆ ಆದೇಶ

ದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣ ಕುರಿತು ಸೋನಿಯಾ, ರಾಹುಲ್ ಗಾಂಧಿ ಹಾಗೂ ಉಳಿದ ಐವರ ವಿರುದ್ಧದ ಹಣ ವರ್ಗಾವಣೆ ಆರೋಪವನ್ನು ಪರಿಗಣಿಸಬೇಕೆ ಎಂಬ ಕುರಿತು ದೆಹಲಿ ನ್ಯಾಯಾಲಯ ತೀರ್ಪು ಕಾಯ್ದಿರಿಸಿದೆ. ಜು.29ರಂದು ಆದೇಶ ಪ್ರಕಟಿಸುವುದಾಗಿ ಭ್ರಷ್ಟಾಚಾರ ತಡೆ ಕಾಯ್ದೆಯಡಿ ರೂಪುಗೊಂಡಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶಾಲ್ ಗೋಗ್ನೆ ತಿಳಿಸಿದ್ದಾರೆ.

ಧರೆಯತ್ತ ಶುಭಾಂಶು ಶುಕ್ಲಾ ಮರು ಪಯಣ

ದೆಹಲಿ: ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಆ್ಯಕ್ಸಿಯಂ-4 ಕಾರ್ಯಕ್ರಮದ ಭಾಗವಾಗಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದ ಇತರ ಮೂವರು ಭೂಮಿಯತ್ತ ಸೋಮವಾರ ಪ್ರಯಾಣ ಆರಂಭಿಸಿದ್ದಾರೆ. ಐಎಸ್‌ಎಸ್‌ನಿಂದ 22 ಗಂಟೆಗಳ ಪ್ರಯಾಣದ ಬಳಿಕ, ಮಂಗಳವಾರ ಮಧ್ಯಾಹ್ನ 3.01ಕ್ಕೆ ಕ್ಯಾಲಿಫೋರ್ನಿಯಾದ ಕರಾವಳಿಯಲ್ಲಿ ಇಳಿಯಲಿದ್ದಾರೆ.

ಪೊಲೀಸ್ ಸಮವಸ್ತ್ರದಲ್ಲಿ ನಾಸೀರ್ ಪರಾರಿಗೆ ಸಂಚು

ಬಾಂಗ್ಲಾದೇಶಕ್ಕೆ ಓಡಿಹೋಗಲು ಸಂಚು ಹಾಕಿದ್ದ ಉಗ್ರ ನಾಸೀರ್ | ಎನ್‌ಐಎ ತನಿಖೆಯಲ್ಲಿ ಸ್ಫೋಟಕ ಅಂಶ ಬಹಿರಂಗ

- ಪೊಲೀಸ್ ಸಮವಸ್ತ್ರ ಖರೀದಿಗೆ ಎಎಸ್‌ಐ ಚಾನ್ ಪಾಷ ಸಹಾಯ
- ಕೋರ್ಟ್‌ಗೆ ಕರೆತರುವ ವೇಳೆ ಸ್ಫೋಟಿಸಿ ಪೊಲೀಸರಿಂದ ತಪ್ಪಿಸಿಕೊಳ್ಳುವ ಸಂಚು
- ನಾಸೀರ್‌ನ ಕೋರ್ಟ್‌ಗೆ ಕರೆತರಲು ವಯಸ್ಸಾದ ಪೊಲೀಸರ ನೇಮಕ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಉಗ್ರ ಟಿ.ನಾಸೀರ್‌ನನ್ನು ನ್ಯಾಯಾಲಯಕ್ಕೆ ಕರೆತರುವಾಗ ಸ್ಫೋಟಿಸಿ ಪೊಲೀಸರ ಕೈಯಿಂದ ತಪ್ಪಿಸಿಕೊಂಡು ಹೋಗುವಂತೆ ಸಂಚು ರೂಪಿಸಲಾಗಿತ್ತು. ನಾಸೀರ್ ಪೊಲೀಸರ ಕೈಯಿಂದ ತಪ್ಪಿಸಿಕೊಂಡ ಬಳಿಕ, ಆತನನ್ನು ಬಾಂಗ್ಲಾದೇಶಕ್ಕೆ ಕಳುಹಿಸಲು ಆರೋಪಿಗಳು ನಿರ್ಧರಿಸಿದ್ದರು ಎಂದು ಎನ್‌ಐಎ ವಿಚಾರಣೆ ತಿಳಿದುಬಂದಿದೆ.

ಉಗ್ರ ನಾಸೀರ್‌ಗೆ ಪೊಲೀಸ್ ಸಮವಸ್ತ್ರ ಧರಿಸಿ ಕರೆದುಕೊಂಡು ಹೋಗಬೇಕು ಎಂದು ಪ್ಲಾನ್ ಮಾಡಲಾಗಿತ್ತು. ಈ ಸಂಬಂಧ ಆರೋಪಿಗಳು 10 ಜತೆ ಪೊಲೀಸ್ ಸಮವಸ್ತ್ರ ಖರೀದಿ ಮಾಡಿದ್ದರು. ಸದ್ಯ ಹತ್ತೂ ಜತೆ ಪೊಲೀಸ್ ಸಮವಸ್ತ್ರಗಳನ್ನು ಎನ್‌ಐಎ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಪೊಲೀಸ್ ಸಮವಸ್ತ್ರ ಖರೀದಿಗೆ ಎಎಸ್‌ಐ ಚಾನ್ ಪಾಷ ಸಹಾಯ ಮಾಡಿದ್ದನು. ಎಎಸ್‌ಐ ಚಾನ್ ಪಾಷಾ ಸೂಚನೆ ಮೇರೆಗೆ ಉಳಿದ ಆರೋಪಿಗಳು ಶಿವಾಜಿನಗರದಲ್ಲಿ ಪೊಲೀಸ್ ಸಮವಸ್ತ್ರ ಖರೀದಿ ಮಾಡಿದ್ದರು.

ಎಎಸ್‌ಐ ಚಾನ್ ಪಾಷ ಟಿ.ನಾಸೀರ್‌ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಲು ಸಿಬ್ಬಂದಿಗಳನ್ನು ನಿಯೋಜನೆ ಮಾಡಿದ್ದನು. ನಾಸೀರ್‌ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಲು ವಯಸ್ಸಾಗಿರುವ ಮತ್ತು ಶಕ್ತಿ ಇಲ್ಲದವರನ್ನು ನೇಮಕ ಮಾಡಿದ್ದನು. ನಂತರ ದಾರಿ ನಡುವೆ ಸ್ಫೋಟಿಸಿ, ಪೊಲೀಸ್ ಸಮವಸ್ತ್ರದಲ್ಲಿ ನಾಸೀರ್‌ನನ್ನು ಪರಾರಿ ಮಾಡಿಸುವುದು ಇವರ ಯೋಜನೆಯಾಗಿತ್ತು. ನಂತರ ಕೇರಳಕ್ಕೆ ಕರೆದುಕೊಂಡು ಹೋಗಿ, ಅಲ್ಲಿಂದ ಸಮುದ್ರ ಮಾರ್ಗವಾಗಿ ಪಶ್ಚಿಮ ಬಂಗಾಳಕ್ಕೆ, ಇಲ್ಲಿಂದ ಬಾಂಗ್ಲಾದೇಶಕ್ಕೆ ಕರೆದುಕೊಂಡು ಹೋಗುವ ಪ್ಲಾನ್ ಆರೋಪಿಗಳು ರೂಪಿಸಿದ್ದರು ಎಂಬುದು ತನಿಖೆ ವೇಳೆ ಬಯಲಾಗಿದೆ.

ತಲೆ ಮರೆಸಿಕೊಂಡಿರುವ ಜುನೈದ್ ಮತ್ತು ಈತನ ತಾಯಿ ಫಾತಿಮಾ ತಡರಾತ್ರಿ ಫೋನ್‌ನಲ್ಲಿ ಗಂಟೆಗಟ್ಟಲೇ ಮಾತನಾಡುತ್ತಿದ್ದರು ಎಂಬವುದು ತನಿಖೆ ವೇಳೆ ಗೊತ್ತಾಗಿದೆ. ದಕ್ಷಿಣ ಭಾರತದಲ್ಲಿ ನಡೆದ ಸರಣಿ ಸ್ಫೋಟ ಪ್ರಕರಣಗಳ ಉಗ್ರ ಜುನೈದ್ ಸದ್ಯ ಗಲ್ಫ್‌ನಲ್ಲಿ ತಲೆಮರೆಸಿಕೊಂಡಿದ್ದಾನೆ. ಈತನಿಗಾಗಿ ಎನ್‌ಐಎ ಅಧಿಕಾರಿಗಳು ಹುಡುಕಾಟ ನಡೆಸಿದ್ದಾರೆ. ಇದರ ನಡುವೆ ಜೈಲಿನಲ್ಲಿರುವ ಉಗ್ರ ನಾಸಿರ್‌ಗೆ ಸಹಾಯ ಮಾಡುತ್ತಿದ್ದ ಮೂವರನ್ನು ಎನ್‌ಐಎ ಬಂಧಿಸಿದೆ. ಡಾ.ನಾಗರಾಜ್, ಎಎಸ್‌ಐ ಚಾನ್ ಪಾಷಾ, ಜುನೈದ್ ತಾಯಿ ಫಾತಿಮಾಳನ್ನು ಬಂಧಿಸಲಾಗಿದೆ. ಆರು ದಿನಗಳ ಹಿಂದೆ ಫಾತಿಮಾ ಮನೆ ಮೇಲೆ ದಾಳಿ ಮಾಡಿದ್ದಾಗ ಅಲ್ಲಿ ಸಿಕ್ಕ ಮೊಬೈಲ್ ಫೋನ್, ಹಣ, ಕಾಗದ ಪತ್ರಗಳನ್ನು ಎನ್‌ಐಎ ವಶಕ್ಕೆ ಪಡೆದಿದೆ. ವಶ ಪಡಿಸಿಕೊಂಡ ಮೊಬೈಲ್ ಸಿಡಿಆರ್ ತೆಗೆಸಿದ್ದ ಎನ್‌ಐಎಗೆ ಮಾಹಿತಿ ಸಿಕ್ಕಿದೆ.

ಫಾತಿಮಾ ಪುತ್ರ ಜುನೈದ್‌ನ ಜತೆಗೆ ತಡರಾತ್ರಿ ಎರಡು ಗಂಟೆ ಸುಮಾರಿಗೆ ಕರೆ ಮಾಡಿ ಸುಮಾರು 40 ನಿಮಿಷ ಮಾತನಾಡಿದ್ದಾಳೆ. ಜುನೈದ್ ಹೇಳುತ್ತಿದ್ದ ಪ್ಲಾನ್‌ಗಳನ್ನು ಫಾತಿಮಾ ಎಎಸ್‌ಐ ಚಾನ್ ಪಾಷಾನಿಗೆ ಹೇಳುತ್ತಿದ್ದಳು. ಚಾನ್ ಪಾಷಾ, ವೈದ್ಯ ನಾಗರಾಜ್ ಮೂಲಕ ನಾಸಿರ್‌ಗೆ ತಿಳಿಸುತ್ತಿದ್ದನು. ಈ ಮಾಹಿತಿ ನಾಸಿರ್‌ಗೆ ತಿಳಿಸಲು ಲಕ್ಷ ಲಕ್ಷ ಹಣವನ್ನು ಚಾನ್ ಪಾಷಾ ಮತ್ತು ನಾಗರಾಜ್ ಪಡೆದಿದ್ದರು ಎಂಬುವುದು ತನಿಖೆ ವೇಳೆ ಗೊತ್ತಾಗಿದೆ.

ಬಂಧಿತರಿಗೆ ಉಗ್ರರ ನಡುವೆ ನಿಕಟ ಸಂಪರ್ಕ

ಎನ್‌ಐಎ ಬಂಧನದಲ್ಲಿರುವ ಮೂವರಿಗೆ ಮಂಗಳೂರಿನ ಕುಕ್ಕರ್ ಬಾಂಬ್, ಶಿವಮೊಗ್ಗದಲ್ಲಿ ಉಗ್ರ ಚಟುವಟಿಕೆ, ರಾಮೇಶ್ವರಂ ಕೆಫೆ ಸ್ಫೋಟ ಸೇರಿದಂತೆ ದಕ್ಷಿಣ ಭಾರತದಲ್ಲಿ ಸಂಭವಿಸಿದ ಹಲವು ಸ್ಫೋಟಗಳ ಮಾಸ್ಟರ್ ಮೈಂಡ್ ನಾಸೀರ್ ಜತೆ ಪ್ರಬಲವಾದ ಸಂಪರ್ಕ ಇತ್ತು ಎಂಬುದು ತಿಳಿದುಬಂದಿದೆ. ಜೈಲಿನಲ್ಲಿದ್ದುಕೊಂಡೇ ಉಗ್ರ ಚಟುವಟಿಕೆಗಳ ಬಗ್ಗೆ ನಾಸೀರ್ ಸಂಚು ಹೂಡುತ್ತಿದ್ದ. ಜೈಲಿನಿಂದಲೇ ಯುವಕರ ತಂಡ ತಯಾರು ಮಾಡುತ್ತಿದ್ದ. ದಕ್ಷಿಣ ಭಾರತದಲ್ಲಿ ನಡೆದ ಹಲವು ಸ್ಫೋಟಗಳ ಮಾಸ್ಟರ್ ಮೈಂಡ್ ಈತನಾಗಿದ್ದು, ಹಲವು ಪ್ರಕರಣಗಳಲ್ಲಿ ಈತನ ಕೈವಾಡವಿದೆ.

ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಸ್ತರಣೆ

ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಲಷ್ಕರೆ ತೊಯ್ಬಾ (ಎಲ್ಇಟಿ) ಉಗ್ರ ನಾಸಿರ್‌ಗೆ ಸಹಾಯ ಮಾಡುತ್ತಿದ್ದ ಮೂವರು ಆರೋಪಿಗಳನ್ನು ರಾಷ್ಟ್ರೀಯ ತನಿಖಾ ದಳ ವಿಶೇಷ ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ಹೊರಡಿಸಿದೆ. ಆರು ದಿನ ಕಸ್ಟಡಿ ವಿಚಾರಣೆ ಸೋಮವಾರ (ಜು.14) ಮುಗಿದ ಹಿನ್ನೆಲೆಯಲ್ಲಿ ಎನ್‌ಐಎ ಆರೋಪಿಗಳಾದ ಅನೀಸ್ ಫಾತಿಮಾ, ಎಎಸ್‌ಐ ಚಾನ್ ಪಾಷಾ ಮತ್ತು ವೈದ್ಯ ನಾಗರಾಜ್‌ನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿತ್ತು. ನ್ಯಾಯಲಯ ಆರೋಪಿಗಳನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸಮಾಚಾರ ಸಣ್ಣದಲ್ಲ

ಕೊಳವೆ ಬಾವಿಗಳಿಗೆ ಬೀಳುವುದನ್ನು ತಡೆಗಟ್ಟಿ

ಬೆಂಗಳೂರು: ವಿಫಲ ಕೊಳವೆಬಾವಿಗಳಿಗೆ ಅಪ್ರಾಪ್ತ ಮಕ್ಕಳು ಬೀಳುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು ಅವಶ್ಯವಾಗಿದೆ ಎಂದು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದ್ದಾರೆ. ಈ ಕುರಿತ ಪ್ರಕಟಣೆ ಹೊರಡಿಸಿರುವ ಅವರು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಕೊಳವೆಬಾವಿಗಳಿಗೆ ಮಕ್ಕಳು ಬೀಳುತ್ತಿರುವ ಘಟನೆಗಳನ್ನು ತಡೆಗಟ್ಟುವ ಕ್ರಮಗಳ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು 2010 ರ ನವೆಂಬರ್‌ನಲ್ಲಿ ಸಮಗ್ರ ಮಾರ್ಗಸೂಚಿ ಹೊರಡಿಸಿದ್ದು, ಇಂತಹ ಘಟನೆಗಳು ಮರುಕಳಿಸುತ್ತಿರುವುದರಿಂದ ನ್ಯಾಯಾಲಯದ ಮಾರ್ಗಸೂಚಿಗಳಂತೆ ಕೆಲವೊಂದು ಕ್ರಮಗಳನ್ನು ತಕ್ಷಣ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಅತ್ಯಗತ್ತವಾಗಿರುತ್ತದೆ. ವಿಫಲವಾದ ಕೊಳವೆ ಬಾವಿಗಳಿಗೆ ಬೀಳುವುದನ್ನು ತಡೆಯುವ ನಿಟ್ಟಿನಲ್ಲಿ ವಿಫಲವಾದ ಕೊಳವೆಬಾವಿಗಳಿಗೆ ವೈಜ್ಞಾನಿಕವಾಗಿ ಕಲ್ಲು ಮತ್ತು ಕಾಂಕ್ರೀಟ್‌ನಿಂದ ಮುಚ್ಚುವುದು. ಕೊಳವೆಬಾವಿ ಕೊರೆಯುವ ಸಂದರ್ಭದಲ್ಲಿ ಅಥವಾ ರಿಪೇರಿ, ನಿರ್ವಹಣೆಯ ಸಂದರ್ಭದಲ್ಲಿ ಅವುಗಳ ಸುತ್ತಲೂ ರಕ್ಷಣಾತ್ಮಕ ತಡೆಗೋಡೆ ನಿರ್ಮಿಸಿ, ಎಚ್ಚರಿಕೆ ಚಿಹ್ನೆ ಹಾಕುವಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ಸೂಚಿಸುವುದು. ಕೊಳವೆಬಾವಿ ಮುಚ್ಚದೇ ಇದ್ದರೆ, ಸಂಬಂಧಪಟ್ಟ ಭೂಮಾಲೀಕರನ್ನು ಮತ್ತು ಆ ಕೊರೆದ ಸಂಸ್ಥೆಯನ್ನು ಮುಂದಿನ ಆಗು-ಹೋಗುಗಳಿಗೆ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ತಾಯಿ, ಮಗಳು ನೇಣಿಗೆ ಶರಣು

ಬೆಂಗಳೂರು: ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಕಂಡ ತಾಯಿಯೊಬ್ಬಳು ತನ್ನ ಗಂಡನಿಗೆ ಕರೆ ಮಾಡಿ ತಾನೂ ಆತ್ಮಹತ್ಯೆ ಮಾಡಿಕೊಳ್ತೀನಿ ಅಂತ ಹೇಳಿ ನೇಣಿಗೆ ಶರಣಾಗಿರುವ ಘಟನೆ ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ನಾಗಗೊಂಡನಹಳ್ಳಿಯಲ್ಲಿ ನಡೆದಿದೆ. ನನ್ನ ಸಾವಿಗೆ ನಾನೇ ಕಾರಣ ಅಂತ ಡೆತ್ ನೋಟ್ ಬರೆದ ಶ್ರೀಜಾ ರೆಡ್ಡಿ (24) ಆತ್ಮಹತ್ಯೆ ಮಾಡಿಕೊಂಡಿದ್ದಳು. ಮಗಳ ಆತ್ಮಹತ್ಯೆ ನೋಡಿ ಪತಿಗೆ ಫೋನ್ ಮಾಡಿದ್ದ ತಾಯಿ ರಕ್ಷಿತಾ (48) ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನನಗೂ ಬದುಕಲು ಇಷ್ಟವಿಲ್ಲ ಎಂದು ಕರೆ ಕಟ್ ಮಾಡಿ, ಮಗಳ ಮೃತದೇಹವವನ್ನು ಕೆಳಗಿಳಿಸಿ ಅದೇ ಫ್ಯಾನ್‌ಗೆ ನೇಣು ಬಿಗಿದುಕೊಂಡು ಸಾವನ್ನಪಿದ್ದಾರೆ. ಶ್ರೀಜಾ ರೆಡ್ಡಿ ಖಾಸಗಿ ಕಂಪನಿಯಲ್ಲಿ ಡೇಟಾ ಅನಾಲಿಸ್ಟ್ ಆಗಿ ಕೆಲಸ ನಿರ್ವಹಿಸ್ತಿದ್ದಳು. ಖಿನ್ನತೆಗೆ ಒಳಗಾಗಿದ್ದಳು ಎಂದು ತಿಳಿದು ಬಂದಿದೆ.

ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ಸಭೆ

ಬೆಂಗಳೂರು: ನಗರದ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಆ.15ರಂದು ನಡೆಯುವ ರಾಜ್ಯಮಟ್ಟದ 78ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದ ಪೂರ್ವಭಾವಿ ಸಿದ್ಧತೆಗಳ ಸಭೆ ಸೋಮವಾರ ನಗರ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಜಗದೀಶ ಮಾತನಾಡಿ ಮೈದಾನದ ಸ್ವಚ್ಛತೆ, ಆಸನಗಳು, ಶೌಚಾಲಯ, ವೇದಿಕೆ ಅಲಂಕಾರ, ಧ್ವನಿವರ್ಧಕ ಮತ್ತು ಶಾಮಿಯಾನಗಳ ಸಮರ್ಪಕ ವ್ಯವಸ್ಥೆ ಮಾಡಬೇಕು. ಕಾರ್ಯಕ್ರಮದಲ್ಲಿ ಮೈದಾನದ ಸುತ್ತ ವಿದ್ಯುತ್ ಸರಬರಾಜು, ಪ್ರಥಮ ಚಿಕಿತ್ಸೆಗೆ ಆಂಬ್ಯುಲೆನ್ಸ್ ವ್ಯವಸ್ಥೆ ಜತೆಗೆ ಅಗತ್ಯ ಔಷಧಿ ಹಾಗೂ ಸ್ಟಾಫ್ ನರ್ಸ್ ಸಿಬ್ಬಂದಿ ನಿಯೋಜಿಸಿ, ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿ ಒದಗಿಸಬೇಕು. ಸಂಬಂಧಿಸಿದ ಇಲಾಖೆಗಳು ಯಾವುದೇ ಲೋಪ ಬಾರದಂತೆ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಬೇಕು ಎಂದು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾರ್ಯಕ್ರಮಕ್ಕೆ ಪ್ರವೇಶ, ವಾಹನ ನಿಲುಗಡೆ, ಅಗ್ನಿ ಶಾಮಕ ವ್ಯವಸ್ಥೆ ಹಾಗೂ ಮೈದಾನದ ಸುತ್ತ ಸಿಸಿ ಕ್ಯಾಮರಾಗಳ ಅಳವಡಿಕೆಗೆ ಪ್ರಥಮ ಆದ್ಯತೆ ನೀಡುವದರ ಜತೆಗೆ ಮಾಧ್ಯಮ ಪ್ರತಿನಿಧಿಗಳಿಗೆ ಕೇವಲ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪ್ರವೇಶ ಪತ್ರ ವಿತರಿಸಬೇಕು. ಮತ್ತು ಮಾಧ್ಯಮ ಗ್ಯಾಲರಿಯಲ್ಲಿ ಮಾಧ್ಯಮ ಪ್ರವೇಶ ಪತ್ರ ಪಡೆದ ಮಾಧ್ಯಮ ಪ್ರತಿನಿಧಿಗಳು ಮಾತ್ರ ಆಸೀನರಾಗುವಂತೆ ನೋಡಿಕೊಳ್ಳಲು ಪೊಲೀಸ್ ಸಿಬ್ಬಂದಿ ಸಹಕರಿಸಬೇಕು ಎಂದು ಸೂಚಿಸಿದರು.

ಕ್ವಾಂಟಮ್ ಹಬ್: 16ಕ್ಕೆ ಉನ್ನತಮಟ್ಟದ ಸಭೆ

ಬೆಂಗಳೂರು: ಕರ್ನಾಟಕ ರಾಜ್ಯವನ್ನು ದೇಶದ ಕ್ವಾಂಟಮ್ ಹಬ್ ಆಗಿ ರೂಪಿಸುವ ನಿಟ್ಟಿನಲ್ಲಿ ಸರಕಾರ ಮುಂದಾಗಿದ್ದು, ರೋಡ್ ಮ್ಯಾಪ್ ತಯಾರಿಸುವ ನಿಟ್ಟಿನಲ್ಲಿ ಸಚಿವರಾದ ಎಂ.ಬಿ ಪಾಟೀಲ್, ಪ್ರಿಯಾಂಕ ಖರ್ಗೆ ಹಾಗೂ ಸುಧಾಕರ್ ಉಪಸ್ಥಿತಿಯಲ್ಲಿ ಉನ್ನತಮಟ್ಟದ ಸಭೆ ಜುಲೈ 16 ರಂದು ಆಯೋಜಿಸಲಾಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಭೋಸರಾಜು ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕರ್ನಾಟಕ ರಾಜ್ಯ ಈಗಾಗಲೇ ಕ್ವಾಂಟಮ್ ಕ್ಷೇತ್ರದ ಅಭಿವೃದ್ಧಿಯಲ್ಲಿ ತನ್ನದೇ ಆದ ವಿಶೇಷ ಛಾಪನ್ನು ಮೂಡಿಸಿದೆ. ದೇಶದಲ್ಲೇ ಪ್ರಪ್ರಥಮವಾಗಿ ವಿಶ್ವದ ಪ್ರತಿಷ್ಠಿತ ವೈಜ್ಞಾನಿಕ ಸಂಶೋಧನಾ ಸಂಸ್ಥೆಯಾಗಿರುವ ಐಐಎಸ್‌ಸಿಯಲ್ಲಿ ಕ್ವಾಂಟಮ್ ರಿಸರ್ಚ್ ಪಾರ್ಕನ್ನು ಸ್ಥಾಪಿಸಲಾಗಿದೆ. ಅದರ ಎರಡನೇ ಹಂತದ ಅಭಿವೃದ್ಧಿಗಾಗಿ 48 ಕೋಟಿ ರು. ನೀಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಕರ್ನಾಟಕ ರಾಜ್ಯ ಅದರಲ್ಲೂ ಬೆಂಗಳೂರು ನಗರ ಕ್ವಾಂಟಮ್ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿರುವಂತಹ ವಾತಾವರಣ ಹೊಂದಿದೆ. ನಗರದಲ್ಲಿರುವ ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳು, ಕೈಗಾರಿಕೆಗಳನ್ನು ಸರಿಯಾದ ರೀತಿಯಲ್ಲಿ ತೊಡಗಿಸಿಕೊಳ್ಳುವುದರಿಂದ ವಿಶ್ವ ಭೂಪಟದಲ್ಲಿ ಕ್ವಾಂಟಮ್ ಕ್ಷೇತ್ರದ ಹಬ್ ಆಗಿ ರೂಪಿಸಬಹುದಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ದೇಶದಲ್ಲೇ ಮೊದಲ ಬಾರಿಗೆ ಕ್ವಾಂಟಮ್ ಸಮ್ಮೇಳನ ಆಯೋಜಿಸಲಾಗಿದೆ ಎಂದಿದ್ದಾರೆ.

ಈ ಸಭೆಯಲ್ಲಿ ಕ್ವಾಂಟಮ್ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವಂತಹ ಪ್ರಮುಖ ಕಂಪನಿಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕ್ವಾಂಟಮ್ ಕಂಪ್ಯೂಟಿಂಗ್, ಕ್ವಾಂಟಮ್ ಸಂವಹನ, ಕ್ವಾಂಟಮ್ ಸೆನ್ಸಿಂಗ್ ಮುಂತಾದ ಕ್ಷೇತ್ರಗಳಲ್ಲಿ ಸಂಶೋಧನೆ ಹಾಗೂ ಸ್ಟಾರ್ಟ್ ಅಪ್‌ಗಳನ್ನು ಉತ್ತೇಜಿಸಲು ರಾಜ್ಯ ಸರಕಾರ ಬದ್ಧವಾಗಿದೆ. ಈ ಸಭೆಯಲ್ಲಿ ಕ್ವಾಂಟಮ್ ಆಕ್ಷನ್ ಪ್ಲಾನ್ ರೂಪಿಸಲು, ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ನೀತಿ ನಿಯಮಗಳನ್ನು ರೂಪಿಸಲು, ಮಾನವ ಸಂಪನ್ಮೂಲದ ಕೌಶಲ್ಯಾಭಿವೃದ್ಧಿಗೆ ಅಗತ್ಯವಿರುವಂತಹ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಚರ್ಚೆಗಳು ನಡೆಯಲಿವೆ ಎಂದು ಸಚಿವರು ತಿಳಿಸಿದ್ದಾರೆ.

> **ರಾಜ್ಯದಲ್ಲಿ ಕ್ವಾಂಟಮ್ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಿಸುವ ದೃಷ್ಟಿಯಿಂದ ರಾಜ್ಯ ಸರಕಾರ ಅಗತ್ಯ ತಯಾರಿ ಮಾಡಿಕೊಳ್ಳಬೇಕಾಗಿದೆ. ಈ ಹಿನ್ನಲೆಯಲ್ಲಿ ಕೈಗಾರಿಕಾ ಸಚಿವರು, ಐಟಿಬಿಟಿ ಸಚಿವರು, ಉನ್ನತ ಶಿಕ್ಷಣ ಸಚಿವರು ಹಾಗೂ ಆಯಾ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಜುಲೈ 16 ರಂದು ಸಭೆ ಆಯೋಜಿಸಲಾಗಿದೆ.**
> -ಎನ್.ಎಸ್.ಭೋಸರಾಜು ಸಚಿವ

CHANGE OF NAME

I, **ABDULSAB JAMAKHANDAR** (Old Name) F.No.202, JSJ Opal Appartment BHEL Officers Layout, Jayanagar 4th Cross, Near SRK Garden, Jayanagar,Bangalore have changed my name and shall hereafter be known as **ABDULSAB MOULASAB JAMAKHANDAR** (New Name) for all purpose Vide affidavit sworn before notary Venkatesh S. Naik at Dharwad on 14/07/2025.

ವಿರಾಮ
ಪ್ರತಿ ಭಾನುವಾರ

CHANGE OF NAME

I, **Nasreen Bano Ghosh, D/o Shamim,** R/o No.37/2, Fortune Galaxy Apartment, Flat No.003, Hutchins Road, Cooke Town, Bangalore-560084 have changed my name to **Nasreen Bano** vide affidavit dt: 10.07.2025 sworn before Notary L.Gopalakrishna, Bangalore

ಮಾನ್ಯ ಎರಡನೇ ಅಪರ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಕನಕಪುರ, ಕನಕಪುರ ಟೌನ್
ಕ್ರಿಮಿನಲ್ ಮಿಸ್ ಸಂಖ್ಯೆ: 174/2025

ಅರ್ಜಿದಾರರು: ಶ್ರೀ ಗೋಪಾಲ ಬಿನ್ ಲೇಟ್ ಮರಿಯಪ್ಪ @ ಚಿಕ್ಕಮರಿಯಪ್ಪ ವಯಸ್ಸು ಸುಮಾರು 49 ವರ್ಷ 2. ಶ್ರೀ ಪುಟ್ಟರಾಜು ಬಿನ್ ಲೇಟ್ ಮರಿಯಪ್ಪ @ ಚಿಕ್ಕಮರಿಯಪ್ಪ ವಯಸ್ಸು ಸುಮಾರು 54 ವರ್ಷ 3. ಶ್ರೀ. ರಮೇಶ್ ಬಿನ್ ಲೇಟ್ ಮರಿಯಪ್ಪ @ ಚಿಕ್ಕಮರಿಯಪ್ಪ ವಯಸ್ಸು ಸುಮಾರು 46 ವರ್ಷ 4. ಶ್ರೀಮತಿ ಮಂಜುಳ ಬಿನ್ ಲೇಟ್ ಮರಿಯಪ್ಪ @ಚಿಕ್ಕಮರಿಯಪ್ಪ ಕೋಂ ಶಿವರಾಜು ವಯಸ್ಸು ಸುಮಾರು 39 ವರ್ಷ. ಅರ್ಜಿದಾರರೆಲ್ಲರ ವಿಳಾಸ ತೊಪ್ಪಗನ ಹಳ್ಳಿ ಗ್ರಾಮ, ತುಂಗಣಿ ಅಂಚೆ, ಕಸಬ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ-562117

ವಿರುದ್ಧ

ಎದುರುದಾರರು: 1. ತಹಶಿಲ್ದಾರ್ ಕನಕಪುರ ತಾಲ್ಲೂಕು. ಕನಕಪುರ-562117. 2. ಗ್ರಾಮ ಲೆಕ್ಕಾಧಿಕಾರಿ ತುಂಗಣಿ ವೃತ್ತ, ತುಂಗಣಿ, ಕಸಬ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ -562117.

ಪತ್ರಿಕಾ ಪ್ರಕಟಣೆಗಾಗಿ

ಮೇಲ್ಕಂಡ ಅರ್ಜಿದಾರರು ಲೇಟ್ ಶ್ರೀ ಚಿಕ್ಕಮರಿಯಪ್ಪ ಬಿನ್ ಲೇಟ್ ಶ್ರೀ ಹೊನ್ನೇಗೌಡ ರವರು ದಿನಾಂಕ 14/12/2021 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು. ಕಸಬ ಹೋಬಳಿ, ತುಂಗಣಿ ಅಂಚೆ, ತೊಪ್ಪಗನಹಳ್ಳಿ ಗ್ರಾಮದಲ್ಲಿ ಮೃತರಾಗಿದ್ದು ಅವರ ಮರಣ ಪ್ರಮಾಣಪತ್ರವನ್ನು ಪಡೆಯುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾರಿಗಾದರೂ ಹಿತಾಸಕ್ತಿ ಇದ್ದಲ್ಲಿ ಅವರು ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಸದರಿ ಅರ್ಜಿಯು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ: 14/8/2025 ರಂದು ಮುಂದಿನ ಸುನಾವಣೆಗಾಗಿ ಮುಂದೂಡಲ್ಪಟ್ಟಿರುತ್ತದೆ. ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಏಕಪಕ್ಷೀಯ ಆದೇಶ ಹೊರಡಿಸುತ್ತದೆ.
ದಿನಾಂಕ: 14/7/2025 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದ ಮೇರೆಗೆ
ಶಿರಸ್ತೆದಾರರು
ಎರಡನೇ ಅಪರ ಸಿವಿಲ್ ನಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಕನಕಪುರ

ವಾದಿಗಳ ಪರ ವಕೀಲರು.
ಗಿರೀಶ.ಎಸ್.ಎಸ್, ವಕೀಲರು
ಕನಕಪುರ
ದಿನಾಂಕ: 14/07/2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ. 168/2025

ಅರ್ಜಿದಾರರು: ಶ್ರೀ ಸೋಮಾನಾಯ್ಕ ಬಿನ್ ಲೇಟ್ ಬಾಲು ನಾಯ್ಕ ವಯಸ್ಸು 57 ವರ್ಷ ವಾಸ: ಕರಡಿದೊಡ್ಡಿ ಗ್ರಾಮ ತೇರುಬೀದಿ ಅಂಚೆ. ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ, 2. ಗ್ರಾಮ ಲೆಕ್ಕಾಧಿಕಾರಿಗಳು, ತೇರುಬೀದಿ ವೃತ್ತ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1 ರಿಂದ 5ನೇ ಅರ್ಜಿದಾರರ ತಂದೆ, 8ನೇ ಅರ್ಜಿದಾರರ ಭಾವ, 6,7 ಮತ್ತು 16ನೇ ಅರ್ಜಿದಾರರ ಸಹೋದರ, ಮತ್ತು 9 ರಿಂದ 15ನೇ ಅರ್ಜಿದಾರರ ಚಿಕ್ಕಪ್ಪನವರಾದ ಶ್ರೀ. ಬಾಲು ನಾಯ್ಕ ಬಿನ್ ಲೇಟ್ ಲಚ್ಮಾ ನಾಯ್ಕ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಕರಡಿದೊಡ್ಡಿ ಗ್ರಾಮದಲ್ಲಿ ದಿನಾಂಕ:14.03.1979 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು. ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 22/08/2025. ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
2025 ಜುಲೈ 10 ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶೀರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಕೆ. ಎಸ್. ಸ್ವಾಮಿ ವಕೀಲರು, ಕನಕಪುರ,
ಕನಕಪುರ
ದಿನಾಂಕ: 10/7/2025

PUBLIC NOTICE

Public are informed that my client Uppala Ravi, intends to Purchase the property bearing Southern portion of Site No. 02, E-Katha No. 150200102900725256 and property No. 6/83/2/2, Katha No. 83/2/2, measuring East to West 60 feet and North to South 20 Sq. ft. totally measuring 1200 Sq. ft. formed in Happy Homes, RD Reddy Layout, situated at Margondanahlli Village, Jigani Hobli, Anekal Taluk, Bengaluru Urban District, Bengaluru and bounded on the :-

East by :: Road
West by :: Private Property
North by :: Remaining portion of Site No. 2
South by :: Property bearing Site No. 3

from its owner Mule Konda Reddy and informing general public that Uppala Ravi intent to mortgage the said property in favour of M/s PIRAMAL FINANCE LIMITED, hence any person/s firm, company, institution or organization has any claim over the said property may lodge their objections in writing within 07 days from this day to the under mentioned Advocate.

K. S. Ravi
ADVOCATE
OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789

ಮುಜರಾಯಿ ಸುಪರ್ದಿಗೆ ಗಾಳಿ ಆಂಜನೇಯಸ್ವಾಮಿ ದೇಗುಲ

ಇಲಾಖೆ ಕ್ರಮ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ದೇಗುಲ ಟ್ರಸ್ಟ್ | ಇಂದು ವಿಚಾರಣೆ ಸಾಧ್ಯತೆ

ಬೆಂಗಳೂರು: ನಗರದ ಮೈಸೂರು ರಸ್ತೆಯಲ್ಲಿನ ಗಾಳಿ ಆಂಜನೇಯಸ್ವಾಮಿ ದೇವಾಲಯವನ್ನು ಮುಜರಾಯಿ ಇಲಾಖೆ ತನ್ನ ಸುಪರ್ದಿಗೆ ತೆಗೆದುಕೊಂಡ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸಬೇಕು ಎಂದು ವಕೀಲ ಪಿ.ಪ್ರಸನ್ನ ಕುಮಾರ್ ಅವರು ನ್ಯಾಯಮೂರ್ತಿ ಸುನಿಲ್ ದತ್ತ ಯಾದವ್ ಅವರಿದ್ದ ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಪೀಠ ಮಂಗಳವಾರ ವಿಚಾರಣೆಗೆ ಪರಿಗಣಿಸುವುದಾಗಿ ತಿಳಿಸಿದೆ.

ದೇವಾಲಯ ಅವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಿರುವುದು, ಹಣ ದುರುಪಯೋಗ ಮಾಡಿಕೊಂಡಿರುವುದು ಹಾಗೂ ಟ್ರಸ್ಟ್ ನಿರ್ವಹಣೆಯಲ್ಲಿ ಪಾರದರ್ಶಕತೆ ಇಲ್ಲದಿರುವ ಆರೋಪಗಳು ಕೇಳಿಬಂದ ಕಾರಣ ಧಾರ್ಮಿಕ ದತ್ತಿ ಇಲಾಖೆಯು ದೇವಾಲಯವನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತ್ತು. ಅಲ್ಲದೆ, ದೇವಾಲಯವನ್ನು 'ಘೋಷಿತ ಸಂಸ್ಥೆ' ಎಂದು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ದತ್ತಿ ಇಲಾಖೆ ಆದೇಶ ಹೊರಡಿಸಿತ್ತು.

ದೇವಾಲಯದ ಹುಂಡಿ ವರ್ಗಾವಣೆಯ ಸಂದರ್ಭ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ದೇವಾಲಯದ ಸಿಬ್ಬಂದಿಯಿಂದಲೇ ಕಳ್ಳತನವಾಗಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ದೇವಾಲಯದಲ್ಲಿ ಆಡಳಿತ ನಿರ್ವಹಣೆ ಅವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಾಗಾಗಿ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 42 ಮತ್ತು 43ರನ್ವಯ ಸರಕಾರದ ವಶಕ್ಕೆ ಪಡೆಯುವ ಸಂಬಂಧ ಸ್ಪಷ್ಟ ಅಭಿಪ್ರಾಯದ ವರದಿ ಸಲ್ಲಿಸುವಂತೆ ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು 2024ರ ಅಕ್ಟೋಬರ್ 1ರಂದು ಜಿಲ್ಲಾಧಿಕಾರಿಗೆ ಸೂಚಿಸಿದ್ದರು. ಅದರಂತೆ, ಅಪರ ಜಿಲ್ಲಾಧಿಕಾರಿ ಮತ್ತು ಉಪ ಆಯುಕ್ತರು 2025ರ ಏಪ್ರಿಲ್ 25ರಂದು ಪ್ರಸ್ತಾಪಿತ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮದಂತೆ ಘೋಷಿತ ಸಂಸ್ಥೆಯನ್ನಾಗಿ ಘೋಷಿಸಿ ಸರಕಾರದ ವಶಕ್ಕೆ ಪಡೆಯುವ ವಿಚಾರದ ಬಗ್ಗೆ ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರಿಗೆ ಸಲ್ಲಿಸಿದ್ದರು.

ಹೊಂದಾಣಿಕೆ ಕೊರತೆಯಿಂದ ಮುಜರಾಯಿ ಸುಪರ್ದಿಗೆ

ವಿಚಾರಣಾ ವರದಿಯಲ್ಲಿ ದೇವಾಲಯದ ಟ್ರಸ್ಟ್‌ನ ಪದಾಧಿಕಾರಿಗೆ ಹೊಂದಾಣಿಕೆ ಇಲ್ಲದೇ ಇರುವುದು ಹಾಗೂ ದೇವಾಲಯಕ್ಕೆ ಲಕ್ಷಾಂತರ ರುಪಾಯಿ ಆದಾಯ ಬರುತ್ತಿರುವುದು ಹಾಗು ಪ್ರತಿ ವರ್ಷ ಉಳಿತಾಯವಿಲ್ಲದೇ ವೆಚ್ಚ ಮಾಡುತ್ತಿರುವುದು ಸ್ಪಷ್ಟವಾಗಿ ಕಂಡುಬಂದಿದೆ. ಅಲ್ಲದೇ ಆದಾಯ, ವೆಚ್ಚಕ್ಕೆ ಸಂಬಂಧಿಸಿದಂತೆ ಕಳೆದ 25 ವರ್ಷಗಳಿಂದ ಯಾವುದೇ ದಾಖಲೆಗಳನ್ನೂ ಇಡದೆ, ಸಹಾಯಕ ಆಯುಕ್ತ, ಮುಜರಾಯಿ ಇಲಾಖೆ ನೋಟಿಸ್ ನೀಡಿದ ಬಳಿಕ ದಾಖಲೆಗಳನ್ನು ಸೃಷ್ಟಿಸಿರುವುದು ಕಂಡುಬಂದಿದೆ ಎಂದು ತಿಳಿಸಿದ್ದ ಇಲಾಖೆ, ದೇವಾಲಯವನ್ನು ತನ್ನ ಸುಪರ್ದಿಗೆ ಪಡೆದುಕೊಂಡಿತ್ತು. ಇದನ್ನು ಪ್ರಶ್ನಿಸಿ ಇದೀಗ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಡೆಲಿವರಿ ಬಾಯ್ ಮೇಲೆ ಮೂವರಿಂದ ಹಲ್ಲೆ

ಬೆಂಗಳೂರು: ರಸ್ತೆ ಸಿಗ್ನಲ್‌ನಲ್ಲಿ ದಾರಿ ಬಿಡಲಿಲ್ಲ ಎಂದು ಫುಡ್ ಡೆಲಿವರಿ ಬಾಯ್ ಮೇಲೆ ಹಲ್ಲೆ ಮಾಡಿರುವ ಘಟನೆ ಭಾನುವಾರ ರಾತ್ರಿ, ಬಸವೇಶ್ವರನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮೋದಿ ಆಸ್ಪತ್ರೆ ಸಿಗ್ನಲ್ ಬಳಿ ನಡೆದಿದ್ದು, ಪೀಮ್ರಾಮ್ ಎಂಬಾತನ ಮೇಲೆ ಮೂವರು ದುಷ್ಕರ್ಮಿಗಳು ಹಲ್ಲೆ ಮಾಡಿದ್ದಾರೆ.

ರಾಜಸ್ಥಾನ ಮೂಲದ ಪೀಮ್ರಾಮ್ ನಗರದಲ್ಲಿ ಫುಡ್ ಡೆಲಿವರಿ ಎಕ್ಸಿಕ್ಯೂಟಿವ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ. ಭಾನುವಾರ ರಾತ್ರಿ, ಮೋದಿ ಆಸ್ಪತ್ರೆ ಬಳಿ ರೆಡ್ ಸಿಗ್ನಲ್ ಇದ್ದಾಗ ಬೈಕ್ ನಿಲ್ಲಿಸಿದ್ದ. ಈ ವೇಳೆ, ಹಿಂಬದಿಯಿಂದ ಬೈಕ್‌ನಲ್ಲಿ ಬಂದಿದ್ದ ಮೂವರು, ದಾರಿ ಬಿಡು ನಾವು ಹೋಗುತ್ತೇವೆ ಎಂದಿದ್ದಾರೆ. ಗ್ರೀನ್ ಸಿಗ್ನಲ್ ಬರಲಿ ಮುಂದೆ ಹೋಗುತ್ತೇನೆ ಎಂದು ಪೀಮ್ರಾಮ್ ಉತ್ತರಿಸಿದ್ದ. ಅಷ್ಟಕ್ಕೆ ಸಿಟ್ಟಿಗೆದ್ದ ಆರೋಪಿಗಳು ಪೀಮ್ರಾಮ್‌ನ ಮೇಲೆ ಹಲ್ಲೆ ಮಾಡಿದ್ದಾರೆ. ಆರೋಪಿಗಳ ಕೃತ್ಯದಿಂದ ಪೀಮ್ರಾಮ್‌ನ ಮುಖ, ತಲೆಗೆ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಪೀಮ್ರಾಮ್ ನೀಡಿರುವ ದೂರಿನ ಅನ್ವಯ ಬಸವೇಶ್ವರ ನಗರ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದ್ದು, ಘಟನಾ ಸ್ಥಳದ ಸಿಸಿಟಿವಿ ದೃಶ್ಯಗಳನ್ನ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೊರಾಮಿ ಕೃತಿ ಬಿಡುಗಡೆ ಇಂದು

ಬೆಂಗಳೂರು: ಲೇಖಕಿ ಭೂಮಿಕಾ.ಆರ್ ಅವರ ಜೊರಾಮಿ ಕೃತಿ ಬಿಡುಗಡೆ ಮತ್ತು ಸಂವಾದ ಸಮಾರಂಭ ಮಂಗಳವಾರ ಬೆಳಗ್ಗೆ 11.30ಕ್ಕೆ ನಗರದ ಪ್ರೆಸ್‌ಕ್ಲಬ್‌ನಲ್ಲಿ ನಡೆಯಲಿದೆ. ಮಾಲ್ಸಾಮ್ಮಿ ಜೇಕಬ್ ಅವರ ಇಂಗ್ಲಿಷ್‌ನಿಂದ ಅನುವಾದಿಸಿರುವ ಮಿಜೋರಾಂ ಪ್ರಾಂತದ ಬದುಕಿನ ತಲ್ಲಣ ಬಿಂಬಿಸುವ ಜೊರಾಮಿ ಕೃತಿಯನ್ನು ಹೊಸತು ಗೌರವ ಸಂಪಾದಕ ಡಾ.ಜಿ.ರಾಮಕೃಷ್ಣ ಲೋಕಾರ್ಪಣೆ ಮಾಡಲಿದ್ದಾರೆ. ಹೊಸತು ಸಂಪಾದಕ ಡಾ.ಸಿದ್ದನಗೌಡ ಪಾಟೀಲ, ನಿವೃತ್ತ ಇಂಗ್ಲಿಷ್ ಉಪನ್ಯಾಸಕಿ ಶೈಲಜ ಉಪಸ್ಥಿತರಿರುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

OLA ELECTRIC
OLA Electric Mobility Limited
(formerly known as OLA Electric Mobility Private Limited)
CIN: L74999KA2017PLC099619
Registered Office: Wing C, Prestige RMZ Startech, Hosur Road, Municipal Ward No.67, Municipal No. 140 Koramangala VI Bk, Bangalore - 560095, Bangalore South, Karnataka, India. **Tel:** 080-35440050, **Email Id:** companysecretary@olaelectric.com

STATEMENT OF UNAUDITED STANDALONE AND CONSOLIDATED FINANCIAL RESULTS FOR THE FIRST QUARTER ENDED JUNE 30, 2025

The Unaudited Standalone and Consolidated Financial Results for the First Quarter ended June 30, 2025 have been reviewed by the Audit Committee and approved by Board of Directors at their meetings held on July 14, 2025.
The full format of the First Quarter ended June 30, 2025 financial results are available on the Stock Exchange websites www.nseindia.com and www.bseindia.com and company website https://www.olaelectric.com/investor-relations/financials and can be accessed by scanning the QR code.

For Ola Electric Mobility Limited

Sd/-
Bhavish Aggarwal
Chairman and Managing Director
(DIN: 03287473)

Place: Bangalore
Date: July 14, 2025

CONCEPT

ಮಾರಕಾಸ್ತ್ರಗಳಿಂದ ಹಲ್ಲೆ

ಬೆಂಗಳೂರು: ಎಣ್ಣೆ ಪಾರ್ಟಿಯಲ್ಲಿ ಜತೆಗೂಡಿದ ಸ್ನೇಹಿತರು ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹೊಡೆದು ಗಂಭೀರವಾಗಿ ಹಲ್ಲೆ ಮಾಡಿರುವ ಘಟನೆ ನಗರದಲ್ಲಿ ನಡೆದಿದೆ. ಜುಲೈ 11ರಂದು ರಾತ್ರಿ, ಚಾಮರಾಜಪೇಟೆ ಠಾಣೆ ವ್ಯಾಪ್ತಿಯ ರುದ್ರಪ್ಪ ಗಾರ್ಡನ್‌ನಲ್ಲಿ ಘಟನೆ ನಡೆದಿದ್ದು, ದುಷ್ಕರ್ಮಿಗಳ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿರುವ ತೇಜಸ್ (24) ಎಂಬಾತನನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆಟೋ ಚಾಲಕನಾಗಿದ್ದ ತೇಜಸ್, ಶುಕ್ರವಾರ ರಾತ್ರಿ ಕೆಲಸ ಮುಗಿದ ಬಳಿಕ ಸ್ನೇಹಿತ ಸಂತೋಷ್ ಜತೆ ರುದ್ರಪ್ಪ ಗಾರ್ಡನ್‌ನಲ್ಲಿರುವ ಮಂಜು ಬಾರ್‌ಗೆ ತೆರಳಿದ್ದ. ಇಬ್ಬರೂ ಪಾರ್ಟಿ ಮಾಡುತ್ತಿದ್ದಾಗ ಸಂತೋಷ್‌ನ ಸ್ನೇಹಿತರಾದ ರಾಹುಲ್, ಪ್ರಜ್ವಲ್ ಹಾಗೂ ಅಭಿಷೇಕ್ ಬಾರ್‌ಗೆ ಬಂದಿದ್ದರು. ಒಟ್ಟಿಗೆ ಕುಳಿತಿದ್ದಾಗ ಕ್ಷುಲ್ಲಕ ಕಾರಣಕ್ಕೆ ಸಂತೋಷ್ ಹಾಗೂ ರಾಹುಲ್, ಪ್ರಜ್ವಲ್, ಅಭಿಷೇಕ್‌ನ ನಡುವೆ ಜಗಳ ಆರಂಭವಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಈ ವೇಳೆ ಸಂತೋಷ್‌ನ ಪರವಾಗಿ ತೇಜಸ್ ಮಾತನಾಡಿದ್ದ. ಜಗಳ ಅತಿರೇಕಕ್ಕೆ ತಿರುಗಿದಾಗ ಇಲ್ಲೇ ಇರು ಬರುತ್ತೇವೆ ಎಂದು ಆರೋಪಿಗಳು ಹೊರ ಹೋಗಿದ್ದರು. ಇತ್ತ ಸಂತೋಷ್ ಹಾಗೂ ತೇಜಸ್ ಪಾರ್ಟಿ ಮುಗಿಸಿ ಹೊರಡಲು ಸಿದ್ಧವಾಗುತ್ತಿದ್ದಂತೆ ಮಾರಕಾಸ್ತ್ರಗಳ ಸಮೇತ ಬಂದಿದ್ದ ಆರೋಪಿಗಳು ತೇಜಸ್ನನ್ನ ಅಟ್ಟಾಡಿಸಿ ಮಾರಕಾಸ್ತ್ರಗಳಿಂದ ಹಲ್ಲೆ ಎಸಗಿದ್ದಾರೆ. ಹಲ್ಲೆಯಿಂದಾಗಿ ತೇಜಸ್‌ನ ಕಾಲು ಭಾಗಶಃ ತುಂಡಾಗಿದ್ದು, ಕುತ್ತಿಗೆ ಹಿಂಭಾಗಕ್ಕೂ ತೀವ್ರ ಗಾಯವಾಗಿದೆ. ರಕ್ತದ ಮಡುವಿನಲ್ಲಿ ನರಳಾಡುತ್ತಿದ್ದವನನ್ನ ಸ್ಥಳೀಯರ ನೆರವಿನೊಂದಿಗೆ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ. ತೇಜಸ್‌ನ ಸಹೋದರ ನೀಡಿರುವ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡಿರುವ ಚಾಮರಾಜಪೇಟೆ ಠಾಣೆ ಪೊಲೀಸರು ಓರ್ವ ಆರೋಪಿಯನ್ನ ಬಂಧಿಸಿದ್ದು, ಇನ್ನಿಬ್ಬರಿಗಾಗಿ ಹುಡುಕಾಟ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ.

ಹಿಟ್ ಅಂಡ್ ರನ್: ಸ್ಥಳದಲ್ಲೇ ಇಬ್ಬರ ಸಾವು

ಬೆಂಗಳೂರು: ಉಪನಗರ ವರ್ತುಲ ರಸ್ತೆಯಲ್ಲಿ ಹಿಟ್ ಅಂಡ್ ರನ್ ನಡೆದಿದೆ. ಬೈಕ್ ಸವಾರನಿಗೆ ಕಾರು ಡಿಕ್ಕಿ ಹೊಡೆದು, ಸುಮಾರು 100 ಮೀಟರ್‌ವರೆಗೆ ಬೈಕ್ ಎಳೆದುಕೊಂಡು ಹೋಗಿದೆ. ಭೀಕರ ಅಪಘಾತದಲ್ಲಿ ಬೈಕ್ ಸವಾರರಿಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದ ಭಯಾನಕ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಬೆಂಗಳೂರು ಗ್ರಾಮಾಂತರ ದೇವನಹಳ್ಳಿಯ ವಿಶ್ವನಾಥಪುರ ಗ್ರಾಮದ ಬಳಿ ಜುಲೈ 13ರ ಭಾನುವಾರ ಘಟನೆ ನಡೆದಿದ್ದು, ಘಟನೆಯಲ್ಲಿ ಆಂಧ್ರ ಮೂಲದ ಇಬ್ಬರು ಸಾವನ್ನಪ್ಪಿದ್ದಾರೆ. ಮೃತ ಯುವಕರು ಬುಲೆಟ್‌ನಲ್ಲಿ ದೇವನಹಳ್ಳಿ ಕಡೆಯಿಂದ ದೊಡ್ಡಬಳ್ಳಾಪುರ ಕಡೆಗೆ ಹೋಗುತ್ತಿದ್ದರು. ಈ ವೇಳೆ ಹಿಂದಿನಿಂದ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದು, 100 ಮೀಟರ್‌ಗೂ ತಳ್ಳಿಕೊಂಡು ಹೋಗಿದೆ. ನಂತರ ಬೈಕ್ ಸೈಡಿಗೆ ಹೋಗುತ್ತಿದ್ದಂತೆ ಕಾರು ನಿಲ್ಲಿಸದೇ ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ.

ಯುವಕರು ಹೆಲ್ಮೆಟ್ ಧರಿಸಿದರೂ ಕೂಡ ಅಪಘಾತದ ರಭಸಕ್ಕೆ ಬೈಕ್‌ನಲ್ಲಿದ್ದ ಯುವಕರು ಸಾವನ್ನಪ್ಪಿದ್ದಾರೆ. ಅಪಘಾತದ ದೃಶ್ಯ ಹೆದ್ದಾರಿಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ವಿಶ್ವನಾಥಪುರದ ಪೊಲೀಸರು ಹಿಟ್ ಅಂಡ್ ರನ್ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಪಘಾತವಾದ ಕ್ಷಣದಲ್ಲಿ ಬೈಕ್ ಸವಾರನೊಬ್ಬ ಒನ್ ವೇಯಲ್ಲಿ ಎದುರಿಗೆ ಬರುತ್ತಿದ್ದ. ಆತ ಕೂದಳೆಯ ಅಂತರದಲ್ಲಿ ಅವಘಡದಿಂದ ಪಾರಾಗಿದ್ದಾನೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸಿಸಿ ಕ್ಯಾಮರಾ ದೃಶ್ಯದ ಆಧಾರದ ಮೇಲೆ ಆರೋಪಿ ಪತ್ತೆಗೆ ಮುಂದಾಗಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಿಎಂ ನೇತೃತ್ವದಲ್ಲಿ ಇಂದು ಮಹತ್ವದ ಸಭೆ

ಬೆಂಗಳೂರು: ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಬೆಳವಣಿಗೆ ಎಂದು ಪರಿಗಣಿಸಲಾಗಿರುವ ಹಿಂದುಳಿದ ವರ್ಗಗಳ ಪ್ರಮುಖ ನಾಯಕರ ಸಭೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಇಂದಿನಿಂದ ಬೆಂಗಳೂರಿನಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಲಿರುವ ಎಐಸಿಸಿ ಹಿಂದುಳಿದ ವರ್ಗಗಳ ಸಲಹಾ ಸಮಿತಿ ಸಭೆಯಲ್ಲಿ ಕಾಂಗ್ರೆಸ್‌ನ ಪ್ರಮುಖ ನಾಯಕರಾದ ಅಶೋಕ್ ಗೆಹ್ಲೋಟ್, ಭೂಪೇಶ್ ಬಘೇಲ. ಟಿ.ನಾರಾಯಣಸ್ವಾಮಿ, ಬಿ.ಕೆ.ಹರಿಪ್ರಸಾದ್, ಸಚಿನ್ ಪೈಲೆಟ್, ಕಮಲೇಶ್ವರ್ ಪಟೇಲ್, ಎಂ.ವೀರಪ್ಪ ಮೊಯ್ಲಿ ಸೇರಿದಂತೆ ಸುಮಾರು 24 ಮಂದಿ ಸಲಹಾ ಸಮಿತಿಯಲ್ಲಿದ್ದು, ಇಂದಿನಿಂದ ಸಭೆ ನಡೆಯಲಿದೆ. ದೇಶದಲ್ಲಿ ಕಳೆದ 11 ವರ್ಷಗಳಿಂದ ಹಿಂದುಳಿದ ವರ್ಗಗಳಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಇದೇ ವೇಳೆ ಪ್ರಸ್ತಾಪಿಸುವ ಸಾಧ್ಯತೆಗಳಿದ್ದು, ರಾಜಭವನದ ಆಡಳಿತ ವೈಖರಿ, ಹಿಂದುಳಿದ ವರ್ಗಗಳ ಧಮನಕಾರಿ ನಮನೀತಿ ಸೇರಿದಂತೆ ಹಲವು ವಿಚಾರಗಳು ಚರ್ಚೆಗೆ ಬರಲಿದೆ ಎನ್ನಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ವಿವಿಧ ರಾಜ್ಯಗಳ ಮಾಜಿ ಮುಖ್ಯಮಂತ್ರಿಗಳು, ಕೇಂದ್ರದ ಮಾಜಿ ಸಚಿವರುಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಜತೆಗೆ ವಿವಿಧ ರಾಜ್ಯಗಳ ಹಾಲಿ ಮತ್ತು ಮಾಜಿ ಸಚಿವರು, ಸಂಸದರು ಪಾಲ್ಗೊಳ್ಳಲಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಇಂದು ಸಂಜೆ 5 ಗಂಟೆಗೆ ಹಾಗೂ ಹೋಟೆಲ್ ಶಾಂಗ್ರಿಲಾದಲ್ಲಿ ನಾಳೆ ಬೆಳಗ್ಗೆ 10 ಗಂಟೆಗೆ ಸಭೆ ನಡೆಯಲಿದೆ.

ಬಾಕಿ ಬಿಲ್‌ಗಳಿಗೆ ಹಣ ಬಿಡುಗಡೆಗೊಳಿಸಿ

ಬೆಂಗಳೂರು: ಬಾಕಿ ಬಿಲ್‌ಗಳಿಗೆ ಹಣ ಪಾವತಿ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ.ನಂದಕುಮಾರ್ ನೇತೃತ್ವದಲ್ಲಿ, ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರರಾವ್ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ್ದಾರೆ. ಪಾಲಿಕೆ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ 2023ರ ಆಗಸ್ಟ್‌ನಿಂದ 2025ರ ಜೂನ್‌ವರೆಗೆ ಅಂದರೆ 23 ತಿಂಗಳುಗಳ ಬಿಲ್‌ಗಳಿಗೆ ಹಣ ಪಾವತಿಸಬೇಕಿದೆ. 12 ತಿಂಗಳ ಜನರಲ್ ಎಲ್‌ಒಸಿ ಬಿಡುಗಡೆ ಮಾಡಬೇಕಿದೆ. 1 ಕೋಟಿ ರು. ಮೇಲ್ಪಟ್ಟ ಕಾಮಗಾರಿಗಳಿಗೆ ಗುಣ ನಿಯಂತ್ರಣ ವಿಭಾಗದಿಂದ ಪಿಎಂಸಿ ನಿಯೋಜನೆ ಮಾಡುತ್ತಿದ್ದು, ಹಿಂದಿನ ಪದ್ಧತಿಯಂತೆ ಆಯಾ ಕಾರ್ಯಪಾಲಕ ಅಭಿಯಂತರ ಹಂತದಲ್ಲಿಯೇ ಟೆಂಡರ್ ಮೂಲಕ ಪಿಎಂಸಿ ನಿಗದಿಪಡಿಸಬೇಕೆಂದು ಮುಖ್ಯ ಆಯುಕ್ತರ ಗಮನಕ್ಕೆ ತಂದಿದ್ದೇವೆ. ಕೆಆರ್‌ಐಡಿಎಲ್ ಸಂಸ್ಥೆಯಿಂದ 6-7 ವರ್ಷಗಳ ಹಿಂದೆ ನಡೆಸಲಾಗಿರುವ ಕಾಮಗಾರಿಗಳಿಗೆ ತಡೆಹಿಡಿಯಲಾಗಿರುವ ಶೇ.25 ಬಾಕಿ ಬಿಲ್‌ನ ಮೊತ್ತ ಬಿಡಗಡೆ ಮಾಡಬೇಕು. ವಾರ್ಡ್ ವ್ಯಾಪ್ತಿಯ ಕಾಮಗಾರಿಗಳನ್ನು ವಿಭಾಗ ಮಟ್ಟದಲ್ಲಿ ಒಟ್ಟುಗೂಡಿಸಿ ಪ್ಯಾಕೇಜ್ ಮಾಡಿ ಟೆಂಡರ್ ಆಹ್ವಾನಿಸುತ್ತಿರುವ ಕಾರಣ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ. ಹಾಗಾಗಿ, ಪ್ಯಾಕೇಜ್ ಪದ್ಧತಿ ರದ್ದುಪಡಿಸಬೇಕು. ಬಾಕಿ ಇರುವ ಭದ್ರತಾ ಠೇವಣಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

ನಾಳೆ ಉದ್ಯಮಶೀಲತಾ ತಿಳಿವಳಿಕೆ ಶಿಬಿರ

ಬೆಂಗಳೂರು: ಒಂದು ದಿನದ ಉದ್ಯಮಶೀಲತಾ ತಿಳಿವಳಿಕೆ ಶಿಬಿರ ಬುಧವಾರ ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿರುವ ಜಿಟಿಟಿಸಿ ಕಟ್ಟಡದ ಡಾ.ಅಂಬೇಡ್ಕರ್ ಸಭಾಂಗಣದಲ್ಲಿ ನಡೆಯಲಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಿಡಾಕ್, ಜಿಲ್ಲಾ ಕೈಗಾರಿಕಾ ಕೇಂದ್ರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿರುವ ಶಿಬಿರದಲ್ಲಿ ಉದ್ಯಮಶೀಲತೆ ಪ್ರೇರಣೆ, ಸ್ವಂತ ಉದ್ಯಮ ಸ್ಥಾಪನೆಗಾಗಿ ಸರಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು, ಪ್ರೋತ್ಸಾಹ, ಯೋಜನೆಗಳ ಆಯ್ಕೆ, ಮುಂದೆ ಕೈಗೊಳ್ಳಲಾಗುವ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಬಗ್ಗೆ ಮಾಹಿತಿ ಹಾಗೂ ಇತರೆ ಕೈಗಾರಿಕಾ ವಿಷಯಗಳ ಕುರಿತು ಮಾಹಿತಿ ನೀಡಲಾಗುವುದು. ಆಸಕ್ತರು ಶಿಬಿದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಬಹುದು. ಭಾಗವಹಿಸು ವವರ ವಯಸ್ಸು ಕನಿಷ್ಠ 18 ವರ್ಷ ಮೇಲ್ಪಟ್ಟಿರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 9008175702 ಗೆ ಸಂಪರ್ಕಿಸಿ.

ತನಿಖಾ ವರದಿ ಸಲ್ಲಿಕೆಗೆ ಗಡುವು

ಬೆಂಗಳೂರು: ಹುಬ್ಬಳ್ಳಿಯಲ್ಲಿ ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ' ಎಂಬ ಆರೋಪದಡಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟ ವಲಸೆ ಕಾರ್ಮಿಕ ಪಾಟ್ನಾದ ರಿತೇಶ್ ಕುಮಾರ್ ಪ್ರಕರಣಕ್ಕೆ ಸಂಬಂಧಿಸಿದ ಈವರೆಗಿನ ತನಿಖಾ ವರದಿಯನ್ನು ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರಕಾರಕ್ಕೆ ಮೂರು ವಾರಗಳ ಗಡುವು ನೀಡಿದೆ.

ಸಾಂಕೇತಿಕವಾಗಿ 500ನೇ ಕೋಟಿಯ ಟಿಕೆಟ್ ವಿತರಿಸಿದ ಸಿಎಂ | ಶಕ್ತಿ ಯೋಜನೆಯಿಂದ ಹೆಚ್ಚಿದ ಮಹಿಳಾ ಪ್ರಯಾಣಿಕರು

ಶಕ್ತಿ ಯೋಜನೆ: 500 ಕೋಟಿ ಮಹಿಳೆಯರ ಪ್ರಯಾಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆ ಯಡಿ 500 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ ಸಂಭ್ರಮದ ಅಂಗವಾಗಿ ಸೋಮ ವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಂಕೇತಿಕವಾಗಿ 500ನೇ ಕೋಟಿಯ ಟಿಕೆಟ್ ವಿತರಿಸಿದರು.

ಶಕ್ತಿ ಯೋಜನೆಯಡಿ 500 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ ಸಂಭ್ರಮದ ಅಂಗ ವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಸಾಂಕೇತಿಕವಾಗಿ 500ನೇ ಕೋಟಿಯ ಟಿಕೆಟ್ ವಿತರಿಸಿ, 500 ನೇ ಕೋಟಿ ಶಕ್ತಿ ಟಿಕೆಟ್ ಪಡೆದ ಮಹಿಳೆಗೆ ಸನ್ಮಾನಿಸಿ, ಬಸ್ಸಿನಲ್ಲಿದ್ದ 30 ಮಹಿಳಾ ಪ್ರಯಾಣಿಕರಿಗೆ ಇಳಕಲ್ ಸೀರೆ ನೀಡಿ ಗೌರವಿಸಿದರು.

ಸಾವಯವ ರೊಟ್ಟಿ, ಹೋಳಿಗೆ ತಯಾರಿಸಿ ಶಕ್ತಿ ಯೋಜನೆಯ ಸಹಕಾರದಿಂದ ಬೆಂಗಳೂರಿನಲ್ಲಿ ಮಾರಾಟ ಮಾಡಿ ಲಕ್ಷಾಂತರ ರು. ವಹಿವಾಟು ನಡೆಸಿದ ವಿಜಯಪುರದ ಒಡಲ ಧ್ವನಿ ಸ್ತ್ರೀ ಸಂಘದ ವತಿಯಿಂದ ಸಿಎಂ ಸಿದ್ದರಾಮಯ್ಯಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ರೊಟ್ಟಿ ನೀಡಿ ಗೌರವ ಸಲ್ಲಿಸಿದರು. ನಗರದ ಪ್ರಮುಖ ಬಸ್ ನಿಲ್ದಾಣಗಳಲ್ಲಿ, ತಾಲೂಕು ಮತ್ತು ಜಿಲ್ಲೆಯ ಬಸ್ ನಿಲ್ದಾಣಗಳಲ್ಲಿ ಬಸ್ ಪೂಜೆ ನೆರವೇರಿಸಿ ಸಿಹಿ ಹಂಚಿ, ಮಹಿಳಾ ಪ್ರಯಾಣಿಕರಿಗೆ ಸ್ವಾಗತದ ರೂಪದಲ್ಲಿ ಗುಲಾಬಿ ಹೂಗಳ ವಿತರಣೆ ಮಾಡಲಾಯಿತು. ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ರೆಡ್ಡಿ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಉಪಸ್ಥಿತರಿದ್ದರು.

ಶಕ್ತಿ ಯೋಜನೆಯಡಿ 500 ಕೋಟಿ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ ಸಂಭ್ರಮದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಸಾಂಕೇತಿಕವಾಗಿ 500ನೇ ಕೋಟಿಯ ಟಿಕೆಟ್ ವಿತರಿಸಿ, 500 ನೇ ಕೋಟಿ ಶಕ್ತಿ ಟಿಕೆಟ್ ಪಡೆದ ಮಹಿಳೆಗೆ ಸನ್ಮಾನಿಸಿ, ಬಸ್ಸಿನಲ್ಲಿದ್ದ 30 ಮಹಿಳಾ ಪ್ರಯಾಣಿಕರಿಗೆ ಇಳಕಲ್ ಸೀರೆ ನೀಡಿ ಗೌರವಿಸಿದರು.

2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಘೋಷಿಸಲಾಗಿತ್ತು. ಸರಕಾರ ಅಸ್ತಿತ್ವಕ್ಕೆ ಬಂದ ತಕ್ಷಣ ಜಾರಿಗೊಳಿಸಲು ಸಚಿವ ಸಂಪುಟದಲ್ಲಿ ಕೈಗೊಂಡ ತೀರ್ಮಾನದಂತೆ ಜೂ.11 ರಂದು ಶಕ್ತಿ ಯೋಜನೆಗೆ ಚಾಲನೆ ನೀಡಲಾ ಯಿತು. ಅಂದಿನಿಂದ ರಾಜ್ಯದ ಮಹಿಳೆಯರಿಗೆ ಸರಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯವನ್ನ ಕಲ್ಪಿಸಲಾಗಿದೆ. ಈ ಯೋಜನೆಯು ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ಆರೋಗ್ಯ ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತಿ ದಿನ 1.17 ಕೋಟಿ ಜನ ಪ್ರಯಾಣ

ಶಕ್ತಿ ಯೋಜನೆಯು 2023ರ ಜೂ.11 ರಿಂದ ಜಾರಿಗೆ ಬಂದಿದ್ದು, 2 ವರ್ಷಗಳಲ್ಲಿ 500 ಕೋಟಿ ಮಹಿಳಾ ಪ್ರಯಾಣಿಕರ ಟ್ರಿಪ್ ತಲುಪುವ ಮುಖಾಂತರ ದೇಶದಲ್ಲೇ ಹೊಸ ಮೈಲಿಗಲ್ಲು ತಲುಪಿದೆ. ನಗರ, ಸಾಮಾನ್ಯ, ವೇಗದೂತ ಬಸ್ಸುಗಳಲ್ಲಿ ರಾಜ್ಯಾದ್ಯಂತ ರಾಜ್ಯದ ಎಲ್ಲಾ ಮಹಿಳೆಯರು, ವಿದ್ಯಾರ್ಥಿನಿಯರು, ಲಿಂಗತ್ವ ಅಲ್ಪಸಂಖ್ಯಾತ ಸೇರಿದಂತೆ ಇಲ್ಲಿಯವರೆಗೂ 12,669 ಕೋಟಿ ರು. ಮೌಲ್ಯದ ಮಹಿಳಾ ಟಿಕೆಟ್ ವಿತರಿಸಲಾಗಿದೆ. ಶಕ್ತಿ ಯೋಜನೆಗೆ ಮುನ್ನ ಸಾರಿಗೆ ಬಸ್ಸುಗಳಲ್ಲಿ ಪ್ರತಿ ದಿನ 85.84 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದರು, ಈಗ 1.17 ಕೋಟಿ ಜನರು ದಿನನಿತ್ಯ ಪ್ರಯಾಣಿಸುತ್ತಿದ್ದಾರೆ.

ಹೊಸ ಬಸ್‌ಗಳ ಸೇರ್ಪಡೆಗೆ ಅನುಮೋದನೆ

ಕಳೆದ ಎರಡು ವರ್ಷದಲ್ಲಿ 5800 ಹೊಸ ಬಸ್ಸುಗಳನ್ನು ಸಾರಿಗೆ ಇಲಾಖೆಗೆ ಸೇರ್ಪಡೆ ಮಾಡಲು ಅನುಮೋದನೆ ನೀಡಲಾಗಿದ್ದು, ಈಗಾಗಲೇ ನಾಲ್ಕು ನಿಗಮಗಳಲ್ಲಿ 5049 ಹೊಸ ಬಸ್ಸುಗಳ ಸೇರ್ಪಡೆಯಾಗಿದೆ. ಅದೇ ರೀತಿ 9 ಸಾವಿರ ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಲಾಗಿದ್ದು, 6700 ಹೊಸ ನೇಮಕಾತಿ ಮತ್ತು 1ಸಾವಿರ ಅನುಕಂಪದ ನೇಮಕಾತಿ ಪೂರ್ಣಗೊಳಿಸಲಾಗಿದೆ. ಒಟ್ಟು 10 ಸಾವಿರ ನೇಮಕಾತಿ ಸಾರಿಗೆ ನಿಗಮದಲ್ಲಿ ಕಳೆದ ಎರಡು ವರ್ಷದ ಅವಧಿಯಲ್ಲಿ ಚಾಲನೆ ದೊರಕಿದೆ.

ಜನಮನ ಸೇವಾ ಚಾರಿಟಬಲ್ ಟ್ರಸ್ಟ್ ಉದ್ಘಾಟನಾ ಸಮಾರಂಭದಲ್ಲಿ ಸಾಹಿತಿ ಹಡವನಹಳ್ಳಿ ವೀರಣ್ಣಗೌಡರ ಅವರಿಗೆ ಡಾ.ಎಚ್.ನರಸಿಂಹಯ್ಯ ರಾಜ್ಯಮಟ್ಟದ ಪುಸ್ತಕ ಪ್ರಶಸ್ತಿ, ಮಹಿಳಾ ವೀರಗಾಸೆ ಕಲಾವಿದೆ ಡಾ.ಶಿಲ್ಪಾ.ಎಂ ಮತ್ತು ಸಮಾಜ ಸೇವಕ ಡಿ.ಟಿ.ಕೃಷ್ಣೇಗೌಡ ಅವರಿಗೆ ಜನಮನ ಸೇವಾ ರತ್ನ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಜನಮನ ಸೇವಾ ಚಾರಿಟೇಬಲ್ ಟ್ರಸ್ಟ್ ಉದ್ಘಾಟನೆ

ಪರೋಪಕಾರಕ್ಕೆ ಬದುಕು ಮೀಸಲಿಡಿ

ಬೆಂಗಳೂರು: ನಮ್ಮ ಶರೀರ ಮತ್ತು ಬದುಕು ಇರುವುದು ಸ್ವಾರ್ಥಕ್ಕಲ್ಲ, ಅದು ಪರೋಪಕಾರಕ್ಕೆ ವಿನಿಯೋಗವಾಗಬೇಕು. ಎಲ್ಲರೂ ಸ್ವಾರ್ಥವನ್ನು ಬಿಟ್ಟು ಸ್ವಾವಲಂಬಿಗಳಾಗಿ ಬದುಕಬೇಕು ಎಂದು ಎಲೆರಾಂಪುರ ಕುಂಚಿಟಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಹನುಮಂತನಾಥ ಮಹಾಸ್ವಾಮೀಜಿ ಹೇಳಿದರು.

ನಗರದ ಗೋವಿಂದರಾಜನಗರದ ಡಾ.ಎಂ. ಚಿದಾನಂದಮೂರ್ತಿ ಸಭಾಂಗಣದಲ್ಲಿ ನಡೆದ ಜನಮನ ಚಾರಿಟೇಬಲ್ ಟ್ರಸ್ಟ್ ಉದ್ಘಾಟನೆ ಮತ್ತು ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಇಂದಿನ ಮಕ್ಕಳು ವಿದ್ಯಾವಂತರಾಗುವುದರ ಜತೆಗೆ ಸಂಸ್ಕಾರವಂತರಾಗಬೇಕು. ಅವರಿಗೆ ಮೌಲ್ಯಾಧಾರಿತ ಶಿಕ್ಷಣ ಕೊಡಿಸುವಂತಹ ಕೆಲಸವಾಗಬೇಕು ಎಂದು ಹೇಳಿದರು.

ವಿಶ್ವವಾಣಿ ದಿನಪತ್ರಿಕೆಯ ಸುದ್ದಿ ಸಂಪಾದಕ ನರೇಂದ್ರ ಪಾರೆಕಟ್ ಮಾತನಾಡಿ, ಚಾರಿಟಬಲ್ ಟ್ರಸ್ಟ್ ಸ್ಥಾಪನೆ ಮಾಡುವುದು ಮುಖ್ಯ ಅಲ್ಲ, ಅದರ ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಸದಾ ಸಕ್ರಿಯವಾಗಿಡುವುದು ಅತ್ಯಂತ ಅವಶ್ಯಕ. ಪ್ರತಿಯೊಬ್ಬ ನಾಗರಿಕರೂ ಜವಾಬ್ದಾರಿ ಅರಿತು ಸಾಮಾಜಿಕ ಸೇವೆಗೆ ಮುಂದಾಗುವುದನ್ನು ಕರ್ತವ್ಯವೆಂದೇ ಭಾವಿಸಬೇಕು. ಈ ನಿಟ್ಟಿನಲ್ಲಿ ಸದಾ ಸಂಘಟಿತರಾಗಿ ಇರುವುದು ಮುಖ್ಯ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಹಡವನಹಳ್ಳಿ ವೀರಣ್ಣಗೌಡರ ಅವರ ಉರಿವ ದೀಪದ ಕೆಳಗೆ ಕೃತಿಗೆ ಡಾ.ಎಚ್.ನರಸಿಂಹಯ್ಯ ರಾಜ್ಯಮಟ್ಟದ ಪುಸ್ತಕ ಪ್ರಶಸ್ತಿ, ಮಹಿಳಾ ವೀರಗಾಸೆ ಕಲಾವಿದೆ ಡಾ.ಶಿಲ್ಪಾ.ಎಂ ಮತ್ತು ಸಮಾಜ ಸೇವಕ ಡಿ.ಟಿ.ಕೃಷ್ಣೇಗೌಡ ಅವರಿಗೆ ಜನಮನ ಸೇವಾ ರತ್ನ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಚನ ಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಸಮಾಜಸೇವಕ ಕೆ.ಸಿ.ಸುರೇಶ್, ಟ್ರಸ್ಟ್ ಅಧ್ಯಕ್ಷ ಡಿ.ಟಿ.ಗೋವಿಂದರಾಜು ಮತ್ತು ಪತ್ರಕರ್ತ ಮಂಜುನಾಥ್ ದಂಡಿನಶಿವರ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿ ತಿಂಗಳು 5ರೊಳಗಾಗಿ ಗೌರವ ಧನ ಪಾವತಿಸಿ

ಬೆಂಗಳೂರು: ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುವ ಸಂಜೀವಿನಿ ಗ್ರಾ.ಪಂ ಮಟ್ಟದ ಒಕ್ಕೂಟಗಳ ಮಹಿಳೆಯರಿಗೆ ಪ್ರತಿ ತಿಂಗಳ 5ನೇ ತಾರೀಕಿನೊಳಗೆ ಕಡ್ಡಾಯವಾಗಿ ಗೌರವಧನ ಪಾವತಿಸಲು ಹಾಗೂ ಹಿಂದಿನ ಬಾಕಿ ಪಾವತಿಸಲು ಕ್ರಮವಹಿಸ ಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ನಿರ್ದೇಶಿಸಿದ್ದಾರೆ.

ತ್ಯಾಜ್ಯ ಉತ್ಪಾದಕರಿಂದ ಮಾಹೆಯಾನ ಪಡೆಯಬಹುದಾದ ಬಳಕೆದಾರರ ಶುಲ್ಕವನ್ನು ಸರಕಾರಿ ಆದೇಶದಲ್ಲಿ ವಿವರಿಸಿದಂತೆ ಸಂಗ್ರಹಿಸಲು ಅಗತ್ಯ ಕ್ರಮ ವಹಿಸಿ, ಸಂಗ್ರಹಿತ ಶುಲ್ಕವನ್ನು ತ್ಯಾಜ್ಯ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಬಳಸಬೇಕು, ಸಾಮಾಜಿಕ ಭದ್ರತಾ ದೃಷ್ಟಿಯಿಂದ ಘನ ತ್ಯಾಜ್ಯ ನಿರ್ವಹಣೆ ಮಾಡುತ್ತಿರುವ ಒಕ್ಕೂಟದ ಮಹಿಳೆಯರಿಗೆ ವಿಮಾ ಯೋಜನೆಗಳಡಿ ವಿಮೆ ಮಾಡಿಸಲು ಕ್ರಮ ವಹಿಸಬೇಕು. ಘನ ತ್ಯಾಜ್ಯ ನಿರ್ವಹಣೆಗಾಗಿ ಬಳಸಲಾಗುತ್ತಿರುವ ವಾಹನಗಳ ಪರವಾನಗಿ (ದಾಖಲಾತಿಗಳು, ವಿಮೆ) ಮತ್ತು ವಾಹನ ಚಾಲಕರ ಚಾಲನಾ ಪರವಾನಗಿ ದೃಢೀಕರಿಸಿಕೊಳ್ಳಲು ಅನುವು ಮಾಡಿಕೊಡಬೇಕು. ಪರವಾನಗಿ ಇಲ್ಲದ ವಾಹನಗಳಿಗೆ ತುರ್ತಾಗಿ ಪರವಾನಗಿ ಮಾಡಿಸಲು ಕ್ರಮ ವಹಿಸಬೇಕು. ಘನ ತ್ಯಾಜ್ಯ ನಿರ್ವಹಣೆಗಾಗಿ ಗ್ರಾ.ಪಂ ಸಂಜೀವಿನಿ ಗ್ರಾ.ಪಂ. ಮಟ್ಟದ ಒಕ್ಕೂಟಗಳ ಜತೆ ಮಾಡಿ ಕೊಳ್ಳಲಾದ ಒಡಂಬಡಿಕೆಯ ಅವಧಿ ಮುಕ್ತಾಯಗೊಂಡಿದ್ದಲ್ಲಿ ಒಡಂಬಡಿಕೆ ನವೀಕರಿಸಲು ಕ್ರಮ ವಹಿಸಬೇಕು ಎಂದು ಜಿ.ಪಂ. ಸಿಇಒಗಳಿಗೆ ಸೂಚಿಸಿದ್ದಾರೆ.

ನನ್ನ ಮೆಚ್ಚಿನ ಪುಸ್ತಕ ಕಾರ್ಯಕ್ರಮದಲ್ಲಿ ಹಿರಿಯ ಕವಿ ಸುಬ್ಬು ಹೊಲೆಯಾರ್ ಅಭಿಮತ

ಓದು ಮನುಷ್ಯನ ವ್ಯಕ್ತಿತ್ವ ರೂಪಿಸುತ್ತದೆ

ಬೆಂಗಳೂರು: ಓದು ಎಂಬುದು ಮನುಷ್ಯನ ವ್ಯಕ್ತಿತ್ವ ರೂಪಿಸುವಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತದೆ ಎಂದು ಹಿರಿಯ ಕವಿ ಸುಬ್ಬು ಹೊಲೆಯಾರ್ ಹೇಳಿದರು.

ಋತುಗಾನ ಫೌಂಡೇಶನ್ ಆಯೋಜಿಸಿದ್ದ ನನ್ನ ಮೆಚ್ಚಿನ ಪುಸ್ತಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಅವರ ಬರಹಗಳಲ್ಲಿ ಮನುಷ್ಯನ ಜೀವನಕ್ಕೆ ಹತ್ತಿರವಾದ ವಿಷಯಗಳು ಅಡಕವಾಗಿವೆ, ಈ ರೀತಿಯ ಬರಗಳ ಓದು ವ್ಯಕ್ತಿತ್ವ ರೂಪಿಸುವಲ್ಲಿ ಸಹಕಾರಿಯಾಗುತ್ತವೆ. ಸಾಕಷ್ಟು ಜನ ಎಲ್ಲ ಇಂದ್ರಿಯಗಳಿದ್ದೂ ವಿಕಲರೇ, ಅಂಥವರಿಗೆ ಒಳಗಣ್ಣು ಕಾಣುತ್ತಿರುವುದಿಲ್ಲ. ಅಂಥ ಒಳಗಣ್ಣ ತೆರೆಯಲು ಓದು ಜ್ಯೋತಿಯಾಗುತ್ತದೆ. ಒಳ್ಳೆಯ ಓದು ಬದುಕಿಗೆ ಅತ್ಯವಶ್ಯ. ಅದು ಜೀವನದಲ್ಲಿ ಉನ್ನತ ಮೌಲ್ಯ ರೂಡಿಸಿಕೊಳ್ಳಲು ಸಹಾಯ ಮಾಡಿತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ರೇಮಾಂಜಲಿ ಫೌಂಡೇಶನ್‌ನ ವಿಶಿಷ್ಟ ಚೇತನ ವಿದ್ಯಾರ್ಥಿಗಳು ತಮ್ಮ ಮೆಚ್ಚಿನ ಪುಸ್ತಕಗಳ ಕುರಿತು ಮಾತನಾಡಿದರು. ನರಸಪ್ಪ ಬಿಳಿಗೆರೆ ರವಿ ಬೆಳಗೆರೆ ಅವರ ಓ ಮನಸೇ ಕುರಿತು, ಚಂದ್ರಶೇಖರ ದೇವರಮನೆ ಎಸ್.ಎಲ್.ಭೈರಪ್ಪ ಅವರ ಧರ್ಮಶ್ರೀ ಕುರಿತು, ಮೆಹಬೂಬ್ ಸಾಬ್ ರವಿ ಬೆಳಗೆರೆ ಅವರ ಓ ಕನಸೇ ಕುರಿತು, ಸುಬ್ರಹ್ಮಣ್ಯ ಎಸ್.ಎಲ್.ಭೈರಪ್ಪ ಅವರ ಸಾರ್ಥ ಕುರಿತಂತೆ ತಮ್ಮ ವಿಚಾರ ಮಂಡಿಸಿದರು. ಕರುಣಾ ವೀರಕೆಂಪಯ್ಯ, ಹುಬ್ಬಳ್ಳಿಯ ಜಾಬಿನ್ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲ ಶಿವಪ್ರಕಾಶ್ ಹಿರೇಮಠ್, ಋತುಗಾನದ ಮುಖ್ಯಸ್ಥೆ ವಿಜಯಲಕ್ಷ್ಮಿ ಸತ್ಯಮೂರ್ತಿ ಉಪಸ್ಥಿತರಿದ್ದರು.

ಋತುಗಾನ ಫೌಂಡೇಶನ್ ಆಯೋಜಿಸಿದ್ದ ನನ್ನ ಮೆಚ್ಚಿನ ಪುಸ್ತಕ ಕಾರ್ಯಕ್ರಮವನ್ನು ಹಿರಿಯ ಕವಿ ಸುಬ್ಬು ಹೊಲೆಯಾರ್ ಉದ್ಘಾಟಿಸಿದರು. ಕರುಣಾ ವೀರಕೆಂಪಯ್ಯ, ಹುಬ್ಬಳ್ಳಿಯ ಜಾಬಿನ್ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲ ಶಿವಪ್ರಕಾಶ್ ಹಿರೇಮಠ್, ಋತುಗಾನದ ಮುಖ್ಯಸ್ಥೆ ವಿಜಯಲಕ್ಷ್ಮಿ ಸತ್ಯಮೂರ್ತಿ ಇದ್ದರು.

ಬ್ರಹ್ಮೋಸ್ ಮಹಾನಿರ್ದೇಶಕ ಡಾ.ಜಯತೀರ್ಥ ಜೋಶಿ ಕರೆ

ವಿದ್ಯೆಯನ್ನು ದೇಶದ ಅಭಿವೃದ್ಧಿಗೆ ಬಳಸಿ

ಬೆಂಗಳೂರು: ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು ಅದನ್ನು ದೇಶದ ಸೇವೆಗಾಗಿ ಹಾಗೂ ದೇಶದ ಅಭಿವೃದ್ಧಿಗಾಗಿ ಬಳಸಿಕೊಳ್ಳಬೇಕು. ಏಕೆಂದರೆ ಬ್ರಹ್ಮೋಸ್ ಮುಂತಾದ ತಂತ್ರಜ್ಞಾನ ಮೇಲಿನ ಹಂತಕ್ಕೆ ಕೊಂಡೊಯ್ಯುವ ಜವಾಬ್ದಾರಿ ವಿದ್ಯಾರ್ಥಿಗಳ ಕೈಯಲ್ಲಿದೆ ಎಂದು ಬ್ರಹ್ಮೋಸ್‌ನ ಮಹಾನಿರ್ದೇಶಕ ಡಾ.ಜಯತೀರ್ಥ.ಆರ್.ಜೋಶಿ ಹೇಳಿದರು.

ಬೇಸ್ ಸಂಸ್ಥೆಯಿಂದ ಪಿಯು ಬೋರ್ಡ್ ಪರೀಕ್ಷೆಯಲ್ಲಿ ಮೊದಲ 10 ರ‍್ಯಾಂಕ್‌ನಲ್ಲಿ 68 ವಿದ್ಯಾರ್ಥಿಗಳು, ಸಿಇಟಿಯಲ್ಲಿ 5 ಸಾವಿರ ರ‍್ಯಾಂಕ್ ಒಳಗೆ 492, ನೀಟ್‌ನಲ್ಲಿ 602 ವಿದ್ಯಾರ್ಥಿಗಳು, ಜೆಇಇ ಪರೀಕ್ಷೆಯಲ್ಲಿ 515 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

-ಅನಂತ ಕುಲಕರ್ಣಿ, ಬೇಸ್‌ನ ಸಿಇಒ

ಕಣನಕುಂಟೆ ಖೋಡೇ ಸಭಾಂಗಣದಲ್ಲಿ ಬೇಸ್ ಸಂಸ್ಥೆಯಿಂದ ನಡೆದ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಗ್ರಾಂಡ್ ಸ್ಲಾಮ್ ಕಾರ್ಯಕ್ರಮದಲ್ಲಿ ಮಾತನಾಡಿ, ಐಐಟಿ ಅಥವಾ ಮೆಡಿಕಲ್ ಗಾಗಿ ಅರ್ಹತೆ ಪಡೆದಿರುವ ವಿದ್ಯಾರ್ಥಿಗಳು ವಿನಯವಂತರಾಗಿ, ತಮ್ಮ ಗುರಿಯತ್ತ ಗಮನ ಹರಿಸಬೇಕು. ಉತ್ತಮ ಕ್ಯಾಂಪಸ್‌ಲ್ಲಿ ಸೀಟು ಪಡೆದು, ಅದೇ ಸಂತೋಷದಲ್ಲಿ ಮೈಮರೆತು 60 ಪ್ರತಿಶತ ವಿದ್ಯಾರ್ಥಿಗಳು ಮೊದಲ ವರ್ಷದಲ್ಲಿಯೇ ತೇರ್ಗಡೆ ಹೊಂದದೆ ಹೊರಬೀಳುತ್ತಿದ್ದಾರೆ. ಭಾರತದಲ್ಲಿ ಹುಟ್ಟಿ ಇಲ್ಲಿ ಶಿಕ್ಷಣ ಪಡೆದು, ವಿದೇಶಕ್ಕೆ ತೆರಳುವುದನ್ನು ಬಿಟ್ಟು, ತಮ್ಮ ಬುದ್ಧಿಶಕ್ತಿ, ಸಾಮರ್ಥ್ಯವನ್ನು ದೇಶದ ಅಭಿವೃದ್ಧಿಗೆ ಬಳಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೇಸ್‌ನ ರೂಟ್ 2.0 ಮ್ಯಾಗಝಿನ್ ಲೋಕಾರ್ಪಣೆ ಮಾಡಿಲಾಯಿತು. ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಹೃದ್ರೋಗ ತಜ್ಞ ಡಾ.ವಿವೇಕ ಜವಳಿ, ಬೇಸ್ ಮತ್ತು ಪ್ರಯೋಗದ ಸಂಸ್ಥಾಪಕ ಡಾ.ಎಚ್.ಎಸ್.ನಾಗರಾಜ, ಕೋಟಾದ ರೆಸೋನೆನ್ಸ್ ಎಡ್ವೆಂಚರ್ಸ್‌ನ ಸಂಸ್ಥಾಪಕ ಆರ್.ಕೆ.ವರ್ಮಾ ಉಪಸ್ಥಿತರಿದ್ದರು.

ಗ್ರಾಂಡ್ ಸ್ಲಾಮ್ ಸಮಾರಂಭವನ್ನು ಬ್ರಹ್ಮೋಸ್ ಮಹಾನಿರ್ದೇಶಕ ಡಾ.ಜಯತೀರ್ಥ ಜೋಶಿ ಉದ್ಘಾಟಿಸಿದರು. ಹೃದ್ರೋಗ ತಜ್ಞ ಡಾ.ವಿವೇಕ ಜವಳಿ, ಬೇಸ್ ಮತ್ತು ಪ್ರಯೋಗದ ಸಂಸ್ಥಾಪಕ ಡಾ.ಎಚ್.ಎಸ್.ನಾಗರಾಜ, ಕೋಟಾದ ರೆಸೋನೆನ್ಸ್ ಎಡ್ವೆಂಚರ್ಸ್‌ನ ಸಂಸ್ಥಾಪಕ ಆರ್.ಕೆ.ವರ್ಮಾ ಇದ್ದರು.

ಯೋಜನೆ ವಿರೋಧಿಸಿ ಬಿಜೆಪಿಯಿಂದ ಪ್ರತಿಭಟನೆ | ಸಂಸದ ತೇಜಸ್ವಿ ಸೂರ್ಯ ಎಚ್ಚರಿಕೆ

ಟನಲ್ ರಸ್ತೆಯು ಕಾಂಗ್ರೆಸ್ ಜೇಬು ತುಂಬಿಸುವ ಯೋಜನೆ

{ಪ್ರಹ್ಲಾದ ಜೋಶಿ} ಕೇಂದ್ರ ಸಚಿವ

ಸಿಎಂ ಕುರ್ಚಿ ಜಗಳದಲ್ಲಿ ಮುಳುಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿವೃದ್ಧಿ ಕಾರ್ಯಗಳೆಲ್ಲಿ ನೆನಪಿರುತ್ತವೆ? ಸದಾ ದೆಹಲಿ ನಾಯಕರ ಭೇಟಿ, ರಾಜಕೀಯ ಸಭೆ-ಸಮಾವೇಶಗಳಿಗೆ ತೆರಳಲು ಮಾತ್ರ ಸಮಯವಿರುತ್ತದೆ. ಅಭಿವೃದ್ಧಿಪರ ಸಮಾರಂಭಗಳಿಗೆ ಬರಲು ಸಿಎಂಗೆ ಸಮಯವೇ ಇರುವುದಿಲ್ಲ ಬಿಡಿ.

ಬೆಂಗಳೂರು: ಟನಲ್ ರಸ್ತೆಯ ಡಿಪಿಆರ್ ಕಾರ್ಯಸಾಧ್ಯತಾ ವರದಿಯಲ್ಲಿ ಸಮಸ್ಯೆ ಇದೆ. ಡಿಬಾರ್ ಆದ ಕನ್ಸಲ್ಟೆಂಟ್ಸ್ ನೇಮಿಸಿ ಈ ವರದಿ ಸಿದ್ಧಪಡಿಸಿದ್ದಾರೆ. ಇದು ಕಾಂಗ್ರೆಸ್ ಸರಕಾರದ ಜೇಬು ತುಂಬಿಸುವ ಯೋಜನೆ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಲ್ಟಿನೋಕ್ ಜತೆ ಜಂಟಿ ಉದ್ಯಮದಲ್ಲಿ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಿದ ಲಯನ್ ಕನ್ಸಲ್ಟೆಂಟ್ ಒಂದು ಗುಂಪಿನ ಕಂಪನಿಯು ಮಧ್ಯಪ್ರದೇಶದಲ್ಲಿ ಎನ್‌ಎಚ್‌ಎಐ ಯೋಜನೆಯಲ್ಲಿ ಕಪ್ಪುಪಟ್ಟಿಗೆ ಸೇರಿದೆ. ಡಿಪಿಆರ್ ರಚಿಸಿದ ರೋಡಿಕ್ ಕನ್ಸಲ್ಟೆಂಟ್ಸ್ ಜಮ್ಮು ಮತ್ತು ಕಾಶ್ಮೀರದಲ್ಲಿ 500 ಕೋಟಿ ರು. ಹಗರಣದಲ್ಲಿ ಭಾಗಿಯಾಗಿದೆ. ಡಿಪಿಆರ್‌ನಲ್ಲಿ ಬೆಂಗಳೂರಿನ ಮೆಟ್ರೋ ಯೋಜನೆ ಎಂದಿದೆ. ಬಿಬಿಎಂಪಿಯು 9.5 ಕೋಟಿ ಡಿಪಿಆರ್‌ಗೆ ಖರ್ಚು ಮಾಡಿದೆ. ಮೆಟ್ರೋ ಸಂಬಂಧಿಸಿದ ಯೋಜನೆಯನ್ನೇ ಕಟ್ ಆಂಡ್ ಪೇಸ್ಟ್ ಮಾಡಿ ಇದನ್ನು ತಯಾರಿಸಿದ್ದಾರೆ. ಭ್ರಷ್ಟಾಚಾರ ತಡೆಯಲು ಇಂಥ ದೊಡ್ಡ ಯೋಜನೆಯನ್ನು ಡಿಎಂಎಲ್‌ಟಿಎ ಕಾನೂನಿನಂತೆ ಮಾಡಲು ನಮ್ಮ ಸರಕಾರ ತಿಳಿಸಿತ್ತು. ಇವರು ಆ ಕಾನೂನು ಜಾರಿಯಲ್ಲಿದ್ದರೂ ಯೋಜನಾ ವರದಿ ಮಾಡಿ ಟೆಂಡರ್ ಕರೆಯಲು ಹೊರಟಿದ್ದಾರೆ. ಈ ಟನೆಲ್ ರಸ್ತೆ ಯೋಜನೆಯನ್ನು ಬಿಜೆಪಿ ವಿರೋಧಿಸುತ್ತದೆ.

ಬೆಂಗಳೂರು ಟನಲ್ ರಸ್ತೆ ಯೋಜನೆ ವಿರೋಧಿಸಿ ಸಂಸದ ತೇಜಸ್ವಿ ಸೂರ್ಯ ನಡೆಸಿದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ರಾಜ್ಯ ಕಾರ್ಯದರ್ಶಿ ಅಂಬಿಕಾ ಹುಲಿನಾಯ್ಕರ್, ಶಾಸಕ ಧೀರಜ್ ಮುನಿರಾಜು ಇದ್ದರು.

ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದು ಎರಡೂವರೆ ವರ್ಷವಾಗಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಅತಿ ಹೆಚ್ಚು ಅನ್ಯಾಯವಾದ ಪ್ರದೇಶ ಬೆಂಗಳೂರು. ರಾಜ್ಯಕ್ಕೆ ಅತಿ ಹೆಚ್ಚು ಆದಾಯ, ಸಂಪತ್ತು, ಶಕ್ತಿ ನೀಡುವ ನಗರ ಬೆಂಗಳೂರು ಆಗಿದ್ದರೂ ಇಲ್ಲಿನ ನಿವಾಸಿಗಳ ಜೀವನ, ಇಲ್ಲಿನ ಜನರ ಜೀವನದ ಗುಣಮಟ್ಟ ಬಹಳ ಕುಸಿದಿದೆ. ಬೆಂಗಳೂರನ್ನು ಅವರ ರಾಜಕೀಯ ಮತ್ತು ವೈಯಕ್ತಿಕ ಹಣಕಾಸಿನ ಲೂಟಿಗಾಗಿ ಉಪಯೋಗ ಮಾಡುತ್ತಿದ್ದಾರೆ.

-ತೇಜಸ್ವಿ ಸೂರ್ಯ, ಸಂಸದ

ಸಾರ್ವಜನಿಕರ ಒಂದೊಂದು ರುಪಾಯಿಗೆ ನ್ಯಾಯ ಸಿಗುವ ರೀತಿಯಲ್ಲಿ ನಾವು ಹೋರಾಟ ಮಾಡಲಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ರಾಜ್ಯ ಕಾರ್ಯದರ್ಶಿ ಅಂಬಿಕಾ ಹುಲಿನಾಯ್ಕರ್, ಶಾಸಕ ಧೀರಜ್ ಮುನಿರಾಜು ಉಪಸ್ಥಿತರಿದ್ದರು.

ಕೋಟ್ಯಧಿಪತಿಗಳಿಗಾಗಿ ಟನಲ್ ರಸ್ತೆ ನಿರ್ಮಾಣ

ಈ ಟನಲ್ ಯೋಜನೆಗೆ ಟೋಲ್ ಹಾಕಬೇಕಿದೆ ಎಂದು ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಡಿಪಿಆರ್‌ನಲ್ಲಿ 660 ರು. ಟೋಲ್ ಶುಲ್ಕ ವಿಧಿಸಲು ಉದ್ದೇಶಿಸಲಾಗಿದೆ. ದಿನಕ್ಕೆ ಆ ಕಡೆಯಿಂದ ಈ ಕಡೆ ಹೋಗಲು 660 ರು. ಕಟ್ಟುವಂಥ ಜನರು ಬೆಂಗಳೂರಿನಲ್ಲಿ ಎಷ್ಟಿದ್ದಾರೆ? ಈ ಡಿಪಿಆರ್ ಪ್ರಕಾರ ಬಸ್, ಆಟೋ, ದ್ವಿಚಕ್ರ ವಾಹನ ಚಲಿಸುವಂತಿಲ್ಲ, ಕೇವಲ ಕಾರಿಗಷ್ಟೇ ಅವಕಾಶ ಇದೆ. ಸದಾಶಿವನಗರ, ಡಾಲರ್ಸ್ ಕಾಲೊನಿಯ ಕೋಟ್ಯಧಿಪತಿಗಳು, ಕೋರಮಂಗಲದ 4ನೇ ಬ್ಲಾಕಿನಲ್ಲಿರುವ ಕೋಟ್ಯಧಿಪತಿಗಳಿಗೆ ಮಾತ್ರ ಉಪಯೋಗ ಆಗುವ ಟನಲ್ ಯೋಜನೆ ಇದು. ಡಿ.ಕೆ.ಶಿವಕುಮಾರ್ ಮತ್ತು ಅವರ ಅಕ್ಕಪಕ್ಕದ ಮನೆಯವರಿಗೆ ಕೋರಮಂಗಲದ ನೆಂಟರಿಷ್ಟರ ಮನೆಗೆ ಹೋಗಲು ಸಹಾಯ ಆಗುವ ಯೋಜನೆ ಇದ್ದಂತಿದೆ ಎಂದು ಆರೋಪಿಸಿದರು.

ಬಾರದೂರಿಗೆ ಭಾಗ್ಯವತಿ

ಜನಪ್ರಿಯತೆ ನಡುವೆ ವಿವಾಹ ಬಂಧ



ಸರೋಜಾ ದೇವಿ ಅವರು ಅರವತ್ತು, ಎಪ್ಪತ್ತರ ದಶಕದಲ್ಲಿಯೇ ಜನಪ್ರಿಯತೆಯ ಉತ್ತುಂಗದಲ್ಲಿದ್ದರು. ಆ ಸಯದಲ್ಲಿಯೇ ಅವರ ತಾಯಿ ಸರೋಜಾ ದೇವಿ ಅವರಿಗೆ ಇಂಜಿನಿಯರ್ ಆಗಿದ್ದ ಶ್ರೀಹರ್ಷ ಅವರೊಂದಿಗೆ ವಿವಾಹ ನೆರವೇರಿಸಿದರು. ಮದುವೆಯಾದ ಬಳಿಕ ಸಿನಿಮಾದಿಂದ ದೂರ ಉಳಿಯುವಂತೆ ತಾಯಿ ಹೇಳಿದ್ದರು. ಆದರೆ ಸರೋಜಾ ದೇವಿ, ಅವರ ಪತಿಯ ಪ್ರೋತ್ಸಾಹದಿಂದ ಸಿನಿಮಾಗಳಲ್ಲಿ ನಟಿಸಿದರು. ವಿವಾಹದ ಬಳಿಕವೂ ಸರೋಜಾ ದೇವಿ ಅವರ ಜನಪ್ರಿಯತೆ ಕಡಿಮೆಯಾಗಲಿಲ್ಲ. ಆಗಲೂ ಸಾಲು ಸಾಲು ಸಿನಿಮಾಗಳು ಅರಸಿ ಬಂದವು. ವಿವಾಹದ ನಂತರ ನಟಿಸಿದ ಚಿತ್ರಗಳಿಗೆ ಹಲವು ಪ್ರಶಸ್ತಿಗಳೂ ಸಂದವು. ವಿವಾಹವಾದ ಮೇಲೆ ಚಿತ್ರರಂಗ ದಲ್ಲಿ ಜನಪ್ರಿಯತೆ ಕುಂದುತ್ತದೆ ಎಂಬ ಮಾತನ್ನು ಸುಳ್ಳಾಗಿಸಿದರು.

ಅಪ್ಪು ಅಚ್ಚುಮೆಚ್ಚು

ಪುನೀತ್ ರಾಜ್‌ಕುಮಾರ್ ಎಂದರೆ ಸರೋಜಾ ದೇವಿ ಅವರಿಗೆ ಅಚ್ಚುಮೆಚ್ಚು ಅಪ್ಪುವನ್ನು ಮಗನಂತೆ ಕಾಣುತ್ತಿದ್ದರು. ಯಾರಿವನು ಚಿತ್ರದಲ್ಲಿ ಸರೋಜಾ ದೇವಿ ಅವರು ಅಪ್ಪು ತಾಯಿಯ ಪಾತ್ರದಲ್ಲಿ ನಟಿಸಿದ್ದು. ಈ ಚಿತ್ರದ ಕಣ್ಣಿಗೆ ಕಾಣದ ದೇವರು ಎಂದರೆ ಅದು ಅಮ್ಮನು ತಾನೆ.. ಎಂಬ ಹಾಡಿನ ಚಿತ್ರೀಕರಣದ ವೇಳೆ ಸರೋಜಾ ದೇವಿ ಅವರು ಈ ಮಗು ನನ್ನ ಮಗವೇ ಆಗಿದ್ದರೆ ಎಷ್ಟು ಚೆನ್ನಾಗಿ ಇರುತ್ತಿತ್ತು ಎಂದು ಹೇಳಿದ್ದರು. ಅಪ್ಪು ಅಭಿನಯದ ನಟ ಸಾರ್ವಭೌಮ, ಸರೋಜಮ್ಮ ಅಭಿನಯದ ಕೊನೆಯ ಚಿತ್ರ.

ಸಂಕಷ್ಟದ ಸಮಯ

ಸರೋಜಾ ದೇವಿ ಅವರಿಗೆ ಪತಿ ಶ್ರೀಹರ್ಷ ಸದಾ ಪ್ರೋತ್ಸಾಹಿಸುತ್ತಿದ್ದರು. 1986ರಲ್ಲಿ ಶ್ರೀಹರ್ಷ ಹೃದಯಾಘಾತದಿಂದ ಅಕಾಲಿಕ ಮರವಣಪ್ಪಿದರು. ಪತಿಯ ಅಗಲಿಕೆಯಿಂದ ಸರೋಜಾ ದೇವಿ ಕಂಗಾಲಾದರು. ಚಿತ್ರರಂಗದಿಂದ ದೂರವೇ ಉಳಿದಿದ್ದರು. ಒಂದು ವರ್ಷದವರೆಗೆ ಅವರು ಕ್ಯಾಮೆರಾ ಮುಂದೆ ಬರಲಿಲ್ಲ. ಪತಿ ಅಗಲುವ ಮುನ್ನ ಲೇಡೀಸ್ ಹಾಸ್ಟೆಲ್ ಸಿನಿಮಾದಲ್ಲಿ ನಟಿಸಲು ಒಪ್ಪಿದ್ದರು. ಹಾಗಾಗಿ ಆ ಚಿತ್ರವನ್ನು ಮುಗಿಸಿಕೊಟ್ಟರು. ಆದರೆ ಬಳಿಕ ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದರು.

ಸರೋಜಾ ದೇವಿ ಅವರು ಭಾರತೀಯ ಚತ್ರರಗವೇ ಹೆಮ್ಮೆ ಪಡುವ ಕಲಾವಿದೆ, ಅವರ ಸಾಧನೆ ಎಲ್ಲರಿಗೂ ಮಾದರಿ. ಅವರು ಬಣ್ಣಹಚ್ಚಿದ ಪಾತ್ರಗಳು ಪ್ರತಿಯೊಬ್ಬರಿಗೂ ಸ್ಫೂರ್ತಿ. ಅವರೊಂದಿಗೆ ನಟಿಸುವುದೇ ಅದೃಷ್ಟ ಎನ್ನುವಂತಿತ್ತು. ಅವರನ್ನು ಪಡೆದ ನಾವೇ ನಿಜವಾದ ಭಾಗ್ಯವಂತರು. ಅವರ ಅಗಲಿಕೆ ದುಃಖ ತಂದಿದೆ.

ಗಿರಿಜಾ ಲೋಕೇಶ್
ಹಿರಿಯ ನಟಿ

ನನ್ನ ಹಾಗೂ ಸರೋಜಾ ದೇವಿ ಅವರ ನಡುವೆ 50 ವರ್ಷದ ಒಡನಾಟವಿದೆ. ಇಷ್ಟು ವರ್ಷದಲ್ಲಿ ನೋಡಿದ ಮೇರು ನಟಿ ಸರೋಜಾ ದೇವಿ. ಅವರು ನಮ್ಮ ಮೇಲೆ ತುಂಬಾ ಪ್ರಭಾವ ಬೀರಿದ್ದಾರೆ. ಎಲ್ಲರನ್ನೂ ಗೌರವದಿಂದ ಕಾಣುವ ಮತ್ತು ಘನತೆಯಿಂದ ಬದುಕಬೇಕು ಎಂದು ಆಶಿಸುವ ಜೀವವದು. ಅಂತಹ ಮಹಾನ್ ಕಲಾವಿದೆಯ ಅಗಲಿಕೆ ತುಂಬಲಾರದ ನಷ್ಟವಾಗಿದೆ.

ಜಯಮಾಲಾ
ಹಿರಿಯ ನಟಿ

ಅವರ ಜತೆ ಹಲವು ಚಿತ್ರಗಳಲ್ಲಿ ನಟಿಸಿದ್ದೇನೆ. ಎಲ್ಲರೊಂದಿಗೆ ಬೆರೆಯುವ ಅವರ ಗುಣ ಮೆಚ್ಚುವಂತಹದ್ದು. ಅವರು ಚತುರ್ಭಾಷಾ ತಾರೆಯಾಗಿದ್ದರೂ ಎಲ್ಲರಿಂದಲೂ ಕಲಿಯಬೇಕಿದೆ ಎನ್ನುತ್ತಿದ್ದರು. ನಿಜವಾಗಿಯೂ ಅವರು ನಮ್ಮ ಕನ್ನಡ ಚಿತ್ರರಂಗದ ಹೆಮ್ಮೆ . ಮನೆಗೆ ಹೋದಾಗ ಮನೆ ಮಗನಂತೆಯೇ ಕಾಣುತ್ತಿದ್ದರು, ಎಲ್ಲರನ್ನೂ ಪ್ರೀತಿಯಿಂದ ಕಾಣುವ ತಾಯಿ ಅವರು.

ಹೊನ್ನವಳ್ಳಿ ಕೃಷ್ಣ
ಹಿರಿಯ ನಟ

ನನ್ನ ಎ ಚಿತ್ರ ರಿಲೀಸ್ ಆಗೋಕೆ ಸರೋಜಮ್ಮ ಕಾರಣ. ಎ ಚಿತ್ರಕ್ಕೆ ಸೆನ್ಸಾರ್ ಆಗದೆ ರಿವೈಸಿಂಗ್ ಕಮಿಟಿಗೆ ಹೋಗಿತ್ತು. ಸರೋಜಮ್ಮ ರಿವೈಸಿಂಗ್ ಕಮಿಟಿ ಅಧ್ಯಕ್ಷರಾಗಿದ್ದರು. ನನ್ನ ಪರವಾಗಿ ಅಮ್ಮ ವಾದ ಮಾಡಿ ಸಿನಿಮಾ ಸೆನ್ಸಾರ್ ಆಗುವ ಹಾಗೆ ಮಾಡಿದರು.ಅಂದಿನಿಂದಲೂ ಅಮ್ಮ ನಮ್ಮ ಮನೆಯವರಲ್ಲೊಬ್ಬರಾಗಿದ್ದಾರೆ. ಸರೋಜಮ್ಮ ಪರಿಪೂರ್ಣ ಜೀವನ ನಡೆಸಿ ಹೋಗಿದ್ದಾರೆ.

ಉಪೇಂದ್ರ
ನಟ

ಹಿರಿಯ ಕಲಾವಿದೆ, ಅಭಿನಯ ಸರಸ್ವತಿ ಎಂದೇ ಖ್ಯಾತರಾಗಿದ್ದ ಪದ್ಮ ಭೂಷಣ ಬಿ.ಸರೋಜಾ ದೇವಿ ಅವರು ವಿಧಿವಶರಾದ ಸುದ್ದಿ ತಿಳಿದು ಅತ್ಯಂತ ದುಃಖವಾಗಿದೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ದೇವರು ಅವರ ಕುಟುಂಬದವರಿಗೆ, ಅವರ ಅಪಾರ ಅಭಿಮಾನಿಗಳಿಗೆ ಆ ಹಿರಿಯ ಕಲಾವಿದೆಯ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ದರ್ಶನ್ ತೂಗುದೀಪ್
ನಟ

ತೆರೆಮರೆಗೆ ಸರಿದ ಅಭಿನಯ ಸರಸ್ವತಿ

ಚಂದನವನದ ಅಭಿನಯ ಸರಸ್ವತಿ, ಹಿರಿಯ ನಟಿ, ಬೆಳ್ಳಿತೆರೆಯನ್ನು ಬೆಳಗಿದ ಭಾಗ್ಯವತಿ ಬಿ.ಸರೋಜಾ ದೇವಿ ಇನ್ನು ನೆನಪು ಮಾತ್ರ. ಸರೋಜಾ ದೇವಿ ಅಂದಾಕ್ಷಣ ನಮಗೆ ನೆನಪಾಗೋದು ಅವರ ಸುಂದರ ವದನ. ಥೇಟ್ ಸರಸ್ವತಿಯನ್ನೇ ಹೋಲುತ್ತಿದ್ದ ಮೇರು ನಟಿ ಸುಮಾರು ಏಳು ದಶಕಗಳ ಕಾಲ ಚತುರ್ಭಾಷಾ ನಟಿಯಾಗಿ ಚಿತ್ರರಂಗವನ್ನು ಬೆಳಗಿದವರು. ಬಾಲ್ಯದಿಂದಲೂ ಸಂಗೀತ ನೃತ್ಯದ ಬಗ್ಗೆ ಆಸಕ್ತಿ ಹೊಂದಿದ್ದ ಸರೋಜಾ ದೇವಿ ಅವರಿಗೆ ಚಿತ್ರರಂಗ ಬೇಡವಾಗಿತ್ತು, ಆದರೆ ಚಿತ್ರರಂಗಕ್ಕೆ ಸರೋಜಾ ದೇವಿಯವರ ಅಗತ್ಯವಿತ್ತು. ಒಲ್ಲದ ಮನಸಿನಿಂದಲೇ ಚಿತ್ರರಂಗಕ್ಕೆ ಎಂಟ್ರಿಕೊಟ್ಟ ಸರೋಜಾ ದೇವಿ ಮಹಾನ್ ನಟಿಯಾಗಿ ಗುರುತಿಸಿಕೊಂಡು ಪ್ರಸಿದ್ಧಿ ಪಡೆದರು. ಕನ್ನಡ, ತೆಲುಗು, ತಮಿಳು, ಹಿಂದಿ ಹೀಗೆ ನಾಲ್ಕು ಭಾಷೆಗಳ ಸ್ಟಾರ್ ನಟರೊಂದಿಗೆ ನಟಿಸಿದ ಕೀರ್ತಿ ಸರೋಜಾ ದೇವಿ ಅವರಿಗೆ ಸಲ್ಲುತ್ತದೆ.

ಚತುರ್ಭಾಷೆಯಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಸರೋಜಮ್ಮ, ನೂರಾ ಅರವತ್ತೊಂದು ಚಿತ್ರಗಳಲ್ಲಿಯೂ ನಾಯಕಿಯಾಗಿಯೇ ಬಣ್ಣಹಚ್ಚಿದ್ದಾರೆ ಎಂಬುದು ವಿಶೇಷ. ಸರಿ ಸುಮಾರು ಇಪ್ಪತ್ತೊಂಬತ್ತು ವರ್ಷಗಳ ಕಾಲ ನಾಯಕಿಯಾಗಿ ಭಾರತೀಯ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದರು. ಪರಭಾಷೆಯಲ್ಲಿಯೂ ಕನ್ನಡದ ಅರಗಿಳಿ ಎಂಬ ಬಿರುದು ಪಡೆದವರು.

ಬಾಲ್ಯದಿಂದಲೂ ಅಪ್ಪ, ಅಮ್ಮನ ಮುದ್ದು ಮಗಳಾಗಿ ಶಿಸ್ತಿನಿಂದ ಬೆಳೆದ ಸರೋಜಾ ದೇವಿ ಅವರು, ನೃತ್ಯ ಮತ್ತು ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಚಿಕ್ಕಂದಿನಲ್ಲಿ ಅಪ್ಪ ಅಮ್ಮ ಎಲ್ಲರೂ ಸಿನಿಮಾಗೆ ಹೋದರೆ ಸರೋಜಾ ದೇವಿ ಅವರು ಮಾತ್ರ ನನಗೆ ಸಿನಿಮಾ ನೋಡಲು ಇಷ್ಟವಿಲ್ಲ, ಅದೇ ಹಣವನ್ನು ನನಗೆ ಕೊಡಿ ಎಂದು ಆ ಹಣದಲ್ಲಿ ಬಡ ಮಕ್ಕಳಿಗೆ ಬಟ್ಟೆ ತೆಗೆದುಕೊಡುತ್ತಿದ್ದರು. ಬಾಲ್ಯದಲ್ಲಿಯೇ ಸಾಮಾಜಿಕ ಕಳಕಳಿ ಮೈಗೂಡಿತ್ತು.

ಬದುಕು ಬದಲಿಸಿದ ಆ ಹಾಡು

ಸರೋಜಾ ದೇವಿ ಅವರಿಗೆ ನೃತ್ಯದಲ್ಲಿ ಬಲು ಆಸಕ್ತಿ, ಶಾಲೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ತಪ್ಪದೇ ಪಾಲ್ಗೊಂಡು ನೃತ್ಯ ಮಾಡುತ್ತಿದ್ದರು. ಮುಂದೆ ತಾನು ಶಿಕ್ಷಕಿಯಾಗಬೇಕು ಅಂದುಕೊಂಡಿದ್ದರು, ಆದರೆ ನಟಿಯಾಗಿ ಪ್ರಸಿದ್ಧಿ ಪಡೆದರು. ಒಂದು ದಿನ ಶಿಕ್ಷಕರು ಶಾಲೆಯ ಎಲ್ಲಾ ಮಕ್ಕಳನ್ನು ಕಾಯಕ್ರಮವೊಂದಕ್ಕೆ ಕರೆದುಕೊಂಡು ಹೋಗಿದ್ದರು. ಗಾಯನದಲ್ಲಿ ಆಸಕ್ತಿಯಿದ್ದ ಸರೋಜಾ ದೇವಿ ಅವರು ಯೇ ಜಿಂದಗಿ ಉಸಿಕೀ.. ಹಾಡು ಹಾಡಿದ್ದರು. ಈ ಹಾಡು ಸರೋಜಾ ದೇವಿಯವರ ಬದುಕನ್ನೇ ಬದಲಾಯಿಸಿತು. ಆ ಕಾರ್ಯಕ್ರಮಕ್ಕೆ ನಟ, ನಿರ್ಮಾಪಕ ಹೊನ್ನಪ್ಪ ಭಾಗವತರ್ ಬಂದಿದ್ದರು. ಈ ಗಾಯನ ಕೇಳಿದ ಭಾಗವತರ್, ಈ ಹುಡುಗಿಯನ್ನು ಹಿನ್ನೆಲೆ ಗಾಯಕಿಯಾಗಿ ಆಯ್ಕೆ ಮಾಡಲು ಯೋಚಿಸಿದರು. ಸುಂದರವಾಗಿದ್ದ ಹುಡುಗಿಯನ್ನು ತಮ್ಮ ಚಿತ್ರಕ್ಕೆ ನಾಯಕಿಯಾಗಿ ಆಯ್ಕೆ ಮಾಡಿಕೊಂಡು ತಾವು ನಿರ್ಮಿಸುತ್ತಿದ್ದ ಮಹಾಕವಿ ಕಾಳಿದಾಸ ಚಿತ್ರದಲ್ಲಿ ನಟಿಸಲು ಅವಕಾಶ ಮಾಡಿಕೊಟ್ಟರು.

ಸರೋಜಾ ದೇವಿ ಅವರಿಗೆ ನಟನೆಯಲ್ಲಿ ಆಸಕ್ತಿಯಿರಲಿಲ್ಲ. ಹಾಗಾಗಿ ಸಿನಿಮಾದಲ್ಲಿ ನಟಿಸಲು ನಿರಾಕರಿಸಿದರು. ನಾನು ಇನ್ನೂ ಓದಬೇಕು ಹಾಗಾಗಿ ನಟಿಸುವುದಿಲ್ಲ ಎಂದು ಹಠ ಹಿಡಿದಿದ್ದರು, ಆದರೆ ಅವರ ಅಮ್ಮ ಇದೊಂದು ಸಿನಿಮಾದಲ್ಲಿ ನಟಿಸು ಬಳಿಕ ವಿದ್ಯಾಭ್ಯಾಸದತ್ತ ಗಮನಹರಿಸುವಂತೆ ಮನವೊಲಿಸಿದರು. ಸರೋಜಮ್ಮ ತನ್ನ ತಾಯಿಯ ಒತ್ತಾಯಕ್ಕೆ ಸಿನಿಮಾದಲ್ಲಿ ಬಣ್ಣಹಚ್ಚಲು ಸಮ್ಮತಿಸಿದರು. ಈ ಚಿತ್ರದಲ್ಲಿ ವಿದ್ಯಾಧರೆಯ ಪಾತ್ರದಲ್ಲಿ ಕಂಗೊಳಿಸಿದರು. ಮೊದಲ ಚಿತ್ರವೇ ಸೂಪರ್ ಹಿಟ್ ಆಯಿತು, ಪ್ರಶಸ್ತಿಯೂ ಸಂದಿತು. ಅಲ್ಲಿಂದ ಚಿತ್ರರಂಗದಲ್ಲಿ ಸರೋಜಾ ದೇವಿ ಅವರ ಪರ್ವ ಆರಂಭವಾಯಿತು. ಈ ಚಿತ್ರದಲ್ಲಿ ಬಾರೋ ಗಿಳಿಯೇ.. ಗೀತೆ ಜನಜನಿತವಾಗಿತ್ತು. ಮಹಾಕವಿ ಕಾಳಿದಾಸ ಬಳಿಕ ಸರೋಜಾ ದೇವಿ ಅವರಿಗೆ ಬೇಡಿಕೆ ತಂದುಕೊಟ್ಟಿತು.

ಬೆಳ್ಳಿ ತೆರೆ ಬೆಳಗಿದ ಅರಗಿಣಿ

ಕನ್ನಡದ ಚಿಂತಾಮಣಿ, ಸ್ಕೂಲ್ ಮಾಸ್ಟರ್, ಜಗಜ್ಯೋತಿ ಬಸವೇಶ್ವರ ಸಿನಿಮಾಗಳಲ್ಲಿ ನಟಿಸಿ ನಟಿಯಾಗಿ ಗುರುತಿಸಿಕೊಂಡರು. 1961ರಲ್ಲಿ ತೆರೆಗೆ ಬಂದ ಕಿತ್ತೂರು ರಾಣಿ ಚೆನ್ನಮ್ಮ ಸಿನಿಮಾದಲ್ಲಿ ಸರೋಜಾ ದೇವಿ ಅವರು ಅಮೋಘ ಅಭಿನಯ ತೋರಿದರು. ಸಾಕ್ಷಾತ್ ಚೆನ್ನಮ್ಮನಾಗಿ ತೆರೆಯಲ್ಲಿ ಅಬ್ಬರಿಸಿದರು. ಸರೋಜಮ್ಮನ ಅಭಿನಯ ನೋಡಿ ಇವರೇ ನಿಜವಾದ ಚನ್ನಮ್ಮ ಎಂದು ಪ್ರೇಕ್ಷಕರು ಸ್ಮರಿಸಿದರು. ಕಿತ್ತೂರು ರಾಣಿ ಚೆನ್ನಮ್ಮ ಎಂದರೆ ಥಟ್ಟನೇ ನೆನಪಾಗುತ್ತಿದ್ದುದು ಸರೋಜಾ ದೇವಿ ಅವರು. ಆ ಚಿತ್ರ ಎಷ್ಟರ ಮಟ್ಟಿಗೆ ಕನ್ನಡನಾಡಿನ ಜನತೆಯಲ್ಲಿ ಛಾಪು ಮೂಡಿಸಿತು ಎಂದರೆ ಒಮ್ಮೆ ಸರೋಜಾ ದೇವಿ ಅವರು ಕಿತ್ತೂರಿಗೆ ಭೇಟಿ ನಿಡಿದ್ದರು. ಈ ಸಂದರ್ಭ ಅಲ್ಲಿನ ಜನತೆ ಸರೋಜಾ ದೇವಿ ಅವರಿಗೆ ರಾಣಿ ಚನ್ನಮ್ಮನಂತೆ ಕಿರೀಟ ಧರಿಸಿ, ಖಡ್ಗ ನೀಡಿ ಸನ್ಮಾನಿ ಸಂಭ್ರಮಿಸಿದ್ದರು. ಕಿತ್ತೂರು ರಾಣಿ ಚೆನ್ನಮ್ಮ ನನ್ನ ಜೀವನದ ಶ್ರೇಷ್ಠ ಚಿತ್ರಗಳಲ್ಲಿ ಒಂದು ಎಂದು ಸರೋಜಾದೇವಿ ಅವರು ನೆನೆಯುತ್ತಿದ್ದರು. ಆ ಬಳಿಕ ಮಲ್ಲಮ್ಮನ ಪವಾಡ ಮಾಡಿ ಮನಗೆದ್ದಿದ್ದರು.

ಅಮರಶಿಲ್ಪಿ ಜಕಣಾಚಾರಿ ಸಿನಿಮಾದಲ್ಲಿ ಚೆಲುವಾಂತ ಚೆನ್ನಗಿನ ನಲಿದಾಡು ಬಾ.. ಎಂದು ಹಾಡು ಕುಣಿದಿದ್ದರು.

ಚಂದನವನದ ಎವರ್ ಗ್ರೀನ್ ಜೋಡಿ

ಕನ್ನಡ ಚಿತ್ರರಂಗದಲ್ಲಿ ಡಾ.ರಾಜ್‌ಕುಮಾರ್ ಹಾಗೂ ಸರೋಜಾ ದೇವಿ ಅವರು ಅಭಿನಯಿಸಿದ ಸಿನಿಮಾಗಳು ಇಂದಿಗೂ ಎಂದೆಂದಿಗೂ ಗೋಲ್ಡನ್ ಸಿನಿಮಾಗಳ ಸಾಲಿನಲ್ಲಿ ಇವೆ, ಇರಲಿವೆ. ಭಾಗ್ಯವಂತರು ಕನ್ನಡ ಚಿತ್ರರಂಗದ ಎಂದೂ ಮರೆಯದ ಮರೆಯಲಾಗದ ಸಿನಿಮಾವಾಗಿದೆ. ಈ ಚಿತ್ರದ ಹಾಡುಗಳು ಎಂದೆಂದಿಗೂ ಜೀವಂತ. ಬಭ್ರುವಾಹ, ನನ್ನ ದೇವರು, ಯಾರಿವನು,

ಶ್ರೀನಿವಾಸ ಕಲ್ಯಾಣ, ಮಲ್ಲಮ್ಮನ ಪವಾಡ, ನ್ಯಾಯವೇ ದೇವರು, ಹೀಗೆ ಹತ್ತು ಹಲವು ಸಿನಿಮಾಗಳಲ್ಲಿ ಡಾ.ರಾಜ್ ಕುಮಾರ್ ಹಾಗೂ ಸರೋಜಮಾ ಒಟ್ಟಿಗೆ ನಟಿಸಿದ್ದಾರೆ. ಉಳಿದಂತೆ ಪೌರಾಣಿಕ ಹಿನ್ನೆಲೆಯ ಶ್ರೀ ರೇಣುಕಾದೇವಿ ಮಹಾತ್ಮೆ, ವಿಷ್ಣುವರ್ಧನ್ ಜೆತೆಗೆ ರುದ್ರನಾಗ ಸಿನಿಮಾದಲ್ಲಿಯೂ ಸರೋಜಾ ದೇವಿ ಬಣ್ಣಹಚ್ಚಿದ್ದರು.

ತಮಿಳು ಚಿತ್ರರಂಗದತ್ತ

ಮಹಾಕವಿ ಕಾಳಿದಾಸ ಚಿತ್ರದ ಬಳಿಕ ತಮಿಳು ಚಿತ್ರರಂಗದಲ್ಲಿಯೂ ನಟಿಸುವ ಅವಕಾಶ ಅರಸಿಬಂದಿತು. ಪಂತುಲು ನಿರ್ದೇಶನದ ತಂಗಮಲೈ ರಗಸಿಯಮ್ ಚಿತ್ರದಲ್ಲಿಯೂ ಸರೋಜಾ ದೇವಿ ಅಭಿನಯಿಸಿದರು, ಈ ಚಿತ್ರದಲ್ಲಿ ಮೋಹಿನಿಯ ಪಾತ್ರದಲ್ಲಿ ಗಮನಸೆಳೆದರು. ಈ ಚಿತ್ರದ ನಟನೆ ನೋಡಿದ ಎಂಜಿ.ರಾಮಚಂದ್ರನ್ ಅವರು ತಾವು ಅಭಿನಯಿಸುತ್ತಿದ್ದ ನಾಡೋಡಿ ಮನ್ನನ್ ಚಿತ್ರಕ್ಕೆ ಸರೋಜಾ ದೇವಿ ಅವರನ್ನೇ ನಾಯಕಿಯಾಗಿ ಆಯ್ಕೆ ಮಾಡಿಕೊಂಡರು. ಈ ಚಿತ್ರದಲ್ಲಿ ಅಮೋಘ ಅಭಿನಯ ತೋರಿದ ಸರೋಜಾ ದೇವಿ ಅವರು ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸಿದರು. ನಾಡೋಡಿ ಮನ್ನನ್ ಯಶಸ್ಸಿನ ನಂತರ, ಜೆಮಿನಿ ಗಣೇಶನ್ ಅವರೊಂದಿಗೆ ಕಲ್ಯಾಣ ಪರಿಸು, ಶಿವಾಜಿ ಗಣೇಶನ್ ಅವರೊಂದಿಗೆ ಭಾಗ ಪಿರಿವಿನೈ ಮುಂತಾದ ಚಿತ್ರಗಳಲ್ಲಿ ಬಣ್ಣಹಚ್ಚಿದರು.

ಹೊಸ ದಾಖಲೆ

ಎಂ.ಜಿ.ರಾಮಚಂದ್ರನ್ ಮತ್ತು ಸರೋಜಾ ದೇವಿ ಜೋಡಿ ನಟಿಸಿದ ಸಿನಿಮಾಗಳು ಸೂಪರ್ ಹಿಟ್ ಆಗಿವೆ. ನಾಡೋಡಿ ಮನ್ನನ್, ತಿರುದಾತೆ, ತಾಯಿ ಸೊಳ್ಳೈ ತಟ್ಟದೆ, ಪಾಸಂ, ಕುಟುಂಬ ತಾಳೈ, ತಾಳಿ ಭಾಗ್ಯಂ, ನಾನ್ ಆನೈಯಿತ್ತಲ್, ಪೆಟ್ರಲ್ತಾನ್ ಪಿಳ್ಳಯ್ಯ, ಅರಸ ಕಟ್ಟಲೈ, ಅಲ್ಲದೆ ಪಣತ್ತೊಟ್ಟಂ ಮತ್ತು ಪೆರಿಯ ಇಡತ್ತು ಪೆನ್ ತಮಿಳು ಚಿತ್ರರಂಗದಲ್ಲಿ ಸದ್ದು ಮಾಡಿದವು. ಇನ್ನು ಪಾಣಕ್ಕರ ಕುಟುಂಬ, ಎನ್ ಕಡಮೈ, ತಾಯಿ ಮಡಿಯಲ್ಲಿ ಸಿನಿಮಾಗಳು ಎಲ್ಲರನ್ನೂ ಸೆಳೆದವು. ಕಲಂಗರೈ ವಿಲಕ್ಕಂ, ಅನ್ಬೆ ವಾ ಹೀಗೆ ಒಂದಾ ಎರಡ ಬರೋಬ್ಬರಿ ಇಪ್ಪತ್ತಾರು ಸಿನಿಮಾಗಳು ಬ್ಯಾಕ್ ಟು ಬ್ಯಾಕ್ ಹಿಟ್ ಆಗಿವೆ.

ಅಂತೆಯೇ ಶಿವಾಜಿ ಗಣೇಶನ್ ಮತ್ತು ಸರೋಜಾ ದೇವಿ ಜೋಡಿಯ ಸಿನಿಮಾಗಳು ಭರ್ಜರಿ ಯಶಸ್ಸು ಕಂಡಿವೆ. ತಂಗಮಲೈ ರಗಸಿಯಂ, ಸಬಾಷ್ ಮೀನಾ, ಎಂಗಲ್ ಕುಟುಂಬಮ್ ಪೇರಿಸು, ಭಾಗ ಪಿರಿವಿನೈ, ಸ್ಕೂಲ್ ಮಾ, ತಿರೈ, ವಿಡಿವೆಲ್ಲಿ, ಪಲುಮ್ ಪಜಮುಮ್, ಪಾರ್ಥಾಲ್ ಪಾಸಿ ಥೀರುಮ್, ವಲರ್ ಪಿರೈ, ದೇವಾಲಯಮಣಿ, ಕುಲಮಗಲ್ ರಾಧೈ ಹೀಹೆ ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದರು. ಇದು ತಮಿಳು ಚಿತ್ರರಂಗದಲ್ಲಿ ಹೊಸ ದಾಖಲೆಯಾಗಿದೆ.

ತೆಲುಗಿನಲ್ಲಿಯೂ ಛಾಪು

ತಮಿಳಿನಲ್ಲಿ ಖ್ಯಾತಿ ಪಡೆದ ಸರೋಜಾ ದೇವಿ ಅವರಿಗೆ ತೆಲುಗು ಚಿತ್ರಗಳಲ್ಲಿಯೂ ನಟಿಸುವ ಅವಕಾಶ ಸಿಕ್ಕಿತು. ಎನ್.ಟಿ.ರಾಮರಾವ್ ಅವರೊಂದಿಗೆ ನಟಿಸಿದ ಸರೋಜಾ ದೇವಿ ತೆಲುಗು ಚಲನಚಿತ್ರಗಳಲ್ಲಿ ಯಶಸ್ಸನ್ನು ಗಳಿಸಿದರು. ಅಮರ ಶಿಲ್ಪಿ ಜಕ್ಕಣ್ಣ, ಅಕ್ಕಿನೇನಿ ನಾಗೇಶ್ವರ ರಾವ್ ಅವರೊಂದಿಗಿಗೆ ಅಭಿನಯಸಿದ ಪೆಳ್ಳಿಕಾನುಕ, ರಹಸ್ಯಂ ಕೂಡ ಯಶಸ್ಸು ಕಂಡಿತು. ಸೀತಾರಾಮ ಕಲ್ಯಾಣಂ, ಜಗದೇಕ ವೀರುನಿ ಕಥಾ, ದಾಗುಡು ಮೂತಲು ಮುಂತಾದ ತೆಲುಗಿನ ಚಿತ್ರಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡರು.

ಬಾಲಿವುಡ್‌ನತ್ತ

ಹಿಂದಿಯಲ್ಲಿ ಆ ಕಾಲದಲ್ಲಿ ಜನಪ್ರಿಯತೆ ಪಡೆದಿದ್ದ ದಿಲೀಪ್ ಕುಮಾರ್, ರಾಜೇಂದ್ರ ಕುಮಾರ್, ಶಮ್ಮೀ ಕಪೂರ್, ಸುನಿಲ್ ದತ್ ಹೀಗೆ ಸ್ಟಾರ್ ನಟರೊಂದಿಗೆ ನಟಿಸಿದ ಖ್ಯಾತಿ ಸರೋಜಾ ದೇವಿ ಅವರಿಗೆ ಸಲ್ಲುತ್ತದೆ. ಒಪೇರಾ ಹೌಸ್, ಪರೀಕ್ಷಾ, ಹಾಂಗ್ ಕಾಂಗ್ ಸರೋಜಮ್ಮ ನಟಿಸಿದ ಪ್ರಮುಖ ಸಿನಿಮಾಗಳು, ಈ ಈ ಚಿತ್ರಗಳು ಯಶಸ್ವಿಯೂ ಆದವು. ಹೀಗೆ ಕನ್ನಡ, ತಮಿಳು, ತೆಲುಗು ಹಾಗೂ ಹಿಂದಿ ಚಿತ್ರರಂಗದಲ್ಲಿ ನಾಯಕಿಯಾಗಿ ಛಾಪು ಮೂಡಿಸಿದ ಸರೋಜಾ ದೇವಿ ಅರವತ್ತರ ದಶಕದಲ್ಲಿಯೇ ಚತುರ್ಭಾಷಾ ತಾರೆ ಎಂಬ ಹೆಗ್ಗಳಿಕೆಗೆ ಭಾಜನರಾದರು.





ಕನ್ನಡದ ಹಿರಿಯ ನಟಿ ಬಿ. ಸರೋಜಾದೇವಿ ಅವರ ನಿಧನವಾರ್ತೆ ನೋವುಂಟುಮಾಡಿದೆ. ಸರೋಜಾದೇವಿ ಎಂದಾಕ್ಷಣ ಕಿತ್ತೂರು ಚೆನ್ನಮ್ಮ, ಬಬ್ರುವಾಹನ, ಅಣ್ಣತಂಗಿ ಮುಂತಾದ ಚಿತ್ರಗಳಲ್ಲಿನ ಅವರ ಮನೋಜ್ಞ ಅಭಿನಯ ಕಣ್ಣಮುಂದೆ ಬರುತ್ತದೆ. ಅವರ ಅಗಲಿಕೆ ಭಾರತೀಯ ಚಿತ್ರರಂಗಕ್ಕಾದ ಬಹುದೊಡ್ಡ ನಷ್ಟ.

ಸಿದ್ದರಾಮಯ್ಯ
ಮುಖ್ಯಮಂತ್ರಿ

ಅಭಿನಯ ಸರಸ್ವತಿಗೆ ಪ್ರೀತಿಯ ವಿದಾಯ. ಬಿ. ಸರೋಜಾ ದೇವಿ ಅವರ ನಿಧನದ ಸುದ್ದಿ ನೋವು ತಂದಿದೆ. ಕನ್ನಡ ಸೇರಿದಂತೆ ಪಂಚ ಭಾಷೆಗಳಲ್ಲಿ ನಟಿಸಿ,ಆರುದಶಕಗಳ ಕಾಲ ಚಿತ್ರರಂಗಕ್ಕೆ ಸೇವೆ ಸಲ್ಲಿಸಿ, ಸೈ ಎನಿಸಿಕೊಂಡಿದ್ದರು. ಅಗಲಿದ ಅವರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ನೀಡಲಿ.

ಡಿ. ಕೆ ಶಿವಕುಮಾರ್
ಉಪಮುಖ್ಯಮಂತ್ರಿ

ಸರೋಜಾ ದೇವಿ ಅವರನ್ನು ಕಳೆದುಕೊಂಡಿದ್ದು ತುಂಬಾ ನೋವಾಗಿದೆ. ಕನ್ನಡ ಭಾಷೆ ಸೇರಿದಂತೆ ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿ ನಟಿಸಿ, ಸೂಪರ್ ಹಿಟ್ ಸಿನಿಮಾಗಳನ್ನು ನೀಡಿ ಪ್ರಸಿದ್ಧ ಪಡೆದಿದ್ದಾರೆ. ಅಂಬರೀಶ್ ಅವರನ್ನು ತಮ್ಮ ನಂತೆ ಕಾಣುತ್ತಿದ್ದರು. ಅಂಬರೀಷ್ ಅಗಲಿದಾಗ ತುಂಬಾ ನೊಂದಿದ್ದರು. ಸರೋಜಾ ದೇವಿ ನನಗೆ ಶಕ್ತಿಯಾಗಿದ್ದರು. ಅವರ ಅಗಲಿಕೆ ತುಂಬಾ ದುಃಖ ತಂದಿದೆ.

ಸುಮಲತಾ
ನಟಿ

ಕನಾಟಕ ಮಾತ್ರವಲ್ಲದೆ ಭಾರತೀಯ ಚಿತ್ರರಗದ ಶ್ರೇಷ್ಠ ನಟಿಯಾಗಿ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದ ಮಹಾನ್ ನಟಿ ಸರೋಜಾ ದೇವಿ ಅವರು. ಇಂದು ಅವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ಅವರ ಜತೆಗೆ ಸಿನಿಮಾಗಳಲ್ಲಿ ನಟಿಸಲಾಗಲಿಲ್ಲ. ಒಮ್ಮೆ ನಾನು ನಿರ್ಮಾಣ ಮಾಡಿದ್ದ ಸಿನಿಮಾಕ್ಕೆ ಸೆನ್ಸಾರ್ ಸಮಸ್ಯೆಯಾದಾಗ ಅವರನ್ನು ಭೇಟಿ ಮಾಡಿದ್ದೆ.

ಬಿ.ಸಿ. ಪಾಟೀಲ್
ನಟ, ನಿರ್ಮಾಪಕ

ಸರೋಜಮ್ಮ ಆಗಲೇ ಪ್ಯಾನ್ ಇಂಡಿಯಾ ಮಟ್ಟಕ್ಕೆ ಬೆಳೆದಿದ್ದರು. ಅವರನ್ನು ಪಡೆದ ನಾವೇ ಭಾಗ್ಯವಂತರು. ನಟಿ ಸರೋಜಾ ದೇವಿ ಅಂದಾಗ ನಮಗೆ ನೆನಪಾಗೋದು ಕಿತ್ತೂರು ರಾಣಿ ಚನ್ನಮ್ಮ, ಯಾಕಂದ್ರೆ ಅವರ ಪಾತ್ರಗಳನ್ನು ನೋಡಿ ಶಾಲೆಯಲ್ಲಿ ಅಭಿನಯಿಸು ತ್ತಿದ್ದೆವು. ನಮ್ಮ ಮೇಲೆ ಅಷ್ಟರ ಮಟ್ಟಕ್ಕೆ ಛಾಪು ಒತ್ತಿದ್ದಾರೆ. ಕೊನೆಯವರೆಗೂ ಲವಲವಿಕೆಯಿಂ ದಲೇ ಇದ್ದರು, ಆದರೆ ಇದ್ದಕ್ಕಿಂದತೆ ನಮ್ಮನ್ನು ಆಗಲಿದ್ದು ನೋವು ತಂದಿದೆ.

ತಾರಾ
ಹಿರಿಯ ನಟಿ

ಬಾರದೂರಿಗೆ ಭಾಗ್ಯವತಿ

ಏಳು ದಶಕಗಳ ಕಾಲ ಕಲಾ ಸೇವೆ ಮಾಡಿದ ಮೇರು ನಟಿ ಸರೋಜಾ ದೇವಿ ಅವರಿಗೆ ಸಂದ ಪ್ರಶಸ್ತಿಗಳು ಹತ್ತಲವು

1965
ರಾಜ್ಯ ಸರಕಾರದ ಅಭಿನಯ ಸರಸ್ವತಿ ಗೌರವ

1969
ಕುಲ ವಿಳಕ್ಕು ಚಿತ್ರಕ್ಕೆ ಅತ್ಯುತ್ತಮ ನಟಿ ತಮಿಳುನಾಡು ರಾಜ್ಯ ಚಲನಚಿತ್ರ ಪ್ರಶಸ್ತಿ

1980
ಕರ್ನಾಟಕ ರಾಜ್ಯದಿಂದ ಅಭಿನಂದನ-ಕಾಂಚನ ಮಾಲಾ ಪ್ರಶಸ್ತಿ

1988
ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ

1993
ತಮಿಳುನಾಡು ಸರ್ಕಾರದ ಎಂಜಿಆರ್ ಪ್ರಶಸ್ತಿ

2001
ಆಂಧ್ರ ಪ್ರದೇಶ ಸರ್ಕಾರದಿಂದ ಎನ್‌ಟಿಆರ್ ರಾಷ್ಟ್ರೀಯ ಪ್ರಶಸ್ತಿ

2009
ಜೀವಮಾನ ಸಾಧನೆಗಾಗಿ ರಾಜ್ಯ ಸರಕಾರದಿಂದ ಡಾ.ರಾಜ್‌ಕುಮಾರ್ ಪ್ರಶಸ್ತಿ

2009
ಜೀವಮಾನ ಸಾಧನೆಗಾಗಿ ತಮಿಳುನಾಡು ಸರಕಾರದಿಂದ ಕಲೈಮಾಮಣಿ ಪ್ರಶಸ್ತಿ

1969
ಕೇಂದ್ರ ಸರಕಾರದ ಪದ್ಮ ಶ್ರೀ

1992
ಕೇಂದ್ರ ಸರಕಾರದ ಪದ್ಮಭೂಷಣ ಪ್ರಶಸ್ತಿ

ಜೀವಮಾನ ಸಾಧನೆಗಾಗಿ ಭಾರತದ ಸರಕಾರದಿಂದ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಸರೋಜಾ ದೇವಿ ಅವರ ಸಾಧನೆಯನ್ನು ಪರಿಗಣಿಸಿ ಬೆಂಗಳೂರು ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಇಂದು ಕರುನಾಡಿನ ಅಪರೂಪದ ಹಿರಿಯ ನಟಿ ಬಿ.ಸರೋಜಾ ದೇವಿಯವರು ನಮ್ಮನ್ನು ಅಗಲಿದ್ದಾರೆ. ಚಿತ್ರರಂಗದ ಕಲಾ ಸೇವೆಯನ್ನು ಹಾಗೂ ಪ್ರಮುಖವಾಗಿ ಕಿತ್ತೂರು ರಾಣಿ ಚೆನ್ನಮ್ಮನ ಚಿತ್ರದಲ್ಲಿ ಅವರ ನಟನೆಯು ಇಡೀ ಕನ್ನಡನಾಡಿಗೆ ವೀರರಾಣಿ ಕಿತ್ತೂರು ರಾಣಿ ಶೌರ್ಯ,ಸ್ಥೈರ್ಯ, ಧೈರ್ಯ,ಸಾಹಸವನ್ನು ನಟನೆ ಮೂಲಕ ತೆರೆಯ ಮೇಲೆ ಅಭಿವ್ಯಕ್ತವಾದ ದೃಶ್ಯವು ಸಾಕ್ಷಾತ್ ರಾಣಿ ಚೆನ್ನಮ್ಮಾಜೀ ಪರಕಾಯ ಪ್ರವೇಶವಾಗಿದೆ ಎಂಬ ಭಾವ ಮೂಡಿಸಿತು. ಹೀಗೆ ನೂರಾರೂ ಚಲನಚಿತ್ರಗಳಲ್ಲಿ ನಟನೆಯ ಮೂಲಕ ಅಭಿವ್ಯಕ್ತಪಡಿಸಿ ರೀತಿ ಇದೆಯಲ್ಲಾ ಅದು ಅತ್ಯಿವಿರಳ ಮತ್ತು ಅತ್ಯದ್ಭುತ. ಇವೆಲ್ಲವೂಗಳನ್ನು ಒಂದುಕ್ಷಣ ಅವಲೋಕಿಸಿದಾಗ ಬಿ.ಸರೋಜಾದೇವಿ ಅವರ ಕಾಯ ಅಳಿದಿದೆ ವಿನಃಹ ಕಾರ್ಯವಲ್ಲ. 2017ರ ಜೂನ್ 19 ರಂದು ಬೆಂಗಳೂರಿನ ಚೌಡಯ್ಯ ಮೆಮೊರಿಯಲ್ ಹಾಲಿನಲ್ಲಿ ಅವರನ್ನು ಸನ್ಮಾನಿಸುವ ಸುಯೋಗ ನಮಗೊಲಿದಿತ್ತು.ಅಂದು ಆ ವೇದಿಕೆಯಲ್ಲಿ ಬಿ.ಸರೋಜಾದೇವಿಯವರು ಸಾವಿಲ್ಲದ,ಕೇಡಿಲ್ಲದ,ರೂಹಿಲ್ಲದ ಚೆಲುವೆಂಗೆ ನಾನೊಲಿದೆ ಎಂಬ ವೈರಾಗ್ಯನಿಧಿ ಅಕ್ಕಮಹಾದೇವಿ ವಚನವನ್ನು ಹಾಡಿದ ಹಾಡು ಈಗಲೂ ಕೇಳಿಸುತಿದೆ. ಇಂದು ಶಾರೀರಕವಾಗಿ ನಮ್ಮ ನಗಲಿದ ಬಿ.ಸರೋಜಾದೇವಿ ಅವರ ದಿವ್ಯ ಚೇತನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಹಾಗೂ ಆತ್ಮಕ್ಕೆ ಶಾಂತಿ ದೊರೆಯಲೆಂದು ಎಂದು ಪ್ರಾರ್ಥಿಸುತ್ತೇವೆ.

-ಜಗದ್ಗುರು ವಚನಾನಂದ ಮಹಾಸ್ವಾಮಿ, ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ,ಹರಕ್ಷೇತ್ರ ಹರಿಹರ.

ಸರೋಜಾ ದೇವಿ ಅಭಿನಯಿಸಿದ ಪ್ರಮುಖ ಚಿತ್ರಗಳು

ಮಹಾಕವಿ ಕಾಳಿದಾಸ	ಮಲ್ಲಮ್ಮನ ಪವಾಡ	ತಂಗಮಲೈ ರಗಸಿಯಂ	ಯುದ್ದಂ
ರತ್ನಗಿರಿ ರಹಸ್ಯ	**ತಮಿಳು ಚಿತ್ರಗಳು**	ಸಬಾಷ್ ಮೀನಾ	ಸೀತಾರಾಮ ಕಲ್ಯಾಣಂ,
ಬಭ್ರುವಾಹನ	ನಾಡೋಡಿ ಮನ್ನನ್	**ತೆಲುಗು ಚಿತ್ರಗಳು**	ಜಗದೇಕ ವೀರುನಿ ಕಥಾ
ಕಿತ್ತೂರು ರಾಣಿ ಚನ್ನಮ್ಮ	ತಿರುದಾತೆ	ಪಾಂಡುರಂಗ	**ಹಿಂದಿ ಚಿತ್ರಗಳು**
ಭಾಗ್ಯವಂತರು	ತಾಯಿ ಸೊಳ್ಳೈ ತಟ್ಟದೆ	ಮಹಾತ್ಯಂ	ಹರಿ ದರ್ಶನ್
ಯಾರಿವನು	ಪಾಸಂ	ಅಮರ ಶಿಲ್ಪಿ ಜಕ್ಕಣ್ಣ,	ಪರೀಕ್ಷಾ,
ಅಮರ ಶಿಲ್ಪಿ ಜಕಣಚಾರಿ	ಕುಟುಂಬ ತಾಳೈ,	ಶ್ರೀಕೃಷ್ಣಾರ್ಜುನ	ಹಾಂಗ್ ಕಾಂಗ್



ಅಭಿನಯ ಸರಸ್ವತಿಗೊಂದು ಅಭಿಮಾನದ ನುಡಿ

ಕಪ್ಪಾ ನಿಮಗೇಕೆ ಕೊಡಬೇಕು ಕಪ್ಪಾ.,! ಎನ್ನುವ ಸಂಭಾಷಣೆ ಕನ್ನಡ ಸಿನಿರಸಿಕರಲ್ಲಿ ನೂರಾರು ವರ್ಷಗಳ ಕಾಲ ಚಿರಸ್ಥಾಯಿಯಾಗಿ ಉಳಿಯುವಂತೆ ಅಭಿನಯಿಸಿದ ನಟಿ ಡಾ.ಬಿ. ... ರಂಜಿಸಿದ್ದ ಕನ್ನಡದ ಪ್ರಥಮ ಸೂಪರಸ್ಟಾರ್ ನಟಿ ಡಾ.ಬಿ.ಸರೋಜಾದೇವಿ. ಡಾ.ರಾಜ್ ಅವರೊಂದಿಗೆ ಹಲವಾರು ಚಿತ್ರಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿರುವುದು ಸರೋಜಾದೇವಿಯವರ ಹೆಗ್ಗಳಿಕೆ.

ಹೊನ್ನಪ್ಪ ಭಾಗವತರ್ ಅವರಿಗೆ ನಾಯಕಿಯಾಗಿ ಮಹಾಕವಿ ಕಾಳಿದಾಸ ಚಿತ್ರದ ಮೂಲಕ ಕನ್ನಡನಾಡಿಗೆ ಚಿರಪರಿಚಿತರಾದ ಬಿ.ಸರೋಜಾದೇವಿ ಹಿಂದಿರುಗಿ ನೋಡಲೇ ಇಲ್ಲ. ನಂತರ ವರನಟ ಡಾ.ರಾಜ್ ಅವರಿಗೆ ನಾಯಕಿಯಾಗಿ ಅಣ್ಣ ತಂಗಿ ಚಿತ್ರದಲ್ಲಿ ನಾಯಕಿಯಾಗುವ ಮೂಲಕ ಕನ್ನಡ ಚಿತ್ರರಂಗಕ್ಕೆ ಹೊಸ ಭರವಸೆ ಮೂಡಿಸಿದವರು. ನಂತರ ಭೂಕೈಲಾಸ, ಕಿತ್ತೂರು ಚೆನ್ನಮ್ಮ, ವಿಜಯನಗರ ವೀರಪುತ್ರ, ದೇವಸುಂದರಿ ಮುಂತಾದ ಚಿತ್ರಗಳಲ್ಲಿ ಅಭಿನಯಿಸಿ ತಮ್ಮ ನಟನಾ ಕೌಶಲ್ಯವನ್ನು ಸಾಬೀತುಪಡಿಸಿದರು. ನಂತರ ತಮಿಳಿನ ಎಂ.ಜಿ.ಆರ್, ಶಿವಾಜಿಗಣೇಶನ್ ಅವರುಗಳಿಗೆ ನಾಯಕಿಯಾಗಿ, ತೆಲುಗಿನಲ್ಲಿ ಎನ್.ಟಿ.ಆರ್, ಹಿಂದಿಯಲ್ಲಿ ರಾಜ್ ಕಪೂರ್, ಶಮ್ಮೀ ಕಪೂರ್, ಸುನಿಲ್ ದತ್, ದಿಲೀಪ್ ಕುಮಾರ್ ಅವರುಗಳಿಗೆ ನಾಯಕಿಯಾಗಿ ನಟಿಸಿದ ಪ್ರಭುದ್ದ ಕಲಾವಿದೆ; ಇಂತಹ ಕಲಾದೇವಿಯನ್ನು ಪಡೆದ ನಾವು ನಿಜಕ್ಕೂ ಧನ್ಯ.

ಆರಂಭದಲ್ಲಿ ಕನ್ನಡ ಚಿತ್ರಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡು ನಂತರ ತಮಿಳು, ತೆಲುಗು ಹಾಗೂ ಹಿಂದಿಚಿತ್ರದಲ್ಲಿ ತೊಡಗಿಸಿಕೊಂಡು; ನಂತರ ಡಾ.ರಾಜ್ ಅವರೊಂದಿಗೆ ಮಲ್ಲಮ್ಮನ ಪವಾಡ ಚಿತ್ರದಲ್ಲಿ ಅಭಿನಯಿಸುವ ಮೂಲಕ ಕನ್ನಡ ಚಿತ್ರರಂಗದಲ್ಲಿ ತಮ್ಮ ಎರಡನೇ ಇನ್ನಿಂಗ್ಸ್ ಆರಂಭಿಸಿ, ನ್ಯಾಯವೇ ದೇವರು, ಶ್ರೀನಿವಾಸ ಕಲ್ಯಾಣ, ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ, ಬಬ್ರುವಾಹನ, ಭಾಗ್ಯವಂತರು ಮುಂತಾದ ಹಿಟ್ ಚಿತ್ರಗಳನ್ನು ಕೊಟ್ಟವರು ಬಿ.ಸರೋಜಾದೇವಿ. ಇವರ ಅಭಿನಯವನ್ನು ಮೆಚ್ಚಿದ ಯಶಸ್ಸನ್ನು ಕಂಡ ಡಾ.ರಾಜ್ ಅವರು, ಮಲ್ಲಮನ ಪವಾಡದಿಂದ ಪುನಃ ತವರಿಗೆ ಮರಳಿದ ನೀವು ಒಳ್ಳೆ ಪವಾಡವನ್ನೇ ಮಾಡಿಬಿಟ್ಟಿರಿ ಎಂದು ಅಭಿನಂದಿಸಿದ್ದನ್ನು ಮರೆಯುವಂತಿಲ್ಲ. ಡಾ.ರಾಜ್ ಹೇಳಿದಂತೆ, ಭಾಗ್ಯವಂತರು ಚಿತ್ರದಲ್ಲಿ ಬಿ.ಸರೋಜಾ ದೇವಿಯವರ ಅಭಿನಯ ಪರಾಕಾಷ್ಠತೆಯನ್ನು ತಲುಪಿ ಚಿತ್ರವನ್ನು ಯಶಸ್ವಿ ಚಿತ್ರಗಳ ಪಟ್ಟಿಗೆ ಸೇರಿಸಿಬಿಟ್ಟಿತು ಎಂದು ಅವರ ಅಭಿನಯವನ್ನು ಹೊಗಳಿದ್ದರಂತೆ. ಅದರ ನಂತರ ಡಾ.ರಾಜ್ ಸಂಸ್ಥೆಯ ನಿರ್ಮಾಣದ ಯಾರಿವನು ಚಿತ್ರದಲ್ಲಿ ಬಿ.ಸರೋಜಾದೇವಿಯರು ಇರಲೇಬೇಕೆಂದು ರಾಜ್ ಪಟ್ಟು ಹಿಡಿದು ಅವ್ರು ಆ ಚಿತ್ರದಲ್ಲಿ ಅಭಿನಯಿಸುವಂತೆ ಮಾಡಿದ್ದರಂತೆ. ನನಗೆ ತಿಳಿದಿರುವಂತೆ ಕಡೆಯದಾಗಿ ಅವರು ಕನ್ನಡದಲ್ಲಿ ಪುನೀತ್ ರಾಜ್ ಕುಮಾರ ಅಭಿನಯದ ನಟಸಾರ್ವಭೌಮ ಚಿತ್ರದಲ್ಲಿ ಚಿಕ್ಕ ಪಾತ್ರದಲ್ಲಿ ಅಭಿನಯಿಸಿ ಮನಸೂರೆಗೊಂಡಿದ್ದರು. ಇಂತಹ ಅಪರೂಪದ ದೇವಸುಂದರಿ ಭೌತಿಕವಾಗಿ ನಮ್ಮೊಡನೆ ಇಲ್ಲದಿದ್ದರೂ ಅವರ ಚಿತ್ರಗಳ ಮೂಲಕ ಕನ್ನಡಿಗರ ಮನದಾಳದಲ್ಲಿ ಉಳಿದಿದ್ದಾರೆ.

ಬಿ.ಸರೋಜಾ ದೇವಿ ಅವರದ್ದು ಪೂರ್ಣತ್ವದ ಜೀವನ, ಯಾವುದೇ ಕೊಬತೆ ಇಲ್ಲದ್ದೇ ಬದುಕಿ ಬಾಳಿದವರು. ಕನ್ನಡ ಸೇರಿದಂತೆ ಚತುರ್ಭಾಷೆಯ ಸಿನಿಮಾಗಳಲ್ಲಿ ನಟಿಸಿದ್ದಾರೆ. ಅವರೊಬ್ಬ ಅದ್ಭುತ ನಟಿ. ಸದಾ ನಗುತ್ತಾ ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದರು. ಚಿತ್ರರಂಗದ ದಿಗ್ಗಜ ನಟರ ಜತೆಗೆ ನಟಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

-ಲಕ್ಷ್ಮಿ ಹಿರಿಯ ನಟಿ

ಸರೋಜಾ ದೇವಿ ಅವ್ರು ನಮ್ಮ ಕುಟುಂಬಕ್ಕೆ ಆಪ್ತರಾಗಿದ್ದರು. ನಾವು ಭೇಟಿಯಾದಾಗಲೆಲ್ಲಾ ಅವರು ತಮ್ಮ ಜೀವನದ ಹಲವಾರು ವೈಯಕ್ತಿಕ ಘಟನೆಗಳನ್ನು ಹಂಚಿಕೊಂಡಿದ್ದರು. ಅವುಗಳಲ್ಲಿ ಹೆಚ್ಚಿನವು ಹಾಸ್ಯಮಯವಾಗಿದ್ದವು. ಅವರನ್ನು ಮಿಸ್ ಮಾಡಿಕೊಳ್ಳುತ್ತೇವೆ.

-ರಮ್ಯಾ ನಟಿ

ನಾನು ಅವರೊಂದಿಗೆ ಹಲವು ಚಿತ್ರಗಳಲ್ಲಿ ನಟಿಸಿದ್ದೇನೆ. ನನ್ನ ನಟನೆ ನೋಡಿ ಹೊಗಳುತ್ತಿದ್ದರು, ಪ್ರೋತ್ಸಾಹಿಸುತ್ತಿದ್ದರು. ಕನ್ನಡ ಚಿತ್ರರಂಗದಲ್ಲಿ ಸಮಸ್ಯೆ ಬಂದರೆ ಅದನ್ನು ಗಮನಹರಿಸಲು ಮುತುವರ್ಜಿ ವಹಿಸುತ್ತಿದ್ದರು. ಸರೋಜಾ ದೇವಿ ಅವರು ದೊಡ್ಡ ಮಟ್ಟಕ್ಕೆ ಬೆಳೆದಿದ್ದರೂ ಆದರೂ ಅವರಲ್ಲಿ ಅಹಂ ಇರಲಿಲ್ಲ. ಇನ್ನೂ ಕಲಿಯುವುದಿದೆ ಎನ್ನುತ್ತಿದ್ದರು. ಸದಾ ನಗುತ್ತಾ ಮಾತನಾಡುತ್ತಿದ್ದರು, ಆದರೆ ಆ ನಗು ಮಾಯವಾಗಿದೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ಎಲ್ಲರೂ ಸಾಗಬೇಕು.

-ಉಮೇಶ್ ಹಿರಿಯ ನಟ

ಸರೋಜಮ್ಮಾ ಅವರು ಚಿಕ್ಕಂದಿನಿಂದಲೂ ಪರಿಚಯ, ಅಪ್ಪಾಜಿ-ಅಮ್ಮನ ಜತೆಗೆ ಆತ್ಮೀಯವಾಗಿದ್ದ ಅವರು ನಮ್ಮ ಮನೆಯವರಂತೆ ಇದ್ದರು. ಕೊನೆಯವರೆಗೂ ಅಂದುಕೊಂಡಂತೆ ಬದುಕಿದವರು, ನಾನು ಅವರ ಜತೆ ನಟಿಸಿದೇನೆ. ಅವರನ್ನು ಕಳೆದುಕೊಂಡಿದ್ದು ದುಃಖ ತಂದಿದೆ.

-ರಾಘವೇಂದ್ರ ರಾಜ್‌ಕುಮಾರ್ ನಟ

ಸರೋಜಾ ದೇವಿ ಚಿತ್ರರಂಗದ ಮೇರು ನಟಿಯಾಗಿ ಗುರುತಿಸಿಕೊಂಡಿದ್ದರು. ಅವರ ನಟನೆಯ ನಟ ಸಾರ್ವಭೌಮ ಚಿತ್ರವನ್ನು ನಿರ್ಮಾಣ ಮಾಡುವ ಭಾಗ್ಯ ನನ್ನಗೆ ಸಿಕ್ಕಿತು. ಅವರು ಚಿತ್ರೀಕರಣದ ಸಂದರ್ಭದಲ್ಲಿ ಎಲ್ಲರಿಗೂ ಊಟ ತರಿಸಿಕೊಡುತ್ತಿದ್ದರು. ಎಲ್ಲರೂ ಸಂತಸದಿಂದ ಇರಬೇಕು ಎಂಬ ಆಸೆ ಅವರಿಗಿತ್ತು. ಅವರನ್ನು ಕಳೆದುಕೊಂಡು ಚಿತ್ರರಂಗ ಬಡವಾಗಿದೆ.

-ರಾಕ್‌ಲೈನ್ ವೆಂಕಟೇಶ್ ನಿರ್ಮಾಪಕ

ನಾನು ಒಂದು ವಾಹಿ ಯಲ್ಲಿ ಕುಳಿತು ಕಾರ್ಯಕ್ರಮ ದಲ್ಲಿ ಮಾತನಾಡುತ್ತಿದ್ದೆ, ಆಗ ಆ ಕಾರ್ಯಕ್ರಮಕ್ಕೆ ಕರೆ ಮಾಡಿದ ಸರೋಜಮ್ಮ , ನೀನು ಒಳ್ಳೆಯ ಕಲಾವಿದೆ, ತುಂಬಾ ಚೆನ್ನಾ ಗಿ ನಟಿಸುತ್ತೀಯಾ ಇನ್ನು ಚಿತ್ರಗಳಲ್ಲಿ ನಟಿಸು ಎಂದು ಪ್ರೋತ್ಸಾಹಿಸುತ್ತಿದ್ದರು. ನನ್ನನ್ನು ಮಗಳಂತೆಯೇ ಕಾಣುತ್ತಿ ದ್ದರು. ನಮ್ಮ ಮನೆಗೆ ಬಂದಾಗಲೆಲ್ಲ ರಂಗ ಭೂಮಿ ಕಥೆಗಳ ಬಗ್ಗೆಯೇ ನನ್ನ ಅಮ್ಮನ ಜತೆಗೆ ಕುಳಿತು ಮೆಲುಕು ಹಾಕುತ್ತಿದ್ದರು.

ಶ್ರುತಿ ನಟಿ

ಅಭಿನಯ ಸರಸ್ವತಿ ಎಂದೇ ಹೆಸರಾದ ಬಹುಭಾಷಾ ತಾರೆ ಸರೋಜ ದೇವಿ ಅವರು ತಮ್ಮ ಮೊಹರಿತೆಯೊಂದಿಗೆ ಹೊರಟಿದ್ದಾರೆ.ಹಲವು ಭಾಷೆಗಳ ಪ್ರೌಢಿಮೆ ಹೊಂದಿದ್ದ ಅವರು ಅನೇಕ ದಿಗ್ಗಜರೊಂದಿಗೆ ನಟಿಸಿ ತಾನೇ ಪಾತ್ರವಾಗಿ ಬೆಳ್ಳಿತೆರೆಯಲ್ಲಿ ಶಾಶ್ವತವಾಗಿ ಉಳಿದಿದ್ದಾರೆ. ಪಾರಿಜಾತ ಪುಷ್ಪವೊಂದು ತನ್ನ ಪರಿಮಳದೊಂದಿಗೆ ತುಂಬು ಜೀವನ ನಡೆಸಿ ನಮ್ಮನ್ನು ಆಗಲಿ ಹೊರಟಿದೆ. ಕಲಾ ಸರಸ್ವತಿಗೆ ವಿನಯಪೂರ್ವಕ ನಮನ.

-ಕಿಚ್ಚ ಸುದೀಪ್ ನಟ

ಕನ್ನಡ ಚಿತ್ರರಂಗದ ಹಿರಿಯ ನಟಿ ಬಿ. ಸರೋಜಾದೇವಿ ಕಿತ್ತೂರು ರಾಣಿ ಚೆನ್ನಮ್ಮನ ಪಾತ್ರಕ್ಕೆ ನೈಜತೆ ತಂದಿದ್ದರು. ಅವರ ನಿಧನ ಕರ್ನಾಟಕದ ಕಲಾಕ್ಷೇತ್ರಕ್ಕೆ ಅತ್ಯಂತ ದುಃಖದ ದಿನ. ಅಭಿನಯದ ಜೊತೆ ಗಾಂಭೀರತೆಯಲ್ಲಿ ಅಗ್ರಮಾನ್ಯರಾಗಿದ್ದರು. ಐದು ದಶಕದಿಂದ ಚಿತ್ರರಂಗದಲ್ಲಿ ನಟಿಸಿದ್ದು, ನಮ್ಮನ್ನೆಲ್ಲಾ ಅಗಲಿದ್ದಾರೆ. ಆದರೂ ಅವರ ಅಭಿನಯದ ಮೂಲಕ ನಮ್ಮ ಮನದಲ್ಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ.

-ಬಸವರಾಜ ಬೊಮ್ಮಾಯಿ ಸಂಸದ



ವಿಶ್ವವಾಣಿ

ಸಂಪಾದಕೀಯ

ಈ ಅಕ್ರಮವು ಸಕ್ರಮ ಆಗದಿರಲಿ

ಬಿಹಾರ ವಿಧಾನಸಭೆಗೆ ಈ ವರ್ಷದ ಅಕ್ಟೋಬರ್-ನವೆಂಬರ್ ಸುಮಾರಿಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಗೆ ಮುಂದಾದಾಗ ನೇಪಾಳ, ಬಾಂಗ್ಲಾ ಮತ್ತು ಮ್ಯಾನ್ಮಾರ್ ದೇಶಗಳ ಪ್ರಜೆಗಳ ಹೆಸರು ಗಣನೀಯ ಸಂಖ್ಯೆಯಲ್ಲಿ ಪತ್ತೆಯಾಗಿರುವುದು ವರದಿಯಾಗಿದೆ. ಇದು ನಿಜಕ್ಕೂ ಆಘಾತಕಾರಿ ಸಂಗತಿಯೇ ಸರಿ. ಈ ಅನ್ಯದೇಶಿಗರು ತಮ್ಮದಲ್ಲದ ದೇಶದಲ್ಲಿ ಹೀಗೆ ನೆಲೆಸುವುದಕ್ಕೆ ಸಾಧ್ಯವಾಗಿದ್ದಾರೂ ಹೇಗೆ? ಅಂಥದೊಂದು ಧಾರ್ಷ್ಟ್ಯವನ್ನು ಅವರಲ್ಲಿ ತುಂಬಿದ ಅಂಶವಾದರೂ ಯಾವುದು? ಅದರ ಹಿಂದಿರುವ ಶಕ್ತಿಗಳು ಯಾರು? ಎಂಬೆಲ್ಲ ಪ್ರಶ್ನೆಗಳು ಈ ಸಂದರ್ಭದಲ್ಲಿ ಉದ್ಭವಿಸುವುದು ಸಹಜವೇ. ಪಶ್ಚಿಮ ಬಂಗಾಳ ರಾಜ್ಯದ ಗಡಿಭಾಗವು ಅಕ್ರಮ ನುಸುಳುಕೋರರ ಪಾಲಿಗೆ 'ಮಹಾದ್ವಾರ'ವೇ ಆಗಿಬಿಟ್ಟಿವೆ ಎಂಬ ಮಾತು ಆಗಾಗ ಕೇಳಿಬರುವುದಿದೆ (ಇದು ಸಾಕಷ್ಟು ವರ್ಷಗಳ ಹಿಂದೆ ಜಮ್ಮು-ಕಾಶ್ಮೀರದಲ್ಲೂ ಕಾಣಬರುತ್ತಿದ್ದ ವಸ್ತುಸ್ಥಿತಿಯಾಗಿದ್ದು ಈಗ ತಹಬಂದಿಗೆ ಬಂದಿದೆ ಎನ್ನಿ). ಆದರೆ ಅಕ್ರಮ ನುಸುಳುಕೋರರಿಗೆ ತಕ್ಕ ಶಾಸ್ತಿ ಮಾಡದೆ, ತಮ್ಮ ವೋಟ್‌ಬ್ಯಾಂಕ್ ರಾಜಕಾರಣದ ತಳಹದಿಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಲೆಂದು ಇವರಿಗೆ ವಾಮಮಾರ್ಗದಲ್ಲಿ ವಿಳಾಸದ ಪುರಾವೆಯನ್ನು ದಕ್ಕಿಸಿಕೊಡಲಾಗುತ್ತಿದೆ ಎಂಬುದೂ ಆಗಾಗ ಕಿವಿಗೆ ಅಪ್ಪಳಿಸುವ ಆರೋಪ. ಇದು ಒಂದೊಮ್ಮೆ ನಿಜವಾಗಿದ್ದಲ್ಲಿ, ಇಂಥ ಪರಿಪಾಠಗಳಿಗೆ ಆದಷ್ಟು ಬೇಗ ತಿಲಾಂಜಲಿ ನೀಡಬೇಕಾದ್ದು ಇಂಥ ಆಶ್ರಯದಾತರ ಆದ್ಯಕರ್ತವ್ಯವಾಗಬೇಕು. ಅಕ್ರಮ ನುಸುಳುಕೋರರಿಂದ ಇಂಥ 'ಆಶ್ರಯದಾತ'ರಿಗೆ ತಾತ್ಪೂರ್ತಿಕ ಪ್ರಯೋಜನ ದಕ್ಕಿರಬಹುದು; ಆದರೆ ಅದು ದೇಶದ ಏಕತೆ, ಸಮಗ್ರತೆ, ಭದ್ರತೆ ಮತ್ತು ಸಾರ್ವಭೌಮತೆಗಳಿಗೆ ಸಂಚಕಾರ ತರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಪ್ರಪಂಚದ ವಿವಿಧೆಡೆಗಳಲ್ಲಿ 'ಭೂರಾಜಕೀಯ' ಎಂಬುದು ದಿನಕ್ಕೊಂದು ಹೊಸ ಆಯಾಮವನ್ನು ದಕ್ಕಿಸಿಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ, ದೇಶದ ಸುರಕ್ಷತೆ ಮತ್ತು ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಎಚ್ಚರದಲ್ಲಿ ನಾವು ಇರಬೇಕಾದ ಅಗತ್ಯವಿದೆ.

ಸೊಂಪಾದಕೀಯ

ಸಂಸಾರ ಸಾಗರ ಮತ್ತು ಕ್ಷೀರಸಾಗರ

ಹೆಂಡತಿ ಕಾಟದಿಂದ ಬೇಸತ್ತ ಪತಿಯೊಬ್ಬ ವಿಚ್ಛೇದನ ಪಡೆದು ಹಾಲಿನಲ್ಲಿ ಸ್ನಾನ ಮಾಡಿ ಖುಷಿ ಪಟ್ಟ ಘಟನೆ ವರದಿ ಆಗಿದೆ. ಇದೇನಿದು ಎಲ್ಲರೂ ಬಾತ್‌ರೂಮಲ್ಲಿ ತಾನೇ ಸ್ನಾನ ಮಾಡೋದು, ಹಾಲಿನಲ್ಲಿ ಯಾರು ಸ್ನಾನ ಮಾಡ್ತಾರೆ ಅಂತ ಕನ್‌ಫ್ಯೂಸ್ ಆಗಬೇಡಿ. ಇದು ಅಕ್ಷರಶಃ ಹಾಲು, ಅಂದ್ರೆ ಕ್ಷೀರಸ್ನಾನ. ಸಂಸಾರ ಸಾಗರದಲ್ಲಿ ಈಜಿ ದಡ ಸೇರೋದು ಅಷ್ಟು ಸುಲಭ ಅಲ್ಲ ಅಂತ ಇತ್ತೀಚಿನ ದಿನಗಳಲ್ಲಿ ಪ್ರೂವ್ ಆಗ್ತಾ ಇದೆ. ದಡ ಸೇರೋದು ಇರಲಿ ಸಂಬಂಧಗಳ ಪಾತ್ರೆಯೇ ಸೋರುತ್ತಾ ಇದೆ. ಒಂದು ಕಡೆ ವಿಚ್ಛೇದನದ ಸಮಸ್ಯೆ ಆದರೆ ಇನ್ನೊಂದು ಕಡೆ ಸಂಗಾತಿಯನ್ನು ಕೊಲೆ ಮಾಡುವ ಹಂತ ತಲುಪಿರುವ ಸಂಬಂಧಗಳು ಸಮಾಜದ ಸ್ವಾಸ್ಥ್ಯಗೆಡಿಸಿವೆ. ಸಾವು ಒಂದೇ ಸಲಕ್ಕೆ ಸಿಗುವ ಪರಿಹಾರ ಆದ್ರೆ, ಜೀವನ ಪೂರ್ತಿ ಪರಿಹಾರ ಕೊಡಬೇಕಾದ ವಿಚ್ಛೇದನ ಅದಕ್ಕಿಂತಲೂ ದೊಡ್ಡ ಸಮಸ್ಯೆ ಆಗಿದೆ. ಹೀಗೆ ಸಂಸಾರ ಸಾಗರದಲ್ಲಿ ಸಾರವಿಲ್ಲದೇ ಬದುಕುತ್ತಿದ್ದ ವ್ಯಕ್ತಿಯೊಬ್ಬರು ಹಾಲಿನಿಂದ ಸ್ವತಃ ಅಭಿಷೇಕ ಮಾಡಿಕೊಂಡು ಸಂಭ್ರಮಿಸಿದ್ದಾರೆ. ಅಸ್ಸಾಂನ ಮಾಣಿಕ್ ಅಲಿ ತಮ್ಮ ಮನೆಯ ಎದುರು ನಿಂತು ಸಾರ್ವಜನಿಕವಾಗಿ ಹಾಲಿನಲ್ಲಿ ಸ್ನಾನ ಮಾಡಿದ್ದಾರೆ. ಅವರ ಈ ಸಂಭ್ರಮಕ್ಕೆ ಕಾರಣ ಪತ್ನಿಯಿಂದ ವಿಚ್ಛೇದನ ಸಿಕ್ಕಿದ್ದು. ಮನೆಯ ಮುಂದೆ ನಿಂತು ನಾಲ್ಕು ಬಕೆಟ್ ಹಾಲನ್ನು ತಲೆ ಮೇಲೆ ಸುರಿದುಕೊಂಡು 'ಇಂದಿನಿಂದ ನಾನು ಸ್ವತಂತ್ರನಾಗಿದ್ದೇನೆ' ಅಂತ ಘೋಷಣೆ ಮಾಡಿದ್ದಾರೆ. ಹೆಂಡತಿ ತನ್ನ ಪ್ರೇಮಿಯೊಂದಿಗೆ ಕಳ್ಳಾಟ ಆಡುತ್ತಿದ್ದುದು ಗಂಡನ ಗಮನಕ್ಕೆ ಬಂದಿದೆ. ಅದಲ್ಲದೆ ಇದಕ್ಕೂ ಮೊದಲು ಎರಡು ಬಾರಿ ಆಕೆ ಪ್ರಿಯಕರನೊಂದಿಗೆ ಓಡಿಹೋಗಿದ್ದಳಂತೆ. ಹಾಗಾಗಿ ಅವಳಿಂದ ದೂರಾಗಲು ಪತಿರಾಯ ಸತತ ಪ್ರಯತ್ನ ಪಟ್ಟಿದ್ದಾನೆ. ಆದರೆ ಅದು ಹಾಲು ಕುಡಿದಷ್ಟು ಸಲೀಸು ಅಲ್ಲ ಅನ್ನೋದು ಡಿವೋರ್ಸ್ ಕೇಸುಗಳಲ್ಲಿ ಕೋರ್ಟು ಅಲೆದವರಿಗೆ ಚೆನ್ನಾಗಿ ಗೊತ್ತು. ಹಾಗಾಗಿ ಆ ಎಲ್ಲ ತಲ್ಲಣಗಳನ್ನು ಅನುಭವಿಸಿದ ಮೇಲೆ ಕೊನೆಗೂ ಹೆಂಡತಿಯಿಂದ ಮುಕ್ತಿ ಸಿಕ್ಕಿರೋ ಖುಷಿಯಲ್ಲಿ ಕ್ಷೀರಸಾಗರದಲ್ಲಿ ಮುಳುಗಿದ್ದಾನೆ ಪತಿರಾಯ. ಸಂಸಾರ ಅಂದ್ರೆ ಹಾಲು-ಜೇನು ಥರ ಇರಬೇಕು, ಇಲ್ಲಾಂದ್ರೆ, ಡಿವೋರ್ಸ್ ಸಿಕ್ಕಮೇಲೆ ಹಾಲಿನಲ್ಲಿ ಸ್ನಾನ ಮಾಡ್ಬೇಕು ಅನ್ನೋದು ಈತನ ಇರಾದೆ ಅನ್ಸುತ್ತೆ.

ಸಂಪಾದಕರ ಸದ್ಯಶೋಧನೆ

ಪೈಲಟ್ ಮತ್ತು ಪರಿಸ್ಥಿತಿ ಅರಿವು

ವಿಮಾನದ ಪೈಲಟ್‌ಗಳ ಪರಿಸ್ಥಿತಿಯ ಅರಿವು (Situational Awareness) ಮತ್ತು ಚುರುಕಾಗಿ ನಿರ್ಧಾರ ತೆಗೆದುಕೊಳ್ಳುವ ಗುಣಗಳನ್ನೂ ಅತ್ಯಂತ ಉತ್ತಮ ಅರ್ಹತೆ ಎಂದು ಪರಿಗಣಿಸಲಾಗುತ್ತದೆ. ಕೆಲವು ಸಲ ವಿಮಾನ ಅಪಘಾತಗಳು ಯಾಂತ್ರಿಕ ವೈಫಲ್ಯಗಳಿಂದಲ್ಲ, ಬದಲಿಗೆ ಪೈಲಟ್ ನಿರ್ಧಾರದಿಂದ ಆಗುತ್ತವೆ. ಪೈಲಟ್ ಪರಿಸ್ಥಿತಿಯ ಅರಿವನ್ನು ಕಳೆದುಕೊಳ್ಳುವುದರಿಂದ ಸಂಭವಿಸುತ್ತವೆ. ಹಾಗಾದರೆ ಪರಿಸ್ಥಿತಿಯ ಅರಿವು ಎಂದರೇನು? ಇದು ಆಕಾಶದಲ್ಲಿನ ಮಾನಸಿಕ ನಕ್ಷೆ ಇದ್ದಂತೆ. ಈಗ ನಿಖರವಾಗಿ ಎಲ್ಲಿದ್ದೇನೆ, ಈಗ ಏನಾಗುತ್ತಿದೆ ಮತ್ತು ಮುಂದೆ ಏನಾಗಲಿದೆ ಎಂಬುದನ್ನು ಪೈಲಟ್ ತಿಳಿದಿರುವುದು. ಉತ್ತಮ ಪೈಲಟ್‌ಗಳು ಹಾರಾಟದ ಸಮಯದಲ್ಲಿ ನಿರಂತರವಾಗಿ ಈ ಚಿತ್ರಣವನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳುತ್ತಾರೆ. ಇದು ಕೇವಲ ಮಾಹಿತಿಯನ್ನು ಸಂಗ್ರಹಿಸುವುದಲ್ಲ, ಬದಲಿಗೆ ಆ ಮಾಹಿತಿಯನ್ನು ಅರ್ಥೈಸಿಕೊಂಡು ಭವಿಷ್ಯದ ಬಗ್ಗೆ ಊಹಿಸುವ ಸಾಮರ್ಥ್ಯವಾಗಿದೆ. ಪರಿಸ್ಥಿತಿಯ ಅರಿವನ್ನು ಮೂರು ಮುಖ್ಯ ಹಂತಗಳಲ್ಲಿ ವಿಂಗಡಿಸಬಹುದು. ಮೊದಲನೆಯದು, ಗ್ರಹಿಕೆ (Perception). ಇದು ಸುತ್ತಮುತ್ತಲಿನ ಪರಿಸರದಿಂದ ಮಾಹಿತಿಯನ್ನು ಸಂಗ್ರಹಿಸುವ ಹಂತ. ಪೈಲಟ್‌ಗಳು ವಿಮಾನದ ಉಪಕರಣಗಳಿಂದ (ಆಲ್ಟಿಮೀಟರ್, ಏರ್‌ಸ್ಪೀಡ್ ಇಂಡಿಕೇಟರ್, ಹೆಡಿಂಗ್ ಇಂಡಿಕೇಟರ್ ಇತ್ಯಾದಿ), ಹೊರಗಿನ ದೃಶ್ಯಗಳು (ಹವಾಮಾನ, ಭೂಪ್ರದೇಶ, ಇತರ ವಿಮಾನಗಳು), ರೇಡಿಯೋ ಸಂವಹನಗಳು ಮತ್ತು ಸಿಬ್ಬಂದಿಯಿಂದ (ಸಹ-ಪೈಲಟ್, ಏರ್ ಟ್ರಾಫಿಕ್ ಕಂಟ್ರೋಲ್) ಮಾಹಿತಿಯನ್ನು ಪಡೆಯುತ್ತಾರೆ. ಇಲ್ಲಿ ಪ್ರತಿಯೊಂದು ಸಣ್ಣ ವಿವರವೂ ಮುಖ್ಯವಾಗುತ್ತದೆ. ಉದಾಹರಣೆಗೆ, ಹೊರಗಿನ ಮೋಡಗಳ ವಿಧ, ದೂರದಲ್ಲಿರುವ ವಿಮಾನದ ದೀಪಗಳು, ಇಂಧನ ಮಟ್ಟದ ಸೂಚಕ- ಇವೆಲ್ಲವೂ ಗ್ರಹಿಕೆಯ ಭಾಗವೇ. ಎರಡನೆಯದು, ಅರ್ಥೈಸುವಿಕೆ (Comprehension. ಸಂಗ್ರಹಿಸಿದ ಮಾಹಿತಿಯನ್ನು ಏನೆಂದು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಗ್ರಹಿಸಿದ ಪ್ರತಿಯೊಂದು ಮಾಹಿತಿಗೂ ಒಂದು ಅರ್ಥವನ್ನು ನೀಡುವುದು ಈ ಹಂತದಲ್ಲಿಯೇ. ಉದಾಹರಣೆಗೆ, ಉಪಕರಣವು ಕಡಿಮೆ ಇಂಧನ ಮಟ್ಟವನ್ನು ತೋರಿಸಿದರೆ, ಅದನ್ನು 'ಇಂಧನ ಕಡಿಮೆಯಾಗಿದೆ' ಎಂದು ಅರ್ಥೈಸುವುದು. ಅದೇ ರೀತಿ, ಮೋಡಗಳು ದಟ್ಟವಾಗಿದ್ದರೆ, ಅದು ಮುಂದೆ ಬಿರುಗಾಳಿಯ ಸಂಕೇತವಾಗಿರಬಹುದು ಎಂದು ಅರ್ಥಮಾಡಿಕೊಳ್ಳುವುದು. ಈ ಹಂತದಲ್ಲಿ, ಪೈಲಟ್ ವಿವಿಧ ಮಾಹಿತಿಗಳ ನಡುವೆ ಸಂಬಂಧಗಳನ್ನು ಗುರುತಿಸುತ್ತಾರೆ ಮತ್ತು ಅವು ಒಟ್ಟಾಗಿ ಯಾವ ಚಿತ್ರಣವನ್ನು ನೀಡುತ್ತವೆ ಎಂಬುದನ್ನು ಗ್ರಹಿಸುತ್ತಾರೆ. ಮೂರನೆಯದು, ಅಂದಾಜು/ಮುನ್ಸೂಚನೆ (Projection). ಅರ್ಥೈಸಿಕೊಂಡ ಮಾಹಿತಿಯ ಆಧಾರದ ಮೇಲೆ ಭವಿಷ್ಯದಲ್ಲಿ ಏನಾಗಬಹುದು ಎಂದು ಊಹಿಸುವುದು ಸಹ ಅಷ್ಟೇ ಮುಖ್ಯ. ಇದು ಪರಿಸ್ಥಿತಿಯ ಅರಿವಿನ ಅತ್ಯಂತ ಪ್ರಮುಖ ಹಂತ. 'ಈಗಿರುವ ಪರಿಸ್ಥಿತಿ ಮುಂದುವರಿದರೆ ಮುಂದೆ ಏನಾಗಬಹುದು?' ಎಂದು ಪ್ರಶ್ನಿಸುವುದು. ಉದಾಹರಣೆಗೆ, 'ಇಂಧನ ಕಡಿಮೆಯಾಗುತ್ತಿದೆ ಮತ್ತು ಗಾಳಿ ಎದುರಾಗಿದೆ, ಮುಂದಿನ 30 ನಿಮಿಷಗಳಲ್ಲಿ ನಾವು ಸುರಕ್ಷಿತವಾಗಿ ಇಳಿಯುವ ವಿಮಾನ ನಿಲ್ದಾಣವನ್ನು ತಲುಪಲು ಸಾಕಷ್ಟು ಇಂಧನವಿದೆಯೇ?' ಎಂದು ಊಹಿಸಿ, ಕ್ರಮಕೈಗೊಳ್ಳುವುದು. ಈ ಹಂತವು ಪೈಲಟ್‌ಗೆ ಅಪಾಯಗಳನ್ನು ಮೊದಲೇ ಗುರುತಿಸಲು ಮತ್ತು ಅವು ದೊಡ್ಡ ಸಮಸ್ಯೆಯಾಗುವ ಮೊದಲು ಪರಿಹಾರಗಳನ್ನು ಕಂಡು ಹಿಡಿಯಲು ಸಹಾಯ ಮಾಡುತ್ತವೆ. ಸಂಗ್ರಹಿಸಿದ ಡೇಟಾವನ್ನು ವಿಮಾನದ ಕಾರ್ಯಕ್ಷಮತೆ, ಹಾರಾಟದ ಯೋಜನೆ ಮತ್ತು ಸುರಕ್ಷತಾ ನಿಯಮಗಳಿಗೆ ಸಂಬಂಧಿಸಿ ವಿಶ್ಲೇಷಿಸುವುದು ಸಹ ಮುಖ್ಯ. ಉದಾಹರಣೆಗೆ, ಎದುರುಗಾಳಿ ಹೆಚ್ಚಾದರೆ, ಇಂಧನ ಬಳಕೆ ಹೆಚ್ಚಾಗುತ್ತದೆ ಮತ್ತು ಗಮ್ಯಸ್ಥಾನವನ್ನು ತಲುಪಲು ಹೆಚ್ಚು ಸಮಯ ಬೇಕಾಗುತ್ತದೆ ಎಂದು ಅರ್ಥಮಾಡಿಕೊಳ್ಳುವುದು. ಪರಿಸ್ಥಿತಿಯ ಅರಿವಿರುವ ಪೈಲಟ್ ವಿಮಾನಕ್ಕಿಂತ ಮಾನಸಿಕವಾಗಿ ಮುಂದೆ ಇರುತ್ತಾನೆ. ಆತ ಎಂದೂ ತಡವಾಗಿ ಪ್ರತಿಕ್ರಿಯಿಸುವುದಿಲ್ಲ. ಇದರರ್ಥ ಯಾವಾಗಲೂ ವಿಮಾನದ ಮುಂದಿನ ಹಂತಗಳ ಬಗ್ಗೆ ಯೋಚಿಸುವುದು. 'ಮುಂದಿನ ಐದು ನಿಮಿಷಗಳಲ್ಲಿ ನಾವು ಏನನ್ನು ನಿರೀಕ್ಷಿಸಬಹುದು?' ಎಂದು ಪ್ರಶ್ನಿಸಿಕೊಳ್ಳುವುದು. ಒಂದು ಸಮಸ್ಯೆ ಸಂಭವಿಸಿದಾಗ ಪ್ರತಿಕ್ರಿಯಿಸುವುದಕ್ಕಿಂತ, ಅದು ಸಂಭವಿಸುವುದನ್ನು ಮೊದಲೇ ಊಹಿಸಿ ಸಿದ್ಧರಾಗಿರುವುದು ಉತ್ತಮ. ಇವು ಉತ್ತಮ ಪೈಲಟ್ ಲಕ್ಷಣಗಳು.

ಹೈಕಮಾಂಡ್ ಅನ್ನೇ ಇಕ್ಕಟ್ಟಿಗೆ ಸಿಲುಕಿಸಿದ ಕರ್ನಾಟಕ

ಕರ್ನಾಟಕದಲ್ಲಿ ಕಾಂಗ್ರೆಸ್ ಭಾರಿ ಗೆಲುವು ಸಾಧಿಸುವುದರೊಂದಿಗೆ ಗದ್ದುಗೆ ಹಿಡಿಯುವಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರ ಪಾತ್ರವೂ 'ಸಮ'ನಾಗಿದೆ. ಆ ಕಾರಣಕ್ಕಾಗಿಯೇ ಈ ಇಬ್ಬರೂ 'ಮುಖ್ಯಮಂತ್ರಿ' ಗಾದಿಯ ಮೇಲೆ ಕಣ್ಣಿಟ್ಟಿದ್ದರು.

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com
ranjith.hoskere@gmail.com

ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ ಎನ್ನುವ ಹಣೆಪಟ್ಟಿಯಲ್ಲಿಯೇ ದೇಶದ ಬಹುಪಾಲು ರಾಜ್ಯಗಳನ್ನು ದಶಕಗಳ ಕಾಲ ಆಳಿದ ಕಾಂಗ್ರೆಸ್ ಕಳೆದ ಒಂದೂವರೆ ದಶಕದವರೆಗೂ ಅದೇ 'ಟ್ರೆಂಡ್'ನಲ್ಲಿತ್ತು. ಸೋನಿಯಾ ಗಾಂಧಿ ಅವರು ಸಕ್ರಿಯ ರಾಜಕಾರಣದಿಂದ ದೂರ ಸರಿದು ರಾಹುಲ್ ಗಾಂಧಿಯವರಿಗೆ ಪಟ್ಟಕಟ್ಟಿದ ದಿನದಿಂದ ಕಾಂಗ್ರೆಸ್‌ನ ಪರಿಸ್ಥಿತಿ ಭಿನ್ನವಾಗಿದೆ. ಈ ಹಿಂದೆ ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡರೆ ಆಡಳಿತ ಪಕ್ಷದ ಸಾಲಿನಲ್ಲಿ ಕೂರುತ್ತೇವೆ ಎನ್ನುವ ಸ್ಥಿತಿಯಲ್ಲಿ ಬಹುತೇಕ ಪ್ರಾದೇಶಿಕ ಪಕ್ಷಗಳಿದ್ದವು. ಆದರಿಂದು, ಕಾಂಗ್ರೆಸ್ ಪಕ್ಷವೇ ಪ್ರಾದೇಶಿಕ ಪಕ್ಷಗಳನ್ನು 'ನಿಮ್ಮೊಂದಿಗೆ ನಮ್ಮನ್ನು ಸೇರಿಸಿಕೊಳ್ಳಿ' ಎಂದು ಹೇಳಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ.

ಗತವೈಭವವನ್ನು ನೋಡಿದ್ದ ಕಾಂಗ್ರೆಸ್ ಹೈಕಮಾಂಡ್ ಇಂದು ಹೇಗಾದರೂ ಸರಿ ಪಕ್ಷದ ಅಸ್ತಿತ್ವ ಉಳಿದರೆ ಸಾಕೆಂಬ ಮನಸ್ಥಿತಿಗೆ ಬಂದಿದೆ. ಆದರೆ ಕರ್ನಾಟಕದಲ್ಲಿ ಮಾತ್ರ ಇಂದಿಗೂ ಪಕ್ಷ ಬಲಿಷ್ಠ ಎನಿಸಿಕೊಂಡಿದೆ. ಈ ಕಾರಣಕ್ಕಾಗಿಯೇ ರಾಷ್ಟ್ರೀಯ ಕಾಂಗ್ರೆಸ್ ಪಾಲಿಗೆ ಇಂದಿಗೂ ಕರ್ನಾಟಕವೇ ಆಶಾದಾಯಕ ರಾಜ್ಯ ಎನ್ನುವುರಲ್ಲಿ ಅನುಮಾನವಿಲ್ಲ. 2020ರಲ್ಲಿ ಸಮ್ಮಿಶ್ರ ಸರಕಾರ ಪತನಗೊಂಡರೂ, ಕರ್ನಾಟಕದಲ್ಲಿ ಕಾಂಗ್ರೆಸ್ ಸದ್ದು ಮಾತ್ರ ಕಮ್ಮಿಯಾಗಿರಲಿಲ್ಲ. 2023ರ ವಿಧಾನಸಭಾ ಚುನಾವಣೆಯ ವೇಳೆಯಲ್ಲಿ ಅಂದಿನ ಬಿಜೆಪಿ ಸರಕಾರದ ವಿರುದ್ಧದ ನಿರಂತರ ಹೋರಾಟ ಹಾಗೂ ದೇಶಕ್ಕೆ 'ಮಾದರಿ' ಎನಿಸುವ ಗ್ಯಾರಂಟಿ ಘೋಷಣೆಗಳಿಂದ ಅಧಿಕಾರದ ಗದ್ದುಗೆ ಏರಲು ಹೈಕಮಾಂಡ್‌ನ ಸಹಕಾರಕ್ಕಿಂತ ಹೆಚ್ಚಾಗಿ ರಾಜ್ಯ ನಾಯಕತ್ವವೇ ಕಾರಣ ಎನ್ನುವುದು ಸ್ವತಃ ದಿಲ್ಲಿ ನಾಯಕರಿಗೂ ಗೊತ್ತಿರುವ ಅಂಶ.

ರಾಜ್ಯದಲ್ಲಿ 137 ಶಾಸಕರ (ಉಪಚುನಾವಣೆ ಬಳಿಕ 140) ಬಲದೊಂದಿಗೆ ಅಧಿಕಾರದ ಗದ್ದುಗೆ ಏರಿದ ಕಾಂಗ್ರೆಸ್ ಈ ಪ್ರಮಾಣದಲ್ಲಿ ಗೆಲುವು ಸಾಧಿಸುವುದರ ಹಿಂದೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ನಾಯಕತ್ವವಿರುವುದು ಸ್ಪಷ್ಟ. ಈ ಇಬ್ಬರ ಬಲಿಷ್ಠ ನಾಯಕತ್ವದಿಂದಾಗಿಯೇ ಕರ್ನಾಟಕದಲ್ಲಿ ಸುಭದ್ರ ಸರಕಾರ ರಚಿಸುವಲ್ಲಿ ಪಕ್ಷ ಪ್ರಮುಖ ಪಾತ್ರ ವಹಿಸಿತು. ಆದರೆ ಈ ಇಬ್ಬರು ನಾಯಕರೇ ಇಂದು ಹೈಕಮಾಂಡ್ ಪಾಲಿಗೆ ನುಂಗಲಾರದ ತುತ್ತಾಗಿದ್ದಾರೆ.

ಸಂಕಷ್ಟದ ಬಗ್ಗೆ ಮಾತನಾಡುವ ಮೊದಲು, 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೀಡಿದ್ದ 'ಪಂಚ ಗ್ಯಾರಂಟಿ'ಗಳ ಹೊರತಾಗಿಯೂ 123ರ ಸಂಖ್ಯಾಬಲವನ್ನು ಕಾಂಗ್ರೆಸ್ ಏಕಾಂಗಿಯಾಗಿ ದಾಟಲಿದೆ ಎನ್ನುವ ಯಾವ ವಿಶ್ವಾಸವೂ ಸ್ವತಃ ಕಾಂಗ್ರೆಸ್ ನಾಯಕರಿಗೆ ಇರಲಿಲ್ಲ. ಸರಳ ಬಹುಮತ ಬಂದರೂ, ಬಿಜೆಪಿ ಬಳಿಯಿರುವ 'ಆಪರೇಷನ್ ಕಮಲ' ಎನ್ನುವ ಅಸ್ತ್ರದಿಂದ ಪಾರಾಗುವುದು ಹೇಗೆ ಎನ್ನುವ ಆತಂಕದಲ್ಲಿಯೇ ದೆಹಲಿ ನಾಯಕರಿದ್ದರು. ಬಲಿಷ್ಠ ರಾಜ್ಯಗಳಲ್ಲಿ ಈಗಾಗಲೇ ಮೂರು ಅಥವಾ ನಾಲ್ಕನೇ ಸ್ಥಾನಕ್ಕೆ ಕುಸಿದಿರುವ ಕಾಂಗ್ರೆಸ್‌ಗೆ ಕರ್ನಾಟಕದಲ್ಲಿ ಅಧಿಕಾರದ ಗದ್ದುಗೆ ಏರುವುದು ಅನಿವಾರ್ಯವಾಗಿತ್ತು. ಈ ಕಾರಣಕ್ಕಾಗಿಯೇ 120ರ ಗಡಿ ದಾಟುತ್ತಿದ್ದಂತೆ ಕೈ ಶಾಸಕರು ಬಿಜೆಪಿಗೆ ಸಿಗದಿರಲಿ ಎಂದು 'ರೆಸಾರ್ಟ್'ಗಳನ್ನು ಬುಕ್ ಮಾಡುವಂತೆ ರಾಜ್ಯ ಉಸ್ತುವಾರಿ ಸೂಚನೆ ನೀಡಲಾಗಿತ್ತು. ಆದರೆ ಅಂತಿಮ ಫಲಿತಾಂಶ 137 ಆಗುತ್ತಿದ್ದಂತೆ ಈ ಎಲ್ಲ ಆತಂಕ ದೂರಾಗಿ ಕರ್ನಾಟಕದಲ್ಲಿ ಐದು ವರ್ಷ ಸುಭದ್ರ ಸರಕಾರ ಎನ್ನುವ ವಿಶ್ವಾಸ ದಿಲ್ಲಿ ನಾಯಕರಿಗೆ ಮೂಡಿತ್ತು.

ಕರ್ನಾಟಕದಲ್ಲಿ ಕಾಂಗ್ರೆಸ್ ಈ ಪ್ರಮಾಣದಲ್ಲಿ ಗೆಲುವು ಸಾಧಿಸುವುದರೊಂದಿಗೆ ಅಧಿಕಾರಯುತವಾಗಿ ಗದ್ದುಗೆ ಹಿಡಿಯುವಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರ ಪಾತ್ರವೂ 'ಸಮ'ನಾಗಿದೆ. ಆ ಕಾರಣಕ್ಕಾಗಿಯೇ ಈ ಇಬ್ಬರೂ 'ಮುಖ್ಯಮಂತ್ರಿ' ಗಾದಿಯ ಮೇಲೆ ಕಣ್ಣಿಟ್ಟಿದ್ದರು. ಫಲಿತಾಂಶದ ಬಳಿಕ ಈ ಇಬ್ಬರ ಹಗ್ಗಜಗ್ಗಾಟದಿಂದಲೇ ಕರ್ನಾಟಕದಲ್ಲಿ ಸರಕಾರದ ರಚನೆ ತುಸು ತಡವಾಯಿತು. ಆದರೆ ಪಕ್ಷದ ಹೈಕಮಾಂಡ್‌ಗೆ ಇಬ್ಬರೂ ಬೇಕಿರುವುದರಿಂದ, ಕರ್ನಾಟಕ ರಾಜ್ಯವು ದೆಹಲಿ ನಾಯಕರ ಪಾಲಿಗೆ 'ಹಗ್ಗದ ಮೇಲಿನ ನಡಿಗೆ'ಯಾಗಿ ಪರಿಣಮಿಸಿದೆ.

ಇಬ್ಬರನ್ನೂ ಬ್ಯಾಲೆನ್ಸ್ ಮಾಡುವುದಷ್ಟೇ ಅಲ್ಲದೇ, ಸಿದ್ದು-ಡಿಕೆ ವಿಷಯವಾಗಿಯೇ ಹೈಕಮಾಂಡ್‌ನಲ್ಲಿಯೂ ಸ್ಪಷ್ಟತೆ ಸಿಗುತ್ತಿಲ್ಲ. ಸಿದ್ದರಾಮಯ್ಯ ಅವರಿಗೆ ಕರ್ನಾಟಕದಲ್ಲಿರುವ ಅಹಿಂದ ಮತಬ್ಯಾಂಕ್, ಮಾಸ್ ಲೀಡರ್ ಹಣೆಪಟ್ಟಿ ಹಾಗೂ ಶಾಸಕರ ಸಂಖ್ಯಾಬಲದ ಕಾರಣಕ್ಕೆ ಅವರ ಪರವಾಗಿ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ 'ಮೃದು ಧೋರಣೆ' ತಾಳಿದ್ದಾರೆ. ಆದರೆ ಸೋನಿಯಾ ಗಾಂಧಿ ಅತ್ಯಾಪ್ತರಾಗಿದ್ದ ಅಹ್ಮದ್ ಪಟೇಲ್ ಅವರನ್ನು ರಾಜ್ಯಸಭೆಗೆ ಕಳುಹಿಸುವ ಸಮಯದಲ್ಲಿ ಡಿ.ಕೆ.ಶಿವಕುಮಾರ್ ತೆಗೆದುಕೊಂಡಿರುವ ರಿಸ್ಕ್, ಅದಾದ ಬಳಿಕ ಇ.ಡಿ., ಸಿಬಿಐ, ಐಟಿಯ ನೆಪದಲ್ಲಿ ತಿಹಾರ್ ಜೈಲಿನಲ್ಲಿ ಎದುರಿಸಿದ ಸಂಕಷ್ಟದ ಕಾರಣಕ್ಕೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ 'ಡಿಕೆ' ಬಗ್ಗೆ ಸಾಫ್ಟ್ ಕಾರ್ನರ್ ಹೊಂದಿದ್ದಾರೆ. ಇನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೂ ಡಿಕೆಶಿಯವರನ್ನು ಪರೋಕ್ಷವಾಗಿ ಬೆಂಬಲಿಸಿಕೊಂಡೇ ಬಂದಿದ್ದಾರೆ. ಈ ಎಲ್ಲದರ ನಡುವೆ, ಎಐಸಿಸಿ ಅಧ್ಯಕ್ಷರಾಗಿರುವ ಕರ್ನಾಟಕದ ಮಲ್ಲಿಕಾರ್ಜುನ ಖರ್ಗೆ ಅವರು 'ಅವಕಾಶ ಸಿಕ್ಕರೆ ತಾವ್ಯಾಕೆ ಮುಖ್ಯಮಂತ್ರಿ ಗಾದಿ ಮೇಲೆ ಒಮ್ಮೆ ಕೂರಬಾರದು' ಎನ್ನುವ ಲೆಕ್ಕಾಚಾರದಲ್ಲಿದ್ದಾರೆ.

ಹಾಗೆ ನೋಡಿದರೆ, ಕರ್ನಾಟಕದಲ್ಲಿ ಈಗ ನಡೆಯುತ್ತಿರುವ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವಿನ ಗುದ್ದಾಟ ಕಾಂಗ್ರೆಸ್ ಹೈಕಮಾಂಡ್ ಪಾಲಿಗೆ ಇದೇ ಮೊದಲಲ್ಲ. ಕೆಲ ವರ್ಷಗಳ ಹಿಂದೆ ರಾಜಸ್ಥಾನದಲ್ಲಿ ಅಧಿಕಾರ ಗದ್ದುಗೆ ಹಿಡಿದಿದ್ದ ಸಮಯದಲ್ಲಿಯೂ ಇದೇ ರೀತಿಯ 'ಪವರ್ ಶೇರಿಂಗ್' ಒಪ್ಪಂದದ ಮಾತುಗಳು ಕೇಳಿಬಂದಿದ್ದವು. ರಾಜಸ್ಥಾನದಲ್ಲಿ ಅಶೋಕ್ ಗೆಹ್ಲೋಟ್ ಹಾಗೂ ಸಚಿನ್ ಪೈಲಟ್ ನಡುವೆ 50-50 ಶೇರಿಂಗ್ ಮಾಡುವುದಾಗಿ ಹೇಳಿ, ಗೆಹ್ಲೋಟ್ ಅವರಿಗೆ 'ಹಿರಿತನ'ದ ಆಧಾರದಲ್ಲಿ ಮೊದಲ ಅವಧಿಗೆ ಅವಕಾಶ ನೀಡಲಾಗಿತ್ತು. ಆದರೆ ಅವಧಿ ಮುಗಿಯುವ ವೇಳೆಗೆ ಹಸ್ತಾಂತರ ಮಾಡಲು ಒಲ್ಲೆಯೆಂದ ಅವರನ್ನು ಕೆಳಗಿಳಿಸಲು ಎಲ್ಲಿಲ್ಲದ ಪ್ರಯತ್ನವನ್ನು ಪಕ್ಷದ ಹೈಕಮಾಂಡ್ ಮಾಡಿದರೂ, ಯಾವುದು ವರ್ಕ್‌ಔಟ್ ಆಗದೇ ಪಕ್ಷವೇ ಹೋಳಾಗುವ ಹಂತಕ್ಕೆ ತಲುಪಿತು. ಕೊನೆಯಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸಚಿನ್ ಪೈಲಟ್‌ಗೆ ಕೊಟ್ಟಿದ್ದ 'ಮಾತು' ಉಳಿಸಿಕೊಳ್ಳಲು ಸಾಧ್ಯವಾಗದೇ 'ಸೋಲು' ಒಪ್ಪಿಕೊಂಡಿದ್ದರು.

ರಾಜಸ್ಥಾನದಲ್ಲಿ ಅಧಿಕಾರ ಹಸ್ತಾಂತರ ಎನ್ನುವ ವಿಷಯ ಮುನ್ನೆಲೆಗೆ ಬಂದಾಗ ಗೆಹ್ಲೋಟ್ ಅವರು ಯಾವ ವಿಷಯವನ್ನು ಮುಂದಿಟ್ಟಿದ್ದರೋ ಈಗ ಸಿದ್ದರಾಮಯ್ಯ ಅವರೂ ಅದೇ ವಿಷಯವನ್ನು ಮುಂದಿಟ್ಟಿದ್ದಾರೆ. 'ಸಂಸದೀಯ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿಯಾಗಬೇಕಾದರೆ ಬೇಕಿರುವುದು ಶಾಸಕರ ಸಂಖ್ಯಾಬಲ' ಎಂಬುದು ರಾಜಸ್ಥಾನದ ಗೆಹ್ಲೋಟ್ ಹಾಗೂ ಕರ್ನಾಟಕದ ಸಿದ್ದರಾಮಯ್ಯ ಅವರ ವಾದವಾಗಿದೆ. ಈ ಕಾರಣಕ್ಕೆ ಯಾರಿಗೆ ಸಂಖ್ಯೆಯ ಬಲವಿದೆಯೋ ಅವರಿಗೆ ಅಧಿಕಾರ ನೀಡಿ ಎನ್ನುವ ಥಿಯರಿಯನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ. 'ನಾನೇ ಸಿಎಂ' ಎಂದಿದ್ದ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಕೂತು ಸುದ್ದಿಗೋಷ್ಠಿ ನಡೆಸುವ ಮೂಲಕ ಇದೇ ಸಂದೇಶವನ್ನು ರವಾನಿಸುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದರು. ರಾಜಸ್ಥಾನದ ಅನುಭವವನ್ನು ನೋಡಿದ್ದ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರ ಹೇಳಿಕೆ ಬೆನ್ನಲ್ಲೇ ಡಿ.ಕೆ ಶಿವಕುಮಾರ್ ಬಣಕ್ಕೆ 'ಡೋಂಟ್ ರಿಯಾಕ್ಟ್' ಎನ್ನುವ ಸಂದೇಶವನ್ನು ರವಾನಿಸಿದೆ ಎನ್ನುವುದು ಸ್ಪಷ್ಟ.

ಕರ್ನಾಟಕದಲ್ಲಿ ಈಗ ನಡೆಯುತ್ತಿರುವ ಮತ್ತು ಕೆಲ ವರ್ಷದ ಹಿಂದೆ ರಾಜಸ್ಥಾನದಲ್ಲಿ ನಡೆದ, 'ಪವರ್ ಶೇರಿಂಗ್' ಹೋರಾಟ ಕಾಂಗ್ರೆಸ್ ಪಾಲಿಗೆ ಹೊಸದೇನಲ್ಲ. ಆದರೆ ಅದನ್ನು ನಿಭಾಯಿಸಬೇಕಿದ್ದ ಹೈಕಮಾಂಡ್ ತನ್ನ ಶಕ್ತಿಯನ್ನು ಕಳೆದುಕೊಂಡಿರುವುದು ಈ ತಿಕ್ಕಾಟವನ್ನು ಹೆಚ್ಚಾಗುವಂತೆ ಮಾಡಿದೆ. ಕರ್ನಾಟಕದ ವಿಷಯದಲ್ಲೇ, 'ಲಕೋಟೆ'ಯಲ್ಲಿ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡಿ, ಆ ಆಯ್ಕೆಯನ್ನೇ 'ಶಾಸಕಾಂಗ ಪಕ್ಷದ ಒಮ್ಮತದ ತೀರ್ಮಾನ' ಎಂದು ಘೋಷಿಸಿದ ಉದಾಹರಣೆಯಿದೆ. ಸೋನಿಯಾ ಗಾಂಧಿ ಅವರು ಪಕ್ಷದ ಅಧ್ಯಕ್ಷರಾಗಿರುವ ತನಕ ಈ ಪ್ರಭಾವವನ್ನು ಉಳಿಸಿಕೊಂಡೇ ಬಂದಿದ್ದರು. ಆದರೆ ರಾಹುಲ್ ಗಾಂಧಿ ಪಕ್ಷದ ಚುಕ್ಕಾಣಿ ಹಿಡಿದ ಬಳಿಕ ಈ ಹಿಡಿತ ದಿನದಿಂದ ದಿನಕ್ಕೆ ಸಡಿಲವಾಗುತ್ತಾ ಬಂದಿರುವುದು ಪಕ್ಷದೊಳಗಿರುವ ಕಟುಸತ್ಯ.

ಆದರೆ ಇಂಥ ಸಂದಿಗ್ಧ ಸನ್ನಿವೇಶದಲ್ಲಿರುವ ರಾಷ್ಟ್ರೀಯ ಕಾಂಗ್ರೆಸ್‌ಗೆ ಕರ್ನಾಟಕ ಎನ್ನುವುದು ಅತ್ಯಂತ ಪ್ರಮುಖ ರಾಜ್ಯ ಎನಿಸಿದೆ. ಸಂಪನ್ಮೂಲ ಕ್ರೋಡೀಕರಣ ಮಾತ್ರವಲ್ಲದೇ, 'ಮಾದರಿ' ಆಡಳಿತ ನೀಡುವ ವಿಷಯದಲ್ಲಿ ಕರ್ನಾಟಕವು ಇಡೀ ದೇಶಕ್ಕೆ ಮಾಡೆಲ್ ಎನಿಸಿಕೊಂಡಿರುವುದರಿಂದ ಈ ಸರಕಾರದಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದ ನೀಡದಂತೆ ನೋಡಿಕೊಳ್ಳಬೇಕಾದ ಅನಿವಾರ್ಯತೆ ಹೈಕಮಾಂಡ್ ನಾಯಕರಿಗಿದೆ. ಪಕ್ಷಕ್ಕಾಗಿ ಹಾಗೂ ಪಕ್ಷದ ನಾಯಕರಿಗಾಗಿ ವೈಯಕ್ತಿಕವಾಗಿ ಡಿಕೆ 'ರಿಸ್ಕ್' ತೆಗೆದುಕೊಂಡಿದ್ದರೂ, ಶಾಸಕರ ಬಲಾಬಲ ಹಾಗೂ ಅಹಿಂದ ಮತಗಳಿಕೆಯಲ್ಲಿ ಸಿದ್ದರಾಮಯ್ಯ ಅವರ ಕೊಡುಗೆಯನ್ನೂ ಮರೆತು ಯಾವುದೇ ತೀರ್ಮಾನ ಕೈಗೊಳ್ಳುವ ಸ್ಥಿತಿಯಲ್ಲಿ ದಿಲ್ಲಿಯ ಹೈಕಮಾಂಡ್ ಉಳಿದಿಲ್ಲ.

ಈ ಪರಿಸ್ಥಿತಿಯಲ್ಲಿ ಯಾವುದೇ ತೀರ್ಮಾನ ಕೈಗೊಂಡರೂ ತನಗೇ ನಷ್ಟ ಎನ್ನುವುದನ್ನು ಅರಿತು ಪಕ್ಷವು ಮೌನಕ್ಕೆ ಶರಣಾಗಿದೆ. ಆದರೆ ಇನ್ನಾದರೂ ಮೌನ ಮುರಿಯದೇ, ಸ್ಪಷ್ಟ ತೀರ್ಮಾನಕ್ಕೆ ಬಾರದೇ ಹೋದರೆ, ಕಾಂಗ್ರೆಸ್ ಪಾಲಿಗೆ ಉಳಿದಿರುವ ಏಕೈಕ ಬಲಿಷ್ಠ ರಾಜ್ಯ ಎನಿಸಿರುವ ಕರ್ನಾಟಕ ಕೈತಪ್ಪಿದರೂ ಅಚ್ಚರಿಯಿಲ್ಲ!

ಉತ್ತರ ಇಲ್ಲದಾದಾಗ ವಿಷಯಾಂತರದ ಕಸರತ್ತು!

ಸಂಘದಕ್ಷ
ಸುರೇಶ್ ಬಾಲಚಂದ್ರನ್
vveditoped@gmail.com

ತಾವು ಪ್ರಸ್ತುತವಾಗಿರಬೇಕೆಂಬ ಕಾರಣಕ್ಕೆ ಇನ್ನೊಬ್ಬರ ಮೇಲೆ ಗೂಬೆ ಕೂರಿಸುವ, ತಲೆಬುಡವಿರದ, ಗೊಂದಲ ಉಂಟುಮಾಡುವ, ವೃಥಾ ವಿವಾದ ಸೃಷ್ಟಿಸುವ ಹೇಳಿಕೆ ನೀಡುವ, ಕೊನೆಗೆ ಅದನ್ನು ಸಮರ್ಥಿಸಿಕೊಳ್ಳಲು ಒಂದರ ಹಿಂದೆ ಮತ್ತೊಂದು ಸಂದರ್ಭೋಚಿತವಲ್ಲದ ವಿಷಯಗಳನ್ನು ಪ್ರಸ್ತಾಪಿಸಿ ವಿರೋಧಿಗಳನ್ನು ಮತ್ತು ಜನರನ್ನು ಅನವಶ್ಯಕ ವಿಷಯಗಳಲ್ಲಿ ತೊಡಗಿಸುವುದು ರಾಜಕಾರಣದ ಒಂದು ತಂತ್ರವೇ ಸರಿ! ವಿಶೇಷವಾಗಿ, ತಮ್ಮಲ್ಲಿರುವ ಹುಳುಕನ್ನು ಮುಚ್ಚಿಕೊಳ್ಳಲು ಸಾಧ್ಯವಾಗದಾಗ ಅಥವಾ ವಿರೋಧಿಗಳು, ಸಂಘಟನೆಗಳು, ಜನರು ಎತ್ತಬಹುದಾದ ಔಚಿತ್ಯಪೂರ್ಣ ಪ್ರಶ್ನೆಗಳಿಗೆ ಉತ್ತರವಿಲ್ಲದಿದ್ದಾಗ ವಿಷಯಾಂತರ ಮಾಡಲು ಹೀಗೆಲ್ಲಾ ಮಾಡುವುದುಂಟು. ಭಾರತದಂಥ ಬೃಹತ್ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಸಾಮಾನ್ಯ ಸಂಗತಿಯಾದರೂ, ಸತ್ಯಾಸತ್ಯತೆಗಳನ್ನು ಸಕಾಲದಲ್ಲಿ ತಿಳಿಯಬೇಕಾದ್ದು ನಮ್ಮೆಲ್ಲರ ಆದ್ಯ ಕರ್ತವ್ಯ.

1925ರ ವಿಜಯದಶಮಿಯಂದು ಸಂಸ್ಥಾಪನೆಗೊಂಡು ಈ ವರ್ಷ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ಈವರೆಗೆ ಬೆಳೆದಿರುವ ರೀತಿಯೇ ಅದ್ಭುತ ಮತ್ತು ಅಮೋಘ. ನಿರಂತರ ಶಾಖಾ ವ್ಯವಸ್ಥೆಯ ಮೂಲಕ 'ದೇಶಸೇವೆಯೇ ಪರಮೋಚ್ಚ ಕರ್ತವ್ಯ' ಎಂದು ತಿಳಿದಿರುವ ಸ್ವಯಂಸೇವಕರನ್ನು ತಯಾರು ಮಾಡುತ್ತಿರುವ ಪ್ರಪಂಚದ ಏಕಮೇವಾದ್ವಿತೀಯ ಸಂಘಟನೆಯಿದು. ಹೆಸರೇ ಹೇಳುವ ಹಾಗೆ, ಲಕ್ಷಾಂತರ ಸ್ವಯಂಸೇವಕರು ಸ್ವಯಂಪ್ರೇರಿತರಾಗಿ, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ದೇಶಕಟ್ಟಲು ಮತ್ತು ಭಾರತದ ಶ್ರೀಮಂತ ಸಂಸ್ಕೃತಿಯನ್ನು ಪ್ರಚುರಪಡಿಸಲು ತಮ್ಮ ಅತ್ಯಮೂಲ್ಯ ಸಮಯವನ್ನು ಮೀಸಲಿಟ್ಟು, ಭೇದಭಾವವಿಲ್ಲದೆ ಸಮಾಜದ ಎಲ್ಲಾ ಸ್ತರದ ಜನರ ಒಳಿತಿಗಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವಿವಿಧ ಸೇವಾ ಪ್ರಕಲ್ಪಗಳಲ್ಲಿ ತೊಡಗಿಸಿ ಕೊಂಡಿರುವ ಸಂಘಟನೆಯಿದು. ಇಲ್ಲಿ ಸ್ವಯಂಸೇವಕರಾಗಲು ಯಾವುದೇ ನೋಂದಣಿಯ ಅಗತ್ಯವಿಲ್ಲ, ಶುಲ್ಕ ಕೊಡಬೇಕಾಗಿಲ್ಲ, ಜಾತಿ-ಮತ-ಪಂಥಗಳನ್ನು ಹೇಳಬೇಕಾಗಿಲ್ಲ, ಮುಕ್ತ ಮನಸ್ಸಿನಿಂದ ತೊಡಗಿಸಿಕೊಳ್ಳುವುದನ್ನು ರೂಢಿಸಿಕೊಂಡರಷ್ಟೇ ಸಾಕು. ಈ ಪರಿಪಾಠದಿಂದಾಗಿ ಪರಿಪೂರ್ಣ ವ್ಯಕ್ತಿತ್ವ ರೂಪುಗೊಳ್ಳುವುದಲ್ಲದೆ, ರಾಷ್ಟ್ರೀಯ ಚಿಂತನೆ ತನ್ನಷ್ಟಕ್ಕೆ ತಾನೇ ಬೆಳೆದು ಬಲಗೊಂಡುಬಿಡುತ್ತದೆ. ಇಲ್ಲಿ ಸಂಘಟನೆಯ ಮುಖಸ್ತುತಿ ಮಾಡಲಾಗುತ್ತಿದೆ ಎಂದೇನೂ ತಿಳಿಯುವುದು ಬೇಡ; ಇದು ಒರೆಹಚ್ಚಿ ಪರೀಕ್ಷಿಸಿ ಕಾರ್ಯರೂಪಕ್ಕೆ ಇಳಿಸಲಾದ ಒಂದು ಸಿದ್ಧಸೂತ್ರ.

ಕಳೆದ ಒಂದು ಶತಮಾನದಿಂದ ಅನೂಚಾನವಾಗಿ ತಾನು ಮಾಡಿಕೊಂಡು ಬಂದಿರುವ ಸಾಮಾಜಿಕ ಕಾರ್ಯಗಳ ಬಗ್ಗೆ 'ಡಾಣಾ-ಡಂಗುರ' ಬಾರಿಸುತ್ತ ಹೇಳದೆ, ಸಮಾಜದ ಒಳಿತಿಗಾಗಿ ನಿರಂತರವಾಗಿ ಪ್ರವಹಿಸುತ್ತಾ ಬಂದಿರುವಂಥದ್ದು ಆರೆಸ್ಸೆಸ್. ಇದರ ಒಂದು ಗೀತೆಯಲ್ಲಿ ಹೇಳುವ ಹಾಗೆ, 'ಸೇವೆಯೆಂಬ ಯಜ್ಞದಲ್ಲಿ ಒಂದು ಸಮಿತ್ತಿನ ಹಾಗೆ ಉರಿಯಬೇಕು, ಖ್ಯಾತಿ-ಪ್ರಚಾರ-ಪ್ರಶಂಸೆಗೆ ವಿಮುಖರಾಗಿ ಸಹಜವಾಗಿ ಕಾರ್ಯಕ್ಷೇತ್ರಕ್ಕೆ ಬರಬೇಕು, ತೊಡಗಿಸಿಕೊಂಡಿರುವ ವ್ಯಕ್ತಿ ನೈಜ ರಾಷ್ಟ್ರಸೇವಕನಾಗಬೇಕು' ಎನ್ನುವ ಅಭಿಲಾಷೆ ವ್ಯಕ್ತವಾಗುತ್ತದೆ.

ಇದಕ್ಕೆ ಪುಷ್ಟಿಕೊಡುವ ರೀತಿಯಲ್ಲಿ ಯಾವುದೇ ಒಂದು ಕಾರ್ಯಕ್ರಮವನ್ನು ಶಿಸ್ತಿನಿಂದ, ಅಚ್ಚುಕಟ್ಟಾಗಿ, ಪೂರ್ವತಯಾರಿಯೊಂದಿಗೆ ನಡೆಸುವ ಮತ್ತು ಸಾರ್ವಜನಿಕರಿಗೆ ಯಾವುದೇ ತೊಂದರೆಯನ್ನು ಕೊಡದೆ ಸಮಯಪಾಲನೆ ಮಾಡುತ್ತ ನಿರ್ದುಷ್ಟವಾಗಿ ನಿಭಾಯಿಸುವ ಈ ಸಂಘಟನೆಯ ವೈಖರಿ ನಿಜಕ್ಕೂ ಅನುಕರಣೀಯ. ಹಿಂದೆ ಆರೆಸ್ಸೆಸ್ ಶಾಖೆಗಳಿಗೆ ಮಹಾತ್ಮ ಗಾಂಧೀಜಿ ಮತ್ತು ಬಾಬಾ ಸಾಹೇಬ್ ಅಂಬೇಡ್ಕರರು ಭೇಟಿ ಕೊಟ್ಟಿರುವ ನಿದರ್ಶನಗಳಿವೆ; ಅಲ್ಲಿನ ಸ್ವಯಂಸೇವಕರಲ್ಲಿ ಕಾಣಬಂದ ಸಾಮರಸ್ಯವನ್ನು ಗಮನಿಸಿ, ಅಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ವರ್ಗ ಶಿಕ್ಷಾರ್ಥಿಗಳಲ್ಲಿ ಕೇಳಿ ಈ ಮಹನೀಯರು ಉದ್ಗಾರ ತೆಗೆದದ್ದು ಇತಿಹಾಸದಲ್ಲಿ ದಾಖಲಾಗಿದೆ.

ಸಮಾಜಸೇವಾ ಕೈಂಕರ್ಯದಲ್ಲಿ ಆರೆಸ್ಸೆಸ್ ತೊಡಗಿಸಿಕೊಳ್ಳುವ ರೀತಿಯೇ ವಿಶಿಷ್ಟವಾಗಿದೆ. ದೇಶದ ಯಾವುದೇ ಮೂಲೆಯಲ್ಲಿ ಸಂದಿಗ್ಧ ಪರಿಸ್ಥಿತಿಗಳು ಎದುರಾಗಿರಲಿ, ಪ್ರಕೃತಿ ವಿಕೋಪ ಅಪ್ಪಳಿಸಿರಲಿ, ಪರಿಹಾರಕಾರ್ಯಕ್ಕೆ ವಿಪತ್ತು ನಿರ್ವಹಣಾ ಪಡೆ ಮತ್ತು ಸರಕಾರ ಮುಂದಾಗುವವರೆಗೆ ಆರೆಸ್ಸೆಸ್ ಕಾಯುತ್ತ ಕೂರದೆ ಸಂಪನ್ಮೂಲ ಕ್ರೋಡೀಕರಿಸಿಕೊಂಡು ಪ್ರಪ್ರಥಮವಾಗಿ ಹಾಜರಾಗುತ್ತದೆ. ಕೋವಿಡ್ ಸಂದರ್ಭದಲ್ಲಿ ಮೃತರಾದವರ ಅಂತ್ಯಸಂಸ್ಕಾರಕ್ಕೆ ಅವರ ಮನೆಯವರೇ ಹಿಂಜರಿದಾಗ ಆರೆಸ್ಸೆಸ್‌ನವರು ಮುಂದೆ ನಿಂತು ಆ ಕಾರ್ಯವನ್ನು ನಡೆಸಿಕೊಟ್ಟಿದ್ದು ಸ್ಮರಣೀಯ. ಭೀಕರ ಮಳೆ, ನೆರೆಹಾವಳಿಯ ಸಮಯದಲ್ಲಿ ಟೊಂಕ ಕಟ್ಟಿ ಪರಿಹಾರ ಕಾರ್ಯಗಳಿಗೆ ನಿಲ್ಲುವುದು ಇದೇ ಆರೆಸ್ಸೆಸ್. ಕಳೆದ ತಿಂಗಳು ಅಹ್ಮದಾಬಾದ್‌ನಲ್ಲಿ ಏರ್ ಇಂಡಿಯಾ ಸಂಸ್ಥೆಯ ವಿಮಾನ ಪತನವಾದಾಗಲೂ ಪರಿಹಾರಕಾರ್ಯಕ್ಕೆ ಆರೆಸ್ಸೆಸ್ ಮುಂದಾಗಿದ್ದು ಸತ್ಯಸಂಗತಿ.

ಆದರೆ, 'ಒಳ್ಳೆಯ ಕೆಲಸಕ್ಕೆ ಅಡ್ಡಗಾಲು ಅರವತ್ತು' ಎನ್ನುವಂತೆ ಆರೆಸ್ಸೆಸ್ ಅನ್ನು ಈವರೆಗೆ ಮೂರು ಬಾರಿ ನಿಷೇಧಿಸಲಾಗಿದೆ. 1948ರಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯಾದಾಗ ಹೀಗೆ ನಿಷೇಧ ಹೇರಲಾಗಿತ್ತು ಮತ್ತು ಅಂದಿನ ಸರಸಂಘಚಾಲಕರಾದ ಮಾಧವ ಸದಾಶಿವ ಗೋಳ್ವಲ್ಕರ್‌ರನ್ನು ಬಂಧನದಲ್ಲಿ ಇರಿಸಲಾಗಿತ್ತು. ಆದರೆ ಯಾವುದೇ ಪುರಾವೆಗಳಿಲ್ಲದ ಕಾರಣಕ್ಕೆ 1949ರಲ್ಲಿ ನಿಷೇಧವನ್ನು ಹಿಂಪಡೆಯಲಾಯಿತು. ಇನ್ನು 1975ರ ತುರ್ತುಪರಿಸ್ಥಿತಿ ಅವಧಿಯಲ್ಲೂ ಆರೆಸ್ಸೆಸ್ ಅನ್ನು ನಿಷೇಧಿಸಲಾಗಿತ್ತು ಹಾಗೂ 1977ರಲ್ಲಿ ಈ ನಿಷೇಧವನ್ನು ಹಿಂಪಡೆಯಲಾಗಿತ್ತು. 1992ರಲ್ಲಿ ಬಾಬ್ರಿ ಮಸೀದಿ ಧ್ವಂಸವಾದಾಗಲೂ ಈ ಸಂಘಟನೆಯನ್ನು ನಿಷೇಧಿಸಲಾಗಿತ್ತಾದರೂ, ಕೆಲವೇ ವಾರಗಳಲ್ಲಿ ನಿಷೇಧವನ್ನು ಹಿಂಪಡೆಯಲಾಯಿತು. ನಿಷೇಧ ಹೇರುವುದು ಆ ಕಾಲಘಟ್ಟದಲ್ಲಿ ಸುಲಭವಾಗಿತ್ತು, ಆದರೆ ಕಾನೂನುಬಾಹಿರವಾದ ಕೃತ್ಯಗಳಲ್ಲಿ ಆರೆಸ್ಸೆಸ್ ಭಾಗಿಯಾಗದೆ ಇರುವ ಕಾರಣದಿಂದ ನಿಷೇಧವನ್ನು ಹಿಂಪಡೆಯಲಾಯಿತು. ಹಾಗೇನಾದರೂ ಗಟ್ಟಿಯಾದ ಸಾಕ್ಷ್ಯಾಧಾರಗಳು ಇದ್ದಿದ್ದರೆ ನಿಷೇಧವನ್ನು ಹಿಂಪಡೆಯುವ ಪ್ರಮೇಯವೇ ಬಂದೊದಗುತ್ತಿರಲಿಲ್ಲ. ಇನ್ನು, 'ನಿಷೇಧ ಹಿಂಪಡೆಯಿರಿ' ಎಂದು ಅಂದಿನ ಕೇಂದ್ರ ಸರಕಾರವನ್ನು ಆರೆಸ್ಸೆಸ್ ಗೋಗರೆದು, ಕೈಕಾಲು ಹಿಡಿದು, ಇನ್ನು ಮುಂದೆ ಹೀಗಾಗದಂತೆ ಆಶ್ವಾಸನೆಗಳನ್ನು ಕೊಟ್ಟಿತ್ತು ಎನ್ನುವುದು ನಿರಾಧಾರ ಮತ್ತು ಸತ್ಯಕ್ಕೆ ದೂರವಾದ ಸಂಗತಿ. ಇದಕ್ಕೆ ಸಾಕಷ್ಟು ಪುರಾವೆಗಳು ಸಾರ್ವಜನಿಕ ವಲಯದಲ್ಲಿ ಲಭ್ಯವಿವೆ.

ಭಾರತದಲ್ಲಿ ಯಾವುದೇ ಸಂಘ-ಸಂಸ್ಥೆ ಮತ್ತು ಸಂಘಟನೆಗಳನ್ನು 'ಕಾನೂನುಬಾಹಿರ ಚಟುವಟಿಕೆ (ಪ್ರತಿಬಂಧಕ) ಅಧಿನಿಯಮ, 1967'ರ (UAPA) ಅಡಿಯಲ್ಲಿನ ನಿಯಮಾವಳಿಗಳ ಅನುಸಾರ ನಿಷೇಧಿಸಲು ಕೇಂದ್ರ ಸರಕಾರಕ್ಕಷ್ಟೇ ಅಧಿಕಾರವಿದೆ. ಈ ಅಧಿನಿಯಮದ ಪ್ರಕಾರ, ಯಾವುದೇ ಸಂಘಟನೆ ದೇಶದ ಅಖಂಡತೆ-ಭದ್ರತೆಗೆ ಕಂಟಕವಾದಾಗ, ಭಯೋತ್ಪಾದಕ-ಹಿಂಸಾತ್ಮಕ-ನಿಷಿದ್ಧ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ, ಪ್ರಜಾಪ್ರಭುತ್ವ ವಿರೋಧಿ ಕಾರ್ಯಗಳಲ್ಲಿ ಭಾಗಿಯಾದಾಗ, ಅಂಥ ಸಂಘಟನೆಗಳನ್ನು ಸೂಕ್ತ ಸಾಕ್ಷ್ಯಾಧಾರಗಳೊಂದಿಗೆ, ಗುಪ್ತಚರ ವರದಿಯ ಆಧಾರದ ಮೇಲೆ, ರಾಜ್ಯ ಮತ್ತು ಕೇಂದ್ರ ಸರಕಾರಗಳ ವರದಿಗಳ ಅನುಸಾರ ಹಾಗೂ ಶಿಫಾರಸಿನ ಮೇಲೆ 'ಅನಧಿಕೃತ ಸಂಘಟನೆ' ಎಂಬುದಾಗಿ ಕೇಂದ್ರ ಸರಕಾರದ ಗೆಜೆಟ್ ಅಧಿಸೂಚನೆಯ ಮೂಲಕ ನಿಷೇಧಿಸಬಹುದು. ಹೀಗಿದ್ದಾಗ್ಯೂ, ಅಂಥ ಸಂಘಟನೆಯು ಸದರಿ ನಿಷೇಧವನ್ನು ತೆರವುಗೊಳಿಸುವಂತೆ ಸ್ಥಾನಿಕ ನ್ಯಾಯಮಂಡಳಿಗೆ 30 ದಿನಗಳ ಒಳಗೆ ಮೊರೆಹೋಗಬಹುದು. ಅದು ತಿರಸ್ಕೃತವಾದರೆ ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳಿಗೆ ಮೇಲ್ಮನವಿ ಸಲ್ಲಿಸಬಹುದು. ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಮಜಬೂತಾದ ಸಾಕ್ಷ್ಯಾಧಾರಗಳಿಲ್ಲದೆ ಯಾವುದೇ ಸಂಘಟನೆಯನ್ನು ಕಾನೂನುಬಾಹಿರವಾಗಿ/ಮನಬಂದಂತೆ ನಿಷೇಧಗೊಳಿಸುವುದು ಅಸಾಧ್ಯ ಎಂಬುದು.

ಹೀಗಿರುವಾಗ, ರಾಷ್ಟ್ರಸೇವೆಗೆ ಕಟಿಬದ್ಧವಾಗಿ ನಿಂತಿರುವ ಈ ಸಂಘಟನೆ ಮತ್ತು ಅದರ ಸ್ವಯಂಸೇವಕ ಪಡೆಯನ್ನು ನಿಷೇಧಿಸುವುದು ಸರಿಯೇ? ಎಂಬುದು ಮೂಲಭೂತ ಪ್ರಶ್ನೆ. ಯುಗಧರ್ಮ ಸಾರುವ ಸುಭಾಷಿತವೊಂದು 'ಸಂಘಶಕ್ತಿ ಕಲೌ ಯುಗೇ' ಎಂದು ಹೇಳುತ್ತದೆ. ಅಂದರೆ, ಕಲಿಯುಗದಲ್ಲಿ ಸಂಘಟನೆಯೇ ಶಕ್ತಿ, ಒಗ್ಗಟ್ಟು ಶಕ್ತಿಯ ಮೂಲ. ರಾಷ್ಟ್ರ ಮತ್ತು ಸಮಾಜದ ಅಭಿವೃದ್ಧಿಗೆ ಏಕತೆಯೇ ಶಕ್ತಿ. ಅರ್ಥಹೀನ ಬಾಲಿಶ ಮಾತುಗಳಿಗೆ, ಗಾಳಿಮಾತುಗಳಿಗೆ ಸೊಪ್ಪುಹಾಕಿ ವಿಚಲಿತವಾಗುವ ಜಾಯಮಾನವಂತೂ ಆರೆಸ್ಸೆಸ್‌ಗೆ ಇಲ್ಲ. ಟೀಕೆ ಮಾಡುವುದು ಸಂವಿಧಾನ ಕೊಟ್ಟಿರುವ ಹಕ್ಕು. ಟೀಕೆಯ ಸತ್ಯ-ಮಿಥ್ಯತೆಯನ್ನು ತುಲನಾತ್ಮಕವಾಗಿ ಪರಿಶೀಲಿಸಿದ ಬಳಿಕ ಟೀಕಾಕಾರರ ಮತ್ತು ವಿಮರ್ಶಕರ ಕೊಂಕುಮಾತುಗಳನ್ನು ಲೆಕ್ಕಿಸದೆ, 'ಮಾತಿಗಿಂತ ಕೃತಿ ಲೇಸು' ಎಂಬ ಸಿದ್ಧಾಂತಕ್ಕೆ ಹೆಚ್ಚಿನ ಮಹತ್ವ ಕೊಡುತ್ತ, ಸಮಾಜೋದ್ಧಾರ ಮತ್ತು ರಾಷ್ಟ್ರ ನಿರ್ಮಾಣ ಕಾರ್ಯಗಳಲ್ಲಿ ಹೆಚ್ಚೆಚ್ಚು ತೊಡಗಿಸಿಕೊಳ್ಳುವ ಮೂಲಕ ಹೊಸದಿಗಂತದೆಡೆಗೆ ಹಾರುವ ಶಕ್ತಿಯನ್ನು ಆರೆಸ್ಸೆಸ್ ಬೆಳೆಸಿಕೊಂಡಿದೆ. ಇದು ಇನ್ನಷ್ಟು ಎತ್ತರಕ್ಕೆ ಏರಲಿ, ಬಲಿಷ್ಠವಾಗಿ ಬೆಳೆದು ದೇಶಕಲ್ಯಾಣ ಮತ್ತು ವಿಶ್ವಕಲ್ಯಾಣಕ್ಕೆ ನಾಂದಿಹಾಡಲಿ ಎಂಬುದು ನಮ್ಮ ನಿಮ್ಮೆಲ್ಲರ ಶುಭಹಾರೈಕೆಯಾಗಿರಲಿ.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನನ್ನ ಅನುಭವ ಕಹಿ

ಭಿನ್ನಭಾವ' ಎಂಬ ಅಂಕಣದಲ್ಲಿ (ಜು.8) ಪ್ರಕಟವಾದ ರಮಾನಂದ ಶರ್ಮಾ ಅವರ ಬರಹಕ್ಕೆ ಪ್ರತಿಕ್ರಿಯೆಯಾಗಿ ದಾವಣಗೆರೆ ಮುಕುಂದ ಅವರು ಓದುಗರ ಒಣಿಯಲ್ಲಿ ಬರೆದಿರುವ 'ಇದೆಂಥ ಭಿನ್ನಭಾವ?' ಶೀರ್ಷಿಕೆಯ ಪತ್ರಕ್ಕೆ (ಜು.12) ನನ್ನ ಒಂದು ಅನುಭವವನ್ನು ಸೇರ್ಪಡೆ ಮಾಡಲು ಬಯಸುವೆ.

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ, ರಾಷ್ಟ್ರೋತ್ಥಾನ ಪರಿಷತ್ತಿನ ವತಿಯಿಂದ ಪ್ರಕಟವಾಗುತ್ತಿದ್ದ 'ಭಾರತ ಭಾರತಿ ಪುಸ್ತಕ ಸಂಪದ ಯೋಜನೆ'ಯ ಪ್ರಧಾನ ಸಂಪಾದಕರಾಗಿದ್ದ ಪ್ರೊ. ಎಲ್.ಎಸ್.ಶೇಷಗಿರಿರಾಯರ ಕೈಕೆಳಗೆ ನಾನು ಉಪ ಸಂಪಾದಕನಾಗಿ ಕೆಲಸ ಮಾಡುತ್ತಿದ್ದೆ. ನನ್ನ ವಾಸವೂ ಪರಿಷತ್ತಿನ ಕಟ್ಟಡದಲ್ಲೇ ಇತ್ತು. ತುರ್ತುಸ್ಥಿತಿ ವಿಧಿಸಿದ ಮೇಲೆ ಪೊಲೀಸರು ಹಲವಾರು ಬಾರಿ ನಮ್ಮ ಪರಿಷತ್ತಿನ ಮೇಲೆ ದಾಳಿಮಾಡಿ, ಅಲ್ಲಿ ನಿಷೇಧಿತ ಗುಪ್ತ ಪತ್ರಿಕೆಗಳೇನಾದರೂ ಪ್ರಕಟವಾಗುತ್ತಿವೆಯೇ ಎಂದು ಪರಿಶೀಲಿಸಿದ್ದರು. ಆದರೆ ಅವರು ಬರಿಗೈಯಲ್ಲಿ ಹೋಗಬೇಕಾಯಿತು! ಸುಮಾರು 30 ಸಿಬ್ಬಂದಿಗಳ ಕೆಲಸ ಹೋಗುವಂಥ ಸ್ಥಿತಿ ನಿರ್ಮಾಣವಾಗುವುದು ನಮಗೂ ಇಷ್ಟವಿರಲಿಲ್ಲ. ಈ ನಡುವೆ, ನಮ್ಮ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಮೈ.ಚ.ಜಯದೇವ ಅವರು ತುರ್ತುಸ್ಥಿತಿಯ ವಿರುದ್ಧ ಗಾಂಧಿ ಬಜಾರ್‌ನಲ್ಲಿ ಚಳವಳಿ ಮಾಡಿ ಜೈಲು ಸೇರಿದ್ದರು. ನಾವು ಐವರು ಪರಿಷತ್ತಿನ ಕಟ್ಟಡದಲ್ಲೇ ವಾಸಿಸುತ್ತಿದ್ದೆವು. 1976ರ ಮಾರ್ಚ್ 18ರ ಮುಂಜಾನೆ ಸುಮಾರು 4 ಗಂಟೆಗೆ, ಮಫ್ತಿಯಲ್ಲಿದ್ದ ನಾಲ್ವರು ಪೊಲೀಸರು ಬಂದು ನಮ್ಮನ್ನು ಎಬ್ಬಿಸಿದರು. 'ಕೇವಲ ವಿಚಾರಣೆಗೆ ಬನ್ನಿ' ಎಂದು ನಮ್ಮನ್ನು ಚಾಮರಾಜಪೇಟೆ ಪೊಲೀಸ್ ಸ್ಟೇಷನ್‌ಗೆ ಕರೆದೊಯ್ದು, ಬೇರೆಲ್ಲೋ ಸಿಕ್ಕ ನಿಷೇಧಿತ ಪತ್ರಿಕೆಯನ್ನು ತೋರಿಸಿ, ಅವನ್ನು ನಾವೇ ಮುದ್ರಿಸುತ್ತಿದ್ದೆವು ಎಂಬ ಚಾರ್ಜ್ ಶೀಟ್ ಹಾಕಿ ಜೈಲಿಗೆ ಅಟ್ಟಿದರು. ಪರಿಷತ್ತಿಗೆ ಬೀಗಮುದ್ರೆ ಬಿತ್ತು. ಅಲ್ಲಿ ಕೆಲಸ ಮಾಡುತ್ತಿದ್ದ ನಮ್ಮೆಲ್ಲರ ಕುಟುಂಬಗಳು ಬೀದಿಪಾಲಾದವು. ತುರ್ತುಸ್ಥಿತಿಯಲ್ಲೂ ಪರಿಷತ್ತು ಯಶಸ್ವಿಯಾಗಿ ನಡೆಯುತ್ತಿರುವುದನ್ನು ಸಹಿಸಲಾಗದೆ, ಕೇವಲ ಹೊಟ್ಟೆ ಉರಿಯಿಂದಾಗಿ ನಮ್ಮ ಸಂಸ್ಥೆಗೆ ಬೀಗಮುದ್ರೆ ಹಾಕಲಾಗಿತ್ತು! ಜೈಲಿನಲ್ಲಿ ನಮ್ಮಂಥ ನೂರಾರು ಜನರು ತಮ್ಮ ಕುಟುಂಬವನ್ನು ತೊರೆದು ಇರಬೇಕಾಗಿ ಬಂದಿತ್ತು. ಆ ಎಲ್ಲಾ ಕುಟುಂಬದವರ ಪರಿಸ್ಥಿತಿ ಏನಾಗಿರಬಹುದು?

'ಭಿನ್ನಭಾವ' ವ್ಯಕ್ತಪಡಿಸಿದ ರಮಾನಂದ ಶರ್ಮಾ ಅವರ ಚಿಂತನೆ ಸಮಗ್ರವಾಗಿಲ್ಲ ಎಂದಷ್ಟೇ ಹೇಳಬಲ್ಲೆ.

- ಜಿ.ಕೆ. ವೆಂಕಟೇಶಮೂರ್ತಿ, ಬೆಂಗಳೂರು

ನಿರುದ್ಯೋಗಕ್ಕೆ ನಾಂದಿ

ರಾಜ್ಯದಲ್ಲಿ ಪ್ರತಿ ವರ್ಷ ಎಂಜಿನಿಯರಿಂಗ್ ಕೋರ್ಸ್‌ಗಳಿಗಿರುವ ಸೀಟುಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದು, ಈ ಬಾರಿ ಕೂಡ 10,427 ಹೆಚ್ಚುವರಿ ಸೀಟುಗಳಾಗಿವೆ. ಆದರೆ ಈ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪದವಿ ಪಡೆದರೂ, ಉದ್ಯೋಗಾವಕಾಶದ ಅನುಪಾತದಲ್ಲಿ ಏರಿಕೆಯಾಗದಿದ್ದರೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುವುದು ಖಚಿತ. ಕಳೆದ ವರ್ಷ 32,000ಕ್ಕೂ ಹೆಚ್ಚು ಸೀಟುಗಳು ಖಾಲಿ ಉಳಿದಿದ್ದವು. ಇದು ಉದ್ಯೋಗ ಮಾರುಕಟ್ಟೆಯ ಬೇಡಿಕೆ ಮತ್ತು ವಿದ್ಯಾಭ್ಯಾಸದ ನಡುವೆ ಇರುವ ಅಂತರವನ್ನು ಎತ್ತಿ ತೋರಿಸುತ್ತದೆ.

ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್, ಬ್ಲಾಕ್‌ಚೈನ್ ಮುಂತಾದವನ್ನು ಇತ್ತೀಚಿನ ದಿನಗಳಲ್ಲಿ ಹೊಸ ತಂತ್ರಜ್ಞಾನ ಕೋರ್ಸ್‌ಗಳೆಂದರು ಸಹ, ಎಲ್ಲಾ ವಿದ್ಯಾರ್ಥಿಗಳಿಗೆ ಉದ್ಯೋಗದ ಭರವಸೆ ಸಿಕ್ಕುವುದಿಲ್ಲ. ಹೀಗಾಗಿ ಕೇವಲ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತ, ವಿದ್ಯಾರ್ಥಿಗಳಿಗೆ ಗುಣಮಟ್ಟದ ತರಬೇತಿ, ಉದ್ಯೋಗಕ್ಕೆ ತಕ್ಕನಾದ ಹಿತಚಿಂತನೆ ಹಾಗೂ ಮಾರುಕಟ್ಟೆಯಲ್ಲಿ ಬೇಡಿಕೆಯಿರುವ ಕ್ಷೇತ್ರಗಳತ್ತ ಆದ್ಯತಾ ಗಮನ ಒದಗಿಸುವುದು ಅಗತ್ಯ. ಇಲ್ಲದಿದ್ದರೆ ವಿದ್ಯಾರ್ಥಿಗಳು ಪದವಿ ಪಡೆದು ನಿರುದ್ಯೋಗಿಗಳಾಗುವ ಭೀತಿಯಿದೆ. ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಖಾಸಗಿ ವಿದ್ಯಾಸಂಸ್ಥೆಗಳು, ರಾಜ್ಯ ಸರಕಾರ, ಎಐಸಿಟಿಇ ಮತ್ತು ಯುಜಿಸಿ ಗಂಭೀರ ಚಿಂತನೆ ನಡೆಸಬೇಕಿದೆ.

- ಡಾ. ವಿಜಯ್‌ಕುಮಾರ್ ಎಚ್.ಕೆ., ರಾಯಚೂರು

ಮನಸ್ಸು ಗೆದ್ದರು

ವಿದ್ಯಮಾನ' ಅಂಕಣದಲ್ಲಿ (ಜು.15) ವಿನಾಯಕ ಭಟ್ ಅವರು ಪ್ರಧಾನಿ ಮೋದಿಯವರ ಉತ್ತರಾಧಿಕಾರಿಯ ಕುರಿತು ಬರೆದಿದ್ದಾರೆ. ಕಳೆದ 11 ವರ್ಷದಿಂದ ಮೋದಿಯವರನ್ನು ಆ ಪಟ್ಟದಲ್ಲಿ ನೋಡಿ, 'ಮೋದಿ ಅಂದರೆ ಪ್ರಧಾನಿ, ಪ್ರಧಾನಿ ಅಂದರೆ ಮೋದಿ' ಎಂಬ ಚಿತ್ತಸ್ಥಿತಿ ಬಹುತೇಕರಲ್ಲಿ ರೂಪುಗೊಂಡಿದೆ. ಆ ಜಾಗದಲ್ಲಿ ಇನ್ನೊಬ್ಬರನ್ನು ಊಹಿಸಿಕೊಳ್ಳಲಾಗದಂಥ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕಾರಣ, ಮೋದಿಯವರು ದೇಶಕ್ಕೆ ನೀಡಿದ ಅತ್ಯಂತ ಪಾರದರ್ಶಕ ಆಡಳಿತ, ಶತ್ರುರಾಷ್ಟ್ರಗಳನ್ನು ಬಗ್ಗುಬಡಿದು ತೋರಿದ ನಮ್ಮ ಶೌರ್ಯ. ಮಾತ್ರವಲ್ಲದೆ, ದೇಶಾದ್ಯಂತ ಸರಳ-ಸುಲಭ ಹಣ ವಿನಿಯೋಗದ ವಿಧಾನವನ್ನು ಪರಿಚಯಿಸಿದ್ದು, ಭಾರತಕ್ಕೆ ವಿಶ್ವಖ್ಯಾತಿ ತಂದುಕೊಟ್ಟ ಹೆಗ್ಗಳಿಕೆ, ಅನೇಕ ಸಣ್ಣ ದೇಶಗಳೊಂದಿಗೆ ಹೊಸದಾಗಿ ಬೆಳೆಸಿದ ಮಿತ್ರತ್ವ, ಕರೋನಾ ಕಾಲಘಟ್ಟದಲ್ಲಿ ದೇಶ-ವಿದೇಶಗಳ ಪ್ರಜೆಗಳಿಗೆ ಉಚಿತ ಲಸಿಕೆ ಮತ್ತು ಧೈರ್ಯ ನೀಡಿ ಪ್ರಾಣ ಉಳಿಸಲು ಮಾಡಿದ ಪ್ರಾಮಾಣಿಕ ಪ್ರಯತ್ನ ಹೀಗೆ ಮೋದಿಯವರ ಸಾಧನೆಗಳನ್ನು ಪಟ್ಟಿಮಾಡುತ್ತಾ ಹೋಗಬಹುದು.

ಒಂದಂತೂ ನಿಜ, ಬದಲಾವಣೆ ಜಗದ ನಿಯಮ. ಮೋದಿಯವರ ಮೊದಲು ಮೋದಿ ಇರಲಿಲ್ಲ, ಪ್ರಾಯಶಃ ನಂತರವೂ ಅವರಿರಲು ಸಾಧ್ಯವಿಲ್ಲ. ದೇಶಸೇವೆ ಮಾಡಲು ತಮಗೆ ಸಿಕ್ಕ ಅವಕಾಶವನ್ನು ನಿಜಕ್ಕೂ ಸದ್ಬಳಕೆ ಮಾಡಿಕೊಂಡು ಅವರು ನಮ್ಮ ಮನಸ್ಸನ್ನು ಗೆದ್ದಿದ್ದಂತೂ ಹೌದು. ಮುಂದಿನ ದಿನಗಳಲ್ಲಿ ಅವರಷ್ಟೇ ಅಥವಾ ಅವರಿಗಿಂತ ಹೆಚ್ಚು ಸಾಮರ್ಥ್ಯದ ಪ್ರಬುದ್ಧ ನಾಯಕ ದೇಶದ ಪ್ರಧಾನಿಯಾಗಲಿ ಎಂಬುದು ಮನದಾಳದ ಆಶಯ.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಇವರು ಪ್ರಧಾನಿಯಾಗಲಿ

ವಿನಾಯಕ ವೆಂ.ಭಟ್ಟರ 'ವಿದ್ಯಮಾನ' ಅಂಕಣ (ಜು.13) ಓದಿದಾಗ ನನಗನಿಸಿದ್ದು, ಮೋದಿಯವರಿಗೆ ಸಾಟಿಯಾಗಬಲ್ಲ, ಅದರಲ್ಲೂ ಪ್ರಧಾನಿ ಸ್ಥಾನಕ್ಕೆ ತಕ್ಕನಾದ ವ್ಯಕ್ತಿ ಸದ್ಯೋಭವಿಷ್ಯದಲ್ಲಿ ಕಾಣುತ್ತಿಲ್ಲ. ದೇಶದ ಬಗೆಗಿನ ನಿಜವಾದ ಕಾಳಜಿ, ಸಂಪುಟದ ಸಚಿವರ ಆಯ್ಕೆಯಲ್ಲಿ ಅರ್ಹತೆಗೆ ಪ್ರಾಧಾನ್ಯ ಮತ್ತು ಅವರ ಮೇಲಿನ ಹತೋಟಿ, ಸಚಿವರಿಂದ ಕೆಲಸ ತೆಗೆಯುವಲ್ಲಿ ಕಾರ್ಯನಿಷ್ಠ ಮಾಲೀಕನ ಧೋರಣೆ, ಮಂತ್ರಿಮಂಡಲವನ್ನು ಹಗರಣರಹಿತವಾಗಿ ಮುನ್ನಡೆಸುವಿಕೆ, ವಿದೇಶಗಳಲ್ಲಿ ಭಾರತದ ಕುರಿತು ಗುಣಾತ್ಮಕ ನಿಲುವುಗಳನ್ನು ಬಿಂಬಿಸುವಲ್ಲಿ ತೋರುವ ಜಾಣ್ಮೆ ಇತ್ಯಾದಿ ಗುಣ-ವೈಶಿಷ್ಟ್ಯಗಳಿರುವ ಇನ್ನೊಬ್ಬ ಮೋದಿ ಬಂದರೆ ನಮ್ಮದೇನೂ ಅಭ್ಯಂತರವಿಲ್ಲ. ಪ್ರಸ್ತುತ, ಭಾರತ ಹಾಗೂ ನರೇಂದ್ರ ಮೋದಿಯವರ ಬಗ್ಗೆ ಹಲವಾರು ದೇಶಗಳಲ್ಲಿ ಮೆಚ್ಚುಗೆ ಇದೆ (ಅಸೂಯೆ ಕೂಡ ಇರಬಹುದು). ಇಂಥ ಸಂಪನ್ನಶೀಲ ಮುತ್ಸದ್ದಿಯೊಬ್ಬರು ಮೋದಿಯವರ ಜಾಗಕ್ಕೆ ಬರಲಿ. ಅಂಥ 'ಯೋಗ'ಪುರುಷ ಅಥವಾ 'ಶಾ'ಣ್ಯಾತನ ಇರುವ ನಿಪುಣ ಯಾರು?

- ಬಿ.ಎಸ್.ಮೋಹನ್ ಕುಮಾರ್, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ವಿನೋದ ಶಿಂತ್ರಿ, ಕೆಂಗೇರಿ**
  ಭಟ್ರೇ, ನಮಗೆ ಕನಿಷ್ಠ ಎರಡು ಜನ್ಮವಾದರೂ ಇರಬೇಕಿತ್ತಲ್ವಾ?
- **ಒಂದನ್ನೇ ಸದುಪಯೋಗಪಡಿಸಿಕೊಂಡ್ರೆ ಅದೇ ಜಾಸ್ತಿಯಾಯ್ತು!**

- **ರಾಜೀವ ಹೆಗಡೆ, ಶಿರಸಿ**
  ಭಟ್ರೇ, ಸತ್ಯವನ್ನು ಹೇಳುವ ಪ್ರಯೋಜನವೇನು?
- **ಆಗ ಯಾವುದನ್ನೂ ನೆನಪಿಟ್ಟುಕೊಳ್ಳುವ ಅಗತ್ಯವಿರುವುದಿಲ್ಲ!**

- **ಉಪೇಂದ್ರ ಕುಲಕರ್ಣಿ, ಧಾರವಾಡ**
  ಭಟ್ರೇ, ನಿಮಗೆ ಉತ್ತಮ ಹವಾಮಾನ ಬೇಕಂದ್ರೆ ಸ್ವರ್ಗಕ್ಕೆ ಹೋಗಬೇಕಂತೆ, ನರಕಕ್ಕೆ ಏಕೆ ಹೋಗಬೇಕು?
- **ಒಳ್ಳೆಯ ಗುಂಡು, ಕಂಪನಿ ಬೇಕು ಅಂದ್ರೆ ನರಕಕ್ಕೆ ಹೋಗಬೇಕು!**

- **ಸಂದೀಪ ನಾಯಕ, ಬೆಂಗಳೂರು**
  ಭಟ್ರೇ, ಆರೋಗ್ಯ ಪುಸ್ತಕಗಳನ್ನು ಓದುವುದು ಡೇಂಜರ್ ಅಂತಾರಲ್ಲ?
- **ಕರಡು ದೋಷಕ್ಕೆ ಪ್ರಾಣ ಹೋಗಬಹುದು ಅಂತೀಯಾ?!**

- **ಗಾಯತ್ರಿ ಸಂದೇಶ, ಬೆಂಗಳೂರು**
  ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಸೃಜನಶೀಲತೆ ಅಂದ್ರ ಏನು?
- **ಯಾರಿಗೂ ಗೊತ್ತಾಗದಂತೆ ಮೂಲವನ್ನು ಕಾಪಾಡುವುದು!**

- **ರವಿ ಕೊಣಾಜೆ, ಮಂಗಳೂರು**
  ಭಟ್ರೇ, ಕೆಲವರು ಪ್ರಶ್ನೆ ಕೇಳಿದರೆ ಸುಮ್ಮನಿರುತ್ತಾರಲ್ಲ?
- **ಅಸಲಿಗೆ ಅವರಿಗೆ ಉತ್ತರ ಗೊತ್ತಿರುವುದಿಲ್ಲ!**

- **ರಾಮಚಂದ್ರ ನಿರಾಣಿ, ಶಿವಮೊಗ್ಗ**
  ಭಟ್ರೇ, ಬುದ್ಧಿವಂತಿಕೆ ಮತ್ತು ಮೂರ್ಖತನದ ಮಧ್ಯೆ ತೆಳುವಾದ ಗೆರೆ ಇರುತ್ತೆ ಅಂತ ಇಲ್ಲೊಬ್ಬ ಹೇಳ್ತಾನಲ್ಲ?
- **ಆ ಗೆರೆಯನ್ನು ಅಳಿಸಿಬಿಟ್ಟಾನು, ನೋಡಿಕೋ!**

- **ಅರುಣ್ ಶರ್ಮ, ಗುಬ್ಬಿ**
  ಭಟ್ರೇ, ಎರಡು ತಪ್ಪುಗಳಿಂದ ಒಂದು ಸರಿ ಆಗುವುದಿಲ್ಲ ಅಲ್ಲವೇ?
- **ಆದರೆ ಹತ್ತಾರು ನೆಪಗಳು ಹುಟ್ಟಿಕೊಳ್ಳುತ್ತವೆ!**

- **ಜಗನ್ನಾಥ, (ಇಮೇಲ್ ಮೂಲಕ)**
  ಭಟ್ರೇ, ಕೆಲಸಕ್ಕೆ ಹೋಗುವುದರ ಲಾಭವೇನು?
- **ಫ್ರೀ ವೈಫೈ ಮತ್ತು ಫ್ರೀ ಕಾಫಿ!**

- **ರಘುವೀರ ಹಾಸವಿ, ಮೈಸೂರು**
  ಭಟ್ರೇ, ಬೇರೆಯವರ ಐಡಿಯಾವನ್ನು ಸುಲಭವಾಗಿ ಕಳುವು ಮಾಡುವುದು ಹೇಗೆ?
- **ಪುಸ್ತಕವನ್ನು ಕದ್ದರಾಯಿತಪ್ಪ!**

- **ಶ್ರೀನಾಥ ಯಜುರ್ವೇದಿ, (ಇಮೇಲ್ ಮೂಲಕ)**
  ಕೆಳಗಿನ ಕ್ರಮಾಂಕದಲ್ಲಿ ಬ್ಯಾಟ್ ಹಿಡಿದು ಬಂದರೂ ತಂಡವನ್ನು ಗೆಲುವಿನ ದಡಕ್ಕೆ ಸೇರಿಸುವವನನ್ನು ಏನೆಂದು ಕರೆಯುತ್ತೀರಿ?
- **ಮಹೇಂದ್ರ ಸಿಂಗ್ ದೋಣಿ!**

ಮೂರನೇ ಮಹಾಯುದ್ಧವನ್ನು ಯಾರು ತಡೆಯಬಲ್ಲರು?

ಜಗತ್ತಿನಲ್ಲಿ ನಾವು ಬಹಳಷ್ಟು ಸರ್ವಾಧಿಕಾರಿಗಳ ಬಗ್ಗೆ ಓದಿದ್ದೇವೆ. ಮಾವೋ ಸರ್ವಾಧಿಕಾರಿಗಳನ್ನ ಮೀರಿಸುವ ವ್ಯಕ್ತಿತ್ವ ಹೊಂದಿದವನು. ಇಂದಿನ ಚೀನಾ ಮಾವೋ ವಾದದ ಮೇಲೆ ಕಟ್ಟಿರುವ, ಅದೇ ಸಿದ್ಧಾಂತವನ್ನ ಪಾಲಿಸುತ್ತಿರುವ ದೇಶವಾಗಿದೆ. ಅದಕ್ಕೆ ಧರ್ಮದ ಭಯವಿಲ್ಲ, ಹಿರಿಯರ ಭಯವಿಲ್ಲ, ದಯೆ, ಕರುಣೆ ಎನ್ನುವ ಪದಗಳಿಗೆ ಅಲ್ಲಿ ಅವಕಾಶವಿಲ್ಲ. ಅದರ ಸಿದ್ಧಾಂತ ಒಂದೇ 'ಜಗತ್ತನ್ನ ಆಳುವುದು'.

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com
mookanahalli@gmail.com

ಜಗತ್ತಿನ ಬಹುತೇಕ ದೇಶಗಳಂತೆ ಚೀನಾ ದೇಶವನ್ನ ಕೂಡ ರಾಜ ಮನೆತನಗಳು ಆಳುತ್ತಿದ್ದವು. ಹೀಗೆ ಚೀನಾ ದೇಶವನ್ನ 2000 ವರ್ಷಕ್ಕೂ ಹೆಚ್ಚುಕಾಲ ಆಳಿದ ರಾಜರ ಅಧಿಕಾರ ಅಥವಾ ಇಂಪೀರಿಯಲಿಸಂ 1911ರಲ್ಲಿ ಕೊನೆಗೊಳ್ಳುತ್ತದೆ. ದೇಶದಲ್ಲಿ ಅಶಾಂತಿ, ಕಡು ಬಡತನ ತಾಂಡವಾಡುತ್ತಿರುತ್ತದೆ. ಮಾವೋ ಝೆಡೊಂಗ್ ಅಂದಿಗೆ 18ರ ಯುವಕ. ಅಂದಿನ ಬಹುತೇಕ ಚೀನಿ ಯುವಕರಂತೆ ಆತನದು ಕೂಡ ಚೈನೀಸ್ ನ್ಯಾಷನಲಿಸ್ಟ್ ಮತ್ತು ಆ್ಯಂಟಿ-ಇಂಪೀರಿಯಲಿಸಂ ಮನಸ್ಥಿತಿ. ಈ ಸಮಯದಲ್ಲಿ ಆತನಿಗೆ ರಷ್ಯದ ಮಾರ್ಕ್ಸಿಸ್ಟ್-ಲೆನಿನಿಸ್ಟ್ ಸಿದ್ಧಾಂತಗಳನ್ನ ಸಾರುವ ಪುಸ್ತಕ ಓದಲು ಸಿಗುತ್ತದೆ. ಆ ಪುಸ್ತಕ ಓದಿ ಮುಗಿಸುವುದರೊಳಗೆ ಮಾವ್ ಒಬ್ಬ ಕಟ್ಟಾ ಕಮ್ಯುನಿಸ್ಟ್ ಆಗಿ ಬದಲಾಗಿರುತ್ತಾನೆ. ಚೀನಾ ದೇಶವನ್ನ ಜಗತ್ತಿನಲ್ಲಿ ದೈತ್ಯ ಶಕ್ತಿಯನ್ನಾಗಿ ಮಾಡಬೇಕೆನ್ನುವುದು ಆತನ ಕನಸು.

ಈ ಸಮಯದಲ್ಲಿ ಚೈನೀಸ್ ನ್ಯಾಷನಲಿಸ್ಟ್ ಬಹು ಸಂಖ್ಯೆಯಲ್ಲಿದ್ದರು. 1919ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾದ ಫೌಂಡರ್ ಮೆಂಬರ್ ಆಗಿ ಮಾವ್ ಸೇರಿಕೊಳ್ಳುತ್ತಾನೆ . ಹಂತ ಹಂತವಾಗಿ ಕಮ್ಯುನಿಸ್ಟ್ ಪಾರ್ಟಿಯನ್ನ ಬೆಳೆಸುತ್ತಾ ಹೋಗುತ್ತಾನೆ. ಮೊದಲಿನಿಂದಲೂ ಮಾವೋನದು ಒಂದೇ ಸಿದ್ಧಾಂತ- 'ನಾನು ಯೋಚಿಸಿದಂತೆ ಜನ ಯೋಚಿಸಬೇಕು'. ನಿರ್ಧಾರಗಳನ್ನ ಎಲ್ಲರೂ ತೆಗೆದುಕೊಳ್ಳಲು ಸಾಧ್ಯವಿಲ್ಲ. ಜನ ನಾವು ತೆಗೆದುಕೊಂಡ ನಿರ್ಧಾರಗಳನ್ನ ಪಾಲಿಸಬೇಕು ಅಷ್ಟೇ ಎನ್ನುವುದು ಆ ಸಿದ್ಧಾಂತ.

1937ರಲ್ಲಿ ಜಪಾನಿಯರು ಚೀನಾದ ಮೇಲೆ ದಾಳಿ ಮಾಡುತ್ತಾರೆ. ಚೀನಾದಲ್ಲಿ ಸಿವಿಲ್ ವಾರ್ ಶುರುವಾಗುತ್ತದೆ. ಜಪಾನಿಯರು ಒಂದು ಕಡೆ, ಚೀನಿ ನ್ಯಾಷನಲಿಸ್ಟ್‌ಗಳು ಇನ್ನೊಂದು ಕಡೆ. ಇವೆರಡರ ನಡುವೆ ಚೀನಿ ಜನತೆ ಕೂಡ ಆಂತರಿಕ ಕಲಹದಿಂದ, ಬಡತನ, ರೋಗ-ರುಜಿನಗಳಿಂದ ಬಸವಳಿದಿತ್ತು. ಮಾವೋ ಈ ಸಮಯವನ್ನ ತನ್ನ ಕಮ್ಯುನಿಸ್ಟ್ ಪಾರ್ಟಿಯನ್ನ ಸುಭದ್ರವಾಗಿ ಕಟ್ಟಲು ಉಪಯೋಗಿಸಿಕೊಳ್ಳುತ್ತಾನೆ. 1937ರಿಂದ 1945ರವರೆಗೆ ಚೀನಾ ಜಪಾನಿನ ಅಧೀನದಲ್ಲಿರುತ್ತದೆ. ಆ ನಂತರ ಚೈನೀಸ್ ನ್ಯಾಷನಲಿಸ್ಟ್‌ಗಳನ್ನ ಕಮ್ಯುನಿಸ್ಟರು ಸೋಲಿಸುವುದರಲ್ಲಿ ಸಫಲರಾಗುತ್ತಾರೆ. ಕೊನೆಗೆ 1949, ಅಕ್ಟೋಬರ್ 1ರಂದು ಮಾವ್ ಪೂರ್ಣ ಚೀನಾವನ್ನ ಒಂದೇ ಪಾರ್ಟಿ ಆಳುತ್ತಿರುವುದಾಗಿ ಘೋಷಣೆ ಮಾಡುತ್ತಾನೆ. ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾ ಹೀಗೆ ಪೂರ್ಣ ಚೀನಾವನ್ನ ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತದೆ.

ಮಾವೋ ಈ ಮಟ್ಟಕ್ಕೆ ಬರುವವರೆಗೆ ಸಾವಿರಾರು ಜನರ ಹತ್ಯೆಯನ್ನ ಮಾಡಿಸಿರುತ್ತಾನೆ. ತನ್ನ ನಿಲುವನ್ನ ವಿರೋಧಿಸಿದ, ಸಂಶಯಿಸಿದ ಯಾರನ್ನೂ ಮಾವೋ ಉಳಿಸಿದ ನಿದರ್ಶನಗಳು ಇಲ್ಲ. ಈಗ ಹೇಳಿಕೇಳಿ ಪೂರ್ಣ ಚೀನಾದ ಮೇಲಿನ ಅಧಿಕಾರ ಅವನ ಕೈಲಿತ್ತು. ಚೀನಾವನ್ನ ಪ್ರಪಂಚದ ದೈತ್ಯ ಮಿಲಿಟರಿ ಶಕ್ತಿಯನ್ನಾಗಿ ಮಾಡಬೇಕೆನ್ನುವುದು ಆತನ ಕನಸು. ಆತ ಒಮ್ಮೆ 'ನನ್ನ ಕನಸಿನ ಚೀನಾ ಕಟ್ಟಲು 30 ಕೋಟಿ ಚೀನಿಯರನ್ನ ಬಲಿಕೊಡಬೇಕಾದರೆ ಅದು ಆಗಲಿ' ಎನ್ನುವ ಹೇಳಿಕೆ ನೀಡುತ್ತಾನೆ. ಈ ರೀತಿಯ ಹೇಳಿಕೆ ನೀಡಿದಾಗ ಚೀನಾ ದೇಶದ ಜನಸಂಖ್ಯೆ 60 ಕೋಟಿ. ಅಂದರೆ ಗಮನಿಸಿ ಕಾರ್ಯಸಾಧನೆಗೆ ತನ್ನ ದೇಶದ ಅರ್ಧ ನಾಗರಿಕರ ಬಲಿಕೊಡಬೇಕಾದ ಪ್ರಸಂಗ ಬಂದರೆ ಅದಕ್ಕೂ ಸಿದ್ಧ ಎನ್ನುವ ನಾಯಕನ ಹೇಳಿಕೆ ಇದೆಯಲ್ಲ ಅದು ಆ ದೇಶದ ಬದಲಾದ ಮನಸ್ಥಿತಿಯನ್ನ ತೋರಿಸುತ್ತದೆ. ತನ್ನ ಕಾರ್ಯಸಾಧನೆಗೆ ಅಡ್ಡಿ ಆದವರನ್ನ ಅಥವಾ ಅಡ್ಡಿ ಆಗಬಹುದು ಎಂದು ಭಾವಿಸಿದವರನ್ನ ಗುರುತಿಸಿ ಕೊಲ್ಲಲು ತಾನು ಸಾಕಿದ ನಿಷ್ಠಾವಂತ ಹುಡುಗರ ಸೈನ್ಯ 'ರೆಡ್ ಆರ್ಮಿ'ಯನ್ನ ಬಳಸಿಕೊಳ್ಳುತ್ತಾನೆ. ಹೀಗೆ ಶಿಕ್ಷಕರು, ಪತ್ರಕರ್ತರು, ಚಿಂತಕರು ಸೇರಿ ಸರಿಸುಮಾರು 5,50,000 ಜನರನ್ನ ಕೊಲ್ಲಿಸುತ್ತಾನೆ. ಇದು ಕೇವಲ ಬುದ್ಧಿವಂತರು ಅಥವಾ ಜ್ಞಾನಿಗಳು ಎನ್ನಿಸಿಕೊಂಡವರ ಲೆಕ್ಕವಷ್ಟೆ. ಮಾವೋ ಹೀಗೆ ಎಷ್ಟು ಜನರನ್ನ ಕೊಂದಿರಬಹುದು ಎನ್ನುವ ನಿಖರ ಲೆಕ್ಕ ಯಾರ ಬಳಿಯಿಲ್ಲ. ಒಟ್ಟು ನಾಲ್ಕು ಕೋಟಿ ಜನರ ಸಾವಿಗೆ ಮಾವೋ ಕಾರಣನಾಗಿದ್ದಾನೆ ಎನ್ನುವ ಒಂದು ಅಂದಾಜಿನ ಲೆಕ್ಕಾಚಾರವನ್ನ ಇತಿಹಾಸ ಕಟ್ಟಿಕೊಡುತ್ತದೆ.

ಮಾವೋ ತನ್ನ ಮಾರ್ಗದರ್ಶಕ ರಷ್ಯಾ ಹೇಳಿದಂತೆ ಕೇಳುವುದನ್ನ 1927ರ ವೇಳೆಗೆ ನಿಲ್ಲಿಸಿಬಿಟ್ಟಿದ್ದ. ರಷ್ಯಾ ನೆಲದಲ್ಲಿ ನಡೆದ ರೀತಿಯ ಕ್ರಾಂತಿ ಚೀನಾದಲ್ಲಿ ಆಗಲು ಸಾಧ್ಯವಿಲ್ಲ. ಇಲ್ಲಿ ಪಾರ್ಟಿಯನ್ನ ಹೇಗೆ ಬೆಳೆಸಬೇಕು ಎನ್ನುವುದು ನನಗೆ ಗೊತ್ತು ಎನ್ನುವ ಧಾರ್ಷ್ಟ್ಯದ ಮಾತುಗಳನ್ನ ಹೇಳಿದ್ದ. ಹೀಗೆ ತನ್ನದೇ ಆದ ಥಿಯರಿಗಳಿಂದ ಇಂದು ಕಮ್ಯುನಿಸ್ಟ್ ಪಾರ್ಟಿಯಲ್ಲಿ 'ಮಾವೋಯಿಸಂ' ಎನ್ನುವ ಹೊಸ ಸಿದ್ಧಾಂತ ಹುಟ್ಟಿಕೊಂಡಿದೆ. ಮಾವೋಯಿಸಂ ಹೇಳುವುದು ಜನರನ್ನ ನಿಯಂತ್ರಣದಲ್ಲಿಡುವುದು, ಯಾವುದೇ ವಿದೇಶಿ ಚಿಂತನೆ ದೇಶದಲ್ಲಿ ನುಸುಳದ ಹಾಗೆ ನೋಡಿಕೊಳ್ಳುವುದು, ಇವರ ತತ್ವ ಸಿದ್ಧಾಂತಕ್ಕೆ ಎದುರಾಡಿದವರನ್ನ ಕೊಲ್ಲುವುದು, ಚಿಕ್ಕ ಮಕ್ಕಳಿಂದ ಈ ಸಿದ್ಧಾಂತವನ್ನ ಅವರ ಬದುಕಿನ ರೀತಿಯನ್ನಾಗಿ ಬೆಳೆಸುವುದು. ಇದು ನಿಜವಾದ ಸಿದ್ಧಾಂತ. ಹೊರಗಡೆ ಸಮಾನತೆ ತರುವುದು, ಬಡತನ ಹೋಗಲಾಡಿಸುವುದು ಇಂಥ ಸಂದೇಶಗಳನ್ನ ಮುದ್ರಿಸಿ ಈತ ತನ್ನ ಜನರಿಗೆ ಹಂಚಿದ ರೆಡ್ ಬುಕ್ ಇಂದಿನವರೆಗೂ ಜಗತ್ತಿನಲ್ಲಿ ಅತ್ಯಂತ ಹೆಚ್ಚು ಮುದ್ರಿತ ಪುಸ್ತಕ ಎನ್ನುವ ಹೆಗ್ಗಳಿಕೆ ಉಳಿಸಿಕೊಂಡಿದೆ. ಜನರ ಮನದಲ್ಲಿ ಸ್ಥಾನ ಪಡೆಯಲು ಸಾಹುಕಾರರ, ಜಮೀನುದಾರರ ಹತ್ಯೆ ಮಾಡುವುದು ಇವರ ತಂತ್ರ

ಗಳಾಗಿತ್ತು. ಜನರ ಮೈಂಡ್ ರೀಡಿಂಗ್ ಮತ್ತು ಅವರ ಆಲೋಚನೆಗಳನ್ನು ಮ್ಯಾನುಪುಲೇಟ್ ಮಾಡುವುದು ಕಾರ್ಯಸಾಧನೆಗೆ ಅತ್ಯಂತ ಮುಖ್ಯ ಎನ್ನವುದು ಈತನ ಪ್ರತಿಪಾದನೆ. 1949ರಿಂದ 16 ವರ್ಷಗಳ ಕಾಲ ಆತನನ್ನ ವಿರೋಧಿಸುವರು ಯಾರೂ ಇರಲಿಲ್ಲ. ಆತನ ಡೆಪ್ಯೂಟಿ ಅಂದರೆ ರಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಪಡೆದಿದ್ದ ಲಿಯೂ ಶಾವೋಕಿ, ಮಾವ್‌ನ ಕಲ್ಚರಲ್ ರೆವಲ್ಯೂಷನ್‌ಗೆ ವಿರುದ್ಧವಾಗಿ 1965ರಲ್ಲಿ ಧ್ವನಿ ಎತ್ತುತ್ತಾನೆ. ಪಾರ್ಟಿಯಲ್ಲಿ ಪ್ರಸಿದ್ಧನಾಗಿದ್ದ ಅವನನ್ನ ತಕ್ಷಣ ಏನೂ ಮಾಡುವುದಿಲ್ಲ. ನಿಧಾನವಾಗಿ ಅವನನ್ನ ಕಡೆಗಣಿಸುತ್ತಾ ಬರುತ್ತಾನೆ. ಕೊನೆಗೆ ಆತನ ತೇಜೋವಧೆ ಮಾಡಿದ್ದು ಅಲ್ಲದೆ, ಆತನ ಸಾವು ಅತ್ಯಂತ ನಿಧಾನ ಮತ್ತು ಯಾತನಾಮಯವಾಗಿರಬೇಕು ಎಂದು ಫರ್ಮಾನು ಹೊರಡಿಸುತ್ತಾನೆ. ಆತನ ನರಳುವಿಕೆಯನ್ನ ಚಿತ್ರೀಕರಿಸಿ ಅದನ್ನ ಮಾವ್ ಖುಷಿಯಿಂದ ನೋಡುತ್ತಿದ್ದಂತೆ .

ಜಗತ್ತಿನಲ್ಲಿ ನಾವು ಬಹಳಷ್ಟು ಸರ್ವಾಧಿಕಾರಿಗಳ ಬಗ್ಗೆ ಓದಿದ್ದೇವೆ. ಮಾವೋ ಸರ್ವಾಧಿಕಾರಿಗಳನ್ನ ಮೀರಿಸುವ ವ್ಯಕ್ತಿತ್ವ ಹೊಂದಿದವನು. ಇಂದಿನ ಚೀನಾ ಮಾವೋ ವಾದದ ಮೇಲೆ ಕಟ್ಟಿರುವ, ಅದೇ ಸಿದ್ಧಾಂತವನ್ನ ಪಾಲಿಸುತ್ತಿರುವ ದೇಶವಾಗಿದೆ. ಅದಕ್ಕೆ ಧರ್ಮದ ಭಯವಿಲ್ಲ, ಹಿರಿಯರ ಭಯವಿಲ್ಲ, ದಯೆ, ಕರುಣೆ ಎನ್ನುವ ಪದಗಳಿಗೆ ಅಲ್ಲಿ ಅವಕಾಶವಿಲ್ಲ. ಅದರ ಸಿದ್ಧಾಂತ ಒಂದೇ 'ಜಗತ್ತನ್ನ ಆಳುವುದು'. ಇದು ಇಂದು-ನಿನ್ನೆಯದಲ್ಲ 1911ರಲ್ಲಿ 18ರ ಹುಡುಗನ ಮನಸ್ಸಿನಲ್ಲಿ ಮೊಳೆತು ಬೀಜವಾದದ್ದು. ಇಂದು ಅದು ರಕ್ತಬೀಜಾಸುರನಂತೆ ತನ್ನ ಸಂತಾನವನ್ನ ಹೆಚ್ಚಿಸಿಕೊಂಡಿದೆ.

ಎಲ್ಲಾ ಇಸಂಗಳು ಅವನತಿ ಹೊಂದಲೇಬೇಕು. ಇಂಪೀರಿಯಲಿಸಂ 2 ಸಾವಿರ ವರ್ಷದ ನಂತರ ಕೊನೆಯಾಯ್ತು. ಹೀಗೆ ಎಷ್ಟೇ ವರ್ಷವಾಗಲಿ ಎಲ್ಲದಕ್ಕೂ ಕೊನೆ ಇದ್ದೇ ಇರುತ್ತದೆ. ಮಾವೋಯಿಸಂ ಕೂಡ ಕೊನೆಗಾಣುತ್ತದೆಯೇ? ಎನ್ನುವುದು ಸದ್ಯಕ್ಕೆ ಉತ್ತರವಿಲ್ಲದ ಪ್ರಶ್ನೆ. ಆದರೆ ಚೀನಾ ಇಂದು ಅಂದಿನಂಥ ಪಕ್ಕಾ ಕಮ್ಯುನಿಸ್ಟ್ ದೇಶವಾಗಿ ಉಳಿದಿಲ್ಲ ಎನ್ನುವುದು ಕೂಡ ಎಲ್ಲರಿಗೂ ಗೊತ್ತಿದೆ. ಅದು ಅಮೆರಿಕ ದೇಶಕ್ಕಿಂತ ದೊಡ್ಡ ಕ್ಯಾಪಿಟಲಿಸ್ಟ್ ದೇಶವಾಗಿ ಬದಲಾಗಿದೆ. ಬಂಡವಾಳಶಾಹಿ ದೇಶಗಳನ್ನು ವರ್ತಕರು ಆಳಲು ಶುರುಮಾಡುತ್ತಾರೆ. ತಮ್ಮ ಬಳಿ ಇರುವ ಹಣದ ಬಲದಿಂದ ನಿಧಾನವಾಗಿ ರಾಜಕೀಯ ಕ್ಷೇತ್ರದಲ್ಲಿ ಮೂಗು ತೂರಿಸಲು ಶುರುಮಾಡುವ ಇವರು ಒಂದಷ್ಟು ಸಮಯದ ನಂತರ ಅವರೇ ಅಥವಾ ಅವರಿಗೆ ಬೇಕಾದ ನಿಷ್ಠಾವಂತರನ್ನೇ ರಾಜಕೀಯಕ್ಕೆ ತರುತ್ತಾರೆ. ಯಾವಾಗ ವ್ಯಾಪಾರಿಗಳು ರಾಜಕೀಯದಲ್ಲಿ ಮತ್ತು ಪಾಲಿಸಿ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಮಟ್ಟಕ್ಕೆ ಬೆಳೆಯುತ್ತಾರೆ, ಆಗೆಲ್ಲಾ ಆ ದೇಶಗಳ ಸಾಮಾನ್ಯ ಪ್ರಜೆಯ ಜೀವನ ಕಷ್ಟವಾಗುತ್ತದೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ಅಮೆರಿಕ. ಇಂದಿಗೆ ಅಮೆರಿಕ ದೇಶದ ಸಾಮಾನ್ಯ ಪ್ರಜೆಯ ಜೀವನ ಬಹಳ ಕಷ್ಟಕರವಾಗಿದೆ. ಅಲ್ಲಿನ ಹಣದುಬ್ಬರ ಆತನ ಎಲ್ಲಾ ದುಡಿಮೆಯನ್ನು ನುಂಗಿ ನೀರು ಕುಡಿಯುತ್ತಿದೆ. ಅದೇ ಸಮಯದಲ್ಲಿ ಚೀನಾ ಅಮೆರಿಕಗಿಂತ ಒಂದು ಪಟ್ಟು ಹೆಚ್ಚು ಬಂಡವಾಳಶಾಹಿ ದೇಶವಾಗಿ ಕೂಡ ತನ್ನ ಉದ್ದಿಮೆದಾರರ ಮೇಲೆ ಬಹಳಷ್ಟು ಹಿಡಿತವನ್ನು ಹೊಂದಿದೆ. ಮೂಲದಲ್ಲಿರುವ ಮಾವೊ ಸಿದ್ಧಾಂತದ ಬೇರುಗಳು ಅದೆಷ್ಟು ಭದ್ರ ಎನ್ನುವುದಕ್ಕೆ ಜಾಕ್ ಮಾ ಪರಿಸ್ಥಿತಿ ನಮ್ಮ ಕಣ್ಣ ಮುಂದಿದೆ.

ಇವತ್ತಿಗೆ ಚೀನಾ ಅದೆಷ್ಟು ಬಲಶಾಲಿ ಎಂದರೆ ಅದರ ಮೇಲೆ ಬಯಸಿ ಕೂಡ ಅಮೆರಿಕ ಯುದ್ಧವನ್ನು ಸಾರಲಾರದು. ಇಂದಿನ ದಿನದ ಯುದ್ಧವನ್ನು ನಿರ್ಣಯಿಸುವುದು ಮಿಲಿಟರಿ ಶಕ್ತಿಯಲ್ಲ, ಮಿಲಿಟರಿ ಅಧಿಕಾರಿಗಳು ಕೂಡ ಅಲ್ಲ, ದೇಶದ ಪ್ರಧಾನಿ ಅಥವಾ ಪ್ರೆಸಿಡೆಂಟ್ ಅಲ್ಲವೇ ಅಲ್ಲ! ನಿಮಗೆ ಅಚ್ಚರಿ ಆದೀತು, ಇವತ್ತು ಯುದ್ಧವನ್ನು ನಿರ್ಧರಿಸುವುದು ವ್ಯಾಪಾರ, ಉದ್ದಿಮೆದಾರ. ಅಮೆರಿಕದ ಹೂಡಿಕೆದಾರರ ಎಣಿಕೆಗೆ ಸಿಗಲಾರದಷ್ಟು ಹಣ ಚೀನಾದಲ್ಲಿ ಹೂಡಿಕೆಯಾಗಿದೆ. ಟ್ರಂಪ್ ಸ್ವತಃ ಉದ್ಯಮಿ, ಹೀಗಾಗಿ ಆತ ಯುದ್ಧದ ನಿರ್ಣಯವನ್ನು ಮಾಡಬಲ್ಲರು. ಇವತ್ತಿಗೆ ನಮ್ಮ ಕಣ್ಣಿಗೆ ಕಾಣುವ ಇರಾನ್ ಮೇಲಿನ ದಾಳಿ, ಇಸ್ರೇಲ್ ಮತ್ತು ಗಾಜಾ ನಡುವಿನ ಯುದ್ಧ, ಮುಗಿಯದ ರಷ್ಯಾ ಮತ್ತು ಉಕ್ರೇನ್ ಯುದ್ಧ, ಇತ್ತೀಚೆಗೆ ಉಲ್ಬಣದ ಸ್ಥಿತಿಗೆ ಹೋಗಿದ್ದ ಭಾರತ-ಪಾಕಿಸ್ತಾನದ ಸ್ಥಿತಿ ಇವೆಲ್ಲವೂ ದೊಡ್ಡ ಚಿತ್ರದ ಹಿಂದೆ ನಡೆಯುವ ಸಣ್ಣ ಪುಟ್ಟ ಘಟನೆಗಳು. ನೀವು ಒಂದನೇ ಮಹಾಯುದ್ಧದ ನಂತರದ ಪರಿಸ್ಥಿತಿಯನ್ನು ಒಮ್ಮೆ ಪರಿಶೀಲಿಸಿ ನೋಡಿ ಸಾಕು, ಅಂದಿನ ಮತ್ತು ಇಂದಿನ ಪರಿಸ್ಥಿತಿ ಹೆಚ್ಚು ಕಡಿಮೆ ಒಂದೇ ಆಗಿದೆ. ಹೀಗಾಗಿ ಯುದ್ಧ ಯಾವಾಗ ಬೇಕಾದರೂ ಆಗಬಹುದು. ಸಣ್ಣಪುಟ್ಟ ಗಾತ್ರದಲ್ಲಿ ನಡೆಯುತ್ತಿರುವ ಇಂದಿನ ಸಂಘರ್ಷಗಳು ದೊಡ್ಡ ಸಂಘರ್ಷಕ್ಕೆ ಎಲ್ಲರೂ ತಮ್ಮ ಶಕ್ತಿಯ ಪರೀಕ್ಷೆಯನ್ನು ಮಾಡಿಕೊಳ್ಳುತ್ತಿರುವ ಪ್ರಯೋಗವಷ್ಟೇ. ಈ ನಿಟ್ಟಿನಲ್ಲಿ ನೋಡಿದಾಗ ಕೂಡ ಚೀನಾ ತನ್ನ ಗೆಲುವನ್ನು ದಾಖಲಿಸಿಕೊಳ್ಳುತ್ತಿದೆ. ಅಮೆರಿಕದ ಶಕ್ತಿ ಸಾಮರ್ಥ್ಯ ಅದಕ್ಕೆ ಗೊತ್ತಾಗಿದೆ. ತನ್ನ ಮಿಲಿಟರಿ ಆಯುಧಗಳ ಶಕ್ತಿಯನ್ನು ಅದು ಪಾಕಿಸ್ತಾನದ ಮೂಲಕ ಭಾರತದ ಮೇಲೆ ಪ್ರಯೋಗಿಸಿ ಕಂಡುಕೊಂಡಿದೆ. ಇಸ್ರೇಲ್ ಶಕ್ತಿಯೇನು ಅಂತ ಅದಕ್ಕೆ ಗೊತ್ತಿದೆ. ಯುದ್ಧವಾದಲ್ಲಿ ರಷ್ಯಾ ತನ್ನ ಬೆನ್ನಿಗೆ ನಿಲ್ಲಲಿದೆ ಎನ್ನುವುದು ಕೂಡ ಚೀನಾಗೆ ಗೊತ್ತಿದೆ. ಅದು ಸದ್ದಿಲ್ಲದೇ ಡೇಟಾ ಕಲೆಕ್ಷನ್‌ನಲ್ಲಿ ತೊಡಗಿದೆ. ಜಗತ್ತಿನಾದ್ಯಂತ ಆಗುತ್ತಿರುವ ಎಲ್ಲಾ ಸಂಘರ್ಷಗಳ ಹಿಂದೆ ದೊಡ್ಡ ಸಂಘರ್ಷಕ್ಕೆ ತಾಲೀಮು ನಡೆಯುತ್ತಿದೆ ಎನ್ನುವುದರ ಅರಿವು ಕೂಡ ಅದಕ್ಕಿದೆ. ಹೀಗಾಗಿ ಚೀನಾ ಹೆಚ್ಚು ಗದ್ದಲವಿಲ್ಲದೆ ಡೇಟಾ ಸಂಗ್ರಹ ಮಾಡುತ್ತಿದೆ. ಏಕೆಂದರೆ ಯುದ್ಧವನ್ನು ತಡೆಯುವ ಶಕ್ತಿಯಿರುವುದು ಡೇಟಾಗೆ, ಹೂಡಿಕೆದಾರರಿಗೆ ಮತ್ತು ಉದ್ದಿಮೆದಾರರಿಗೆ ಮಾತ್ರ. ಇಂದಿಗೆ ಈ ಮೂರು ಹೆಚ್ಚಿರುವುದು ಚೀನಾದಲ್ಲಿ ಎನ್ನುವುದು ರಹಸ್ಯವೇನಲ್ಲ. ಮಾವೋ ಕನಸು ನಿಜ ಮಾಡುವಲ್ಲಿ ಚೀನಾ ನಡೆದುಬಂದ ದಾರಿ, ಈಗ ಹಿಡುತ್ತಿರುವ ಹೆಜ್ಜೆ ರೋಚಕವಾಗಿದೆ. ಸದ್ಯದ ಮಟ್ಟಿಗೆ ಬಂಡವಾಳ ಪ್ಲಸ್ ಮಾವೋಯಿಸಂ ಬ್ಲೆಂಡ್ ಗೆಲ್ಲುತ್ತಿದೆ.

ತನ್ನಿಮಿತ್ತ

ಶ್ರೀನಿವಾಸ ರಾಘವೇಂದ್ರ, ಮೈಸೂರು

ಶಸ್ತ್ರ ತ್ಯಜಿಸಿ, ಶಾಸ್ತ್ರ ಹಿಡಿದು ಜಯಿಸಿದ ಭೀಮಾ ತೀರದ ಸಂತ

ಅಸದೃಶ ಸಾಧನೆ ಮಾಡಿ ಲೋಕಪೂಜ್ಯರಾದ ಎಷ್ಟೋ ಮಂದಿ ಮೊದಲಿಗೆ ಎಲ್ಲರಂತೆ ಜನಸಾಮಾನ್ಯರೊಂದಿಗೆ ವ್ಯವಹರಿಸಿಕೊಂಡು ಇರುತ್ತಾರೆ. ಆದರೆ ಬದುಕಿನ ಒಂದು ಹಂತದಲ್ಲಿ ದೈವವು ತಿರುವು ಕೊಟ್ಟಾಗ, ಇದ್ದಕ್ಕಿದ್ದಂತೆ ಬದಲಾಗಿ ಅಲ್ಪಾವಧಿಯಲ್ಲಿ ಹೆಚ್ಚು ಸಾಧನೆ ಮಾಡಿ ಮೇರುಶಿಖರವನ್ನೇರುತ್ತಾರೆ. ಇಂಥವರ ಸಾಲಿನಲ್ಲಿ ಬರುವವರು ಶ್ರೀ ಮಧ್ವಾಚಾರ್ಯರ ಪರಂಪರೆಯಲ್ಲಿ ಐದನೆಯವರಾಗಿ ಬಂದ ಶ್ರೀ ಜಯತೀರ್ಥರು. ತತ್ವಶಾಸ್ತ್ರಕ್ಕೆ ನೀಡಿದ ಅಸಾಧಾರಣ ಕೊಡುಗೆಯಿಂದಾಗಿ ಇವರನ್ನು ಟೀಕಾಚಾರ್ಯರೆಂದೂ ಕರೆಯುತ್ತಾರೆ. ಅಷಾಢ ಬಹುಳ ಪಂಚಮಿಯ ದಿನವಾದ ಇಂದು (ಜು.15) ಅವರ ಪುಣ್ಯಾರಾಧನೆ.

14ನೇ ಶತಮಾನದ ಮಧ್ಯಭಾಗ. ಮಹಾರಾಷ್ಟ್ರದ ಪಂಢರಪುರ ಸಮೀಪದ ಮಂಗಳವೇಡೆ ಗ್ರಾಮದಲ್ಲಿದ್ದರು ಧೋಂಡೋಪಂತ ನರಸಿಂಹರಾಯರು. ಇವರು ಸುತ್ತಮುತ್ತಲ ಪ್ರಾಂತ್ಯದ ಆಡಳಿತ ನಡೆಸುವ ಮಾಂಡಲೀಕರಾಗಿದ್ದರು. ಇವರಿಗೊಬ್ಬನೇ ಮಗ ರಘುನಾಥ ಧೋಂಡೋಪಂತ. ಮರಾಠಿಯಲ್ಲಿ 'ಧೋಂಡೋ' ಎಂದರೆ ಕಲ್ಲುಗುಂಡು ಎಂದರ್ಥ (ಹಳೇ ಮೈಸೂರು ಪ್ರಾಂತ್ಯದಲ್ಲಿ ಹುಟ್ಟುವ ಮಕ್ಕಳಿಗೆ 'ಗುಂಡು', 'ಗುಂಡೂರಾಯ' ಎನ್ನುವಂತೆ). ಮಕ್ಕಳು ಬದುಕಿನ ಕಷ್ಟಗಳನ್ನು ಎದುರಿಸಿಯೂ ಕಲ್ಲಿನಂತೆ ಸಹಿಷ್ಣುತೆ ಹೊಂದಿರಲಿ ಎಂಬ ಆಶಯ ಇದರ ಹಿನ್ನೆಲೆಯಲ್ಲಿದ್ದಿರಬಹುದು.

ಬ್ರಾಹ್ಮಣನಾಗಿದ್ದರೂ ಕತ್ತಿ ಹಿಡಿದು ಯುದ್ಧಮಾಡುವ ಕ್ಷಾತ್ರ ಪ್ರವೃತ್ತಿ ರಘುನಾಥನದು. ಇಪ್ಪತ್ತರ ಬಿಸಿಪ್ರಾಯ. ಮದುವೆಯಾಗಿದ್ದರೂ ಸೊಸೆಯನ್ನು ಇನ್ನೂ ಮನೆತುಂಬಿಸಿಕೊಂಡಿರಲಿಲ್ಲ. ಕಾರ್ಯನಿಮಿತ್ತ ಕುದುರೆಯೇರಿ ಸೈನ್ಯದೊಡನೆ ಭೀಮಾತೀರಕ್ಕೆ ರಘುನಾಥನ ಆಗಮನ. ಸುಡುಬಿಸಿಲಿನಿಂದ ಬಾಯಾರಿದ ಅವನಿಗೆ ಕುದುರೆಯಿಂದ ಇಳಿದು ತೃಷೆ ತಣಿಸಿಕೊಳ್ಳುವಷ್ಟೂ ವ್ಯವಧಾನವಿರಲಿಲ್ಲ. ಹೀಗಾಗಿ ಅದರ ಮೇಲಿದ್ದುಕೊಂಡೇ ನದಿಯ ಹರಿವಿಗೆ ಎದುರಾಗಿ ನೀರಿಗೆ ಬಾಯೊಡ್ಡಿದ. ದಡದಲ್ಲಿ ಕೂತು ಜಪಿಸುತ್ತಿದ್ದ ವೃದ್ಧಯತಿಗಳು ಇದನ್ನು ವೀಕ್ಷಿಸುತ್ತಿದ್ದರು. ಅವರೇ ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ 4ನೇ ಯತಿಗಳಾದ ಅಕ್ಷೋಭ್ಯತೀರ್ಥರು. ಅಕ್ಷೋಭ್ಯರು ರಘುನಾಥನನ್ನು 'ಕಿಂ ಪಶು ಪೂರ್ವ ದೇಹೇ?' (ಹಿಂದಿನ ಜನ್ಮದಲ್ಲಿ ನಾಲ್ಕು ಕಾಲಿನ ಪ್ರಾಣಿಯಾಗಿದ್ದೆಯಾ?) ಎಂದು ಕೇಳಿಯೇ ಬಿಟ್ಟರು! ಆ ಮಾತು ಯುವಕನಿಗೆ ಬರಸಿಡಿಲಿನಂತೆ ಅಪ್ಪಳಿಸಿ, ಪೂರ್ವಜನ್ಮದ ಸ್ಮರಣೆಯನ್ನು ತಂದಿತ್ತು!

ಹಿಂದೆಲ್ಲಾ ವಾಹನಗಳಿರಲಿಲ್ಲವಾದ್ದರಿಂದ, ಮಧ್ವಾಚಾರ್ಯರು ತಮ್ಮ ಗ್ರಂಥಗಳನ್ನು ಎತ್ತಿನ ಬೆನ್ನ ಮೇಲೆ ಕೊಂಡೊಯ್ಯುತ್ತಿದ್ದರು. ಮಾರ್ಗಮಧ್ಯೆ ಶಿಷ್ಯರಿಗೆ ಪಾಠ ಹೇಳುವಾಗ ಈ ಎತ್ತು ಕೂಡ ಕೂತಿರುತ್ತಿತ್ತು. ಒಮ್ಮೆ ದುರದೃಷ್ಟವಶಾತ್ ಸರ್ಪದಂಶನವಾಗಿ ಎತ್ತು ಮೂರ್ಛೆಹೋಯಿತು. ಮಧ್ವಾಚಾರ್ಯರು ಅದರ ಮೈದಡವಿ ಶುಶ್ರೂಷೆ ಮಾಡಿ ಕಿವಿಯಲ್ಲಿ ದ್ವಾದಶ ಸ್ತೋತ್ರವನ್ನು ಪಠಿಸಿದಾಗ ಎತ್ತಿಗೆ ಮರುಜೀವ ಬಂತು. ಇವುಗಳ ಸ್ಮರಣೆ ರಘುನಾಥನಿಗಾಗಿ ಗುರುಗಳ ಕಾಲಿಗೆರಗಿದ, ಸನ್ಯಾಸ ನೀಡುವಂತೆ ಪ್ರಾರ್ಥಿಸಿದ. ಉತ್ತರಾಧಿಕಾರಿಯ ನಿರೀಕ್ಷೆಯಲ್ಲಿದ್ದ ಅಕ್ಷೋಭ್ಯರಿಗೂ ಯೋಗ್ಯವ್ಯಕ್ತಿ ಸಿಗುವ ಸೂಚನೆ ದೊರಕಿತ್ತು. ಆದರೆ, 'ಇವನಿಗೆ ಶಿರೋಮುಂಡನ ಮಾಡಿ ಸನ್ಯಾಸ ಕೊಟ್ಟರೆ ಮಾಂಡಲೀಕ ಅಪ್ಪ ಸುಮ್ಮನಿರುವನೇ?' ಎಂದುಕೊಂಡರು ಶ್ರೀಗಳು. ಆದರೆ ಯುವಕ ಆಗ್ರಹಿಸಿ ಇದು ತನ್ನ ಸ್ವಂತ ಜವಾಬ್ದಾರಿ ಎಂದಾಗ ಶ್ರೀಗಳು ಸನ್ಯಾಸವನ್ನು ಕೊಡಲೇಬೇಕಾಯಿತು. ಸುದ್ದಿ ಕೇಳಿದ ತಂದೆ, ಅಕ್ಷೋಭ್ಯರು ತನ್ನ ಮಗನ ಗೃಹಸ್ಥ ಧರ್ಮ, ಅಧಿಕಾರವನ್ನು ಕಸಿದುಕೊಂಡರೆಂದು ಕೋಪದಲ್ಲಿ ಹರಿಹಾಯ್ದ. ಮರುಮಾತಾಡದ ಅಕ್ಷೋಭ್ಯರು ರಘುನಾಥನನ್ನು ತಂದೆಯೊಂದಿಗೆ ಕಳಿಸಿಕೊಟ್ಟರು. ಮಗನು ತನ್ನ ಹೆಂಡತಿಯೊಂದಿಗೆ ಸೇರಿದರೆ ಸನ್ಯಾಸತ್ವದ ಬಯಕೆ ದೂರವಾದೀತೆಂದು ನಿಶ್ಚಯಿಸಿದ ತಂದೆ 'ಮೊದಲರಾತ್ರಿ'ಯ ಸಿದ್ಧತೆ ಮಾಡಿಬಿಟ್ಟ! ಆದರೆ ನವವಧುವು ಶಯ್ಯಾಗೃಹವನ್ನು ಪ್ರವೇಶಿಸಿದಾಗ ಪತಿಯ ಬದಲಿಗೆ ಕಂಡಿದ್ದು ತೇಜೋಪುಂಜದ ಶೇಷ! ಅವಳಿಗೆ ಗಂಡನನ್ನು ಸಮೀಪಿಸಲು ಆಗದೆ, ಭಯದಿಂದ ಚೀರಿ ಹೊರಗೆ ಓಡಿಬಂದಳು. ತನ್ನ ಮಗ ಬಂದಿದ್ದು ಸಮಾಜಕ್ಕಾಗಿ, ಸಂಸಾರಕ್ಕಲ್ಲ ಎಂಬುದನ್ನರಿತ ಅಪ್ಪ, ಆತನನ್ನು ಮತ್ತೆ ಅಕ್ಷೋಭ್ಯರಲ್ಲಿಗೆ ಕರೆತಂದು ತನ್ನ ತಪ್ಪನ್ನು ಮನ್ನಿಸುವಂತೆ ಕೋರಿದ.

ರಘುನಾಥನಿಗೆ 'ಜಯತೀರ್ಥ' ಎಂಬ ಆಶ್ರಮನಾಮ ಕೊಟ್ಟ ಅಕ್ಷೋಭ್ಯರು ಅವನಿಗೆ ತಾವೇ ಪಾಠ ಹೇಳಲು ಪ್ರಾರಂಭಿಸಿದರು. ಪೂರ್ವಜನ್ಮದಲ್ಲಿ ಮಧ್ವಾಚಾರ್ಯರಿಂದ ಪಾಠ ಕೇಳಿದ್ದ ಜಯತೀರ್ಥರಿಗೆ ಶಾಸ್ತ್ರಗಳಲ್ಲಿ ಪ್ರೌಢಿಮೆ ಬರಲು ಹೆಚ್ಚು ಸಮಯ ಹಿಡಿಯಲಿಲ್ಲ. ಆದರೂ ಅಕ್ಷೋಭ್ಯರ ಪಾಠಕ್ರಮವನ್ನು ಅವರು ಗ್ರಂಥವೊಂದರಲ್ಲಿ ನೆನೆದು 'ಶುಕವತ್ ಶಿಕ್ಷಿತಸ್ಯ ಮೇ' (ಗಿಳಿಗೆ ಶಬ್ದ ಕಲಿಸುವಂತೆ) ಎಂದು ಗುರುಗಳನ್ನು ಕೊಂಡಾಡಿದ್ದಾರೆ. ಅಧ್ಯಯನ ಮುಗಿದ ನಂತರ ಕೆಲಕಾಲ ಪಂಢರಪುರ ಸಮೀಪದ ಸಂಧ್ಯಾವಳಿಯಲ್ಲಿ ತಪಸ್ಸನ್ನಾಚರಿಸಿದ ಜಯತೀರ್ಥರು ನಂತರ ಆಸೇತು ಹಿಮಾಚಲ ಪರ್ಯಂತ ಸಂಚಾರ ಕೈಗೊಂಡರು. ಪುಣ್ಯತೀರ್ಥಗಳಲ್ಲಿ ಮಿಂದು ಕ್ಷೇತ್ರ ದರ್ಶನ ಮಾಡಿದರು. ಪ್ರತಿವಾದಿಗಳನ್ನು ಎದುರಿಸಿ ಸಮರ್ಥವಾಗಿ ಮಧ್ವ ಶಾಸ್ತ್ರವನ್ನು ಮಂಡಿಸಿದರು. ಯಾತ್ರಾನಂತರ ಗುಲ್ಬರ್ಗಾ ಜಿಲ್ಲೆಯ ಯರಗೋಳ ಗ್ರಾಮದ ಬೆಟ್ಟದ ಗುಹೆಯೊಂದರಲ್ಲಿ ಆಶ್ರಯ ಪಡೆದು, ಅಲ್ಲಿನ ಏಕಾಂತವಾಸದಲ್ಲಿ ಶ್ರೀ ಮಧ್ವಾಚಾರ್ಯರ 18 ಗ್ರಂಥಗಳಿಗೆ ಅರ್ಥವಿಸ್ತಾರ ರೂಪದ ಟೀಕೆಗಳನ್ನು ರಚಿಸಿದ್ದಲ್ಲದೆ, ಮೂರು ಸ್ವತಂತ್ರ ಗ್ರಂಥಗಳನ್ನೂ ಬರೆದರು. ಈ ಪೈಕಿ 'ಶ್ರೀಮನ್ನ್ಯಾಯಸುಧಾ' ಮೇರುಕೃತಿ ಎನಿಸಿಕೊಂಡಿದೆ.

ನಾಸ್ತಿಕರು, ವೇದವಿರೋಧಿಗಳು, ವೇದವಾದಿಗಳು, ಜೈನ-ಬೌದ್ಧವಾದಿಗಳು, ಅದ್ವೈತ-ವಿಶಿಷ್ಟಾದ್ವೈತ ವಾದಿಗಳಿಂದ ಮಾತ್ರವಲ್ಲದೆ ದ್ವೈತವಾದಿಗಳಲ್ಲೇ ಭಿನ್ನಪಂಥೀಯರಿಂದ ಎಷ್ಟು ವಾದ-ಪ್ರತಿವಾದಗಳು ಅಲ್ಲಿಯವರೆಗೆ ಬಂದಿದ್ದವೋ ಅವೆಲ್ಲವನ್ನೂ ವಿಮರ್ಶಿಸಿ ಕ್ರೋಡೀಕರಿಸಿ ಉತ್ತರಿಸಿದ ಗ್ರಂಥವೇ 'ಶ್ರೀಮನ್ನ್ಯಾಯಸುಧಾ'. ಈ ಕಾರಣದಿಂದಲೇ ಇದು ಮಾಧ್ವರಿಗೆ ಒಂದು 'ನಿಧಿ' ಎನಿಸಿದೆ. 'ಸುಧಾ' ಗ್ರಂಥವನ್ನು ಅಧ್ಯಯನ ಮಾಡುವುದು, ಜಗತ್ತನ್ನೆಲ್ಲಾ ಆಳುವುದು ಎರಡೂ ಸಮಾನಶ್ರಮದ ಕೆಲಸಗಳೇ. ಮಾಧ್ವ ಪೀಠಾಧಿಪತಿಗಳ ಸಾಧನೆಯ ಮಾನದಂಡ 'ಶ್ರೀಮನ್ನ್ಯಾಯಸುಧಾ'. ಪೀಠಾಧಿಪತಿಗಳು ಎಷ್ಟು ಬಾರಿ 'ಸುಧಾಮಂಗಳ' ಮಾಡಿದ್ದಾರೆ ಎನ್ನುವ ಸಂಗತಿಯು ಈ ಗ್ರಂಥದ ಮಹತ್ವದ ದ್ಯೋತಕ. ಜಯತೀರ್ಥರಿಗಿಂತ ಮುಂಚೆ ಬಂದ ಸಾಕಷ್ಟು ಯತಿಗಳು ಟೀಕೆ ಬರೆದಿರುವುದು ಹೌದಾದರೂ, ಜಯತೀರ್ಥರ ಟೀಕೆಗಳು ಅಸಾಮಾನ್ಯ ಎನಿಸಿ ಅವರಿಗೆ 'ಟೀಕಾಚಾರ್ಯರು' ಎಂಬ ಹೆಸರನ್ನು ತಂದುಕೊಟ್ಟವು. ಜಯತೀರ್ಥರು ವೈದುಷ್ಯದ ಪರಾಕಾಷ್ಠೆ ಹೊಂದಿದ್ದರೂ, ಅಷ್ಟೇ ವಿನಯವಂತರೂ ಆಗಿದ್ದರು ಎಂಬುದನ್ನು ಮರೆಯಲಾಗದು. 'ನ್ಯಾಯಸುಧಾ ಮಂಗಳ'ದಲ್ಲಿ ಅವರು ಉಲ್ಲೇಖಿಸಿರುವ ಸಾಲುಗಳು ಇದಕ್ಕೆ ಸಾಕ್ಷಿಯಾಗಿವೆ. ಅದರ ಅರ್ಥ ಹೀಗಿದೆ: ''ನನಗೆ ವ್ಯಾಕರಣಶಾಸ್ತ್ರದ ಸಮುದ್ರದಲ್ಲಿ ಈಜಿ ಗೊತ್ತಿಲ್ಲ, ವೇದಮಂತ್ರಗಳಿಗೆ ನಿರುಕ್ತದ ಬಲದಿಂದ ಹೇಳುವ ಚಾತುರ್ಯ ಇಲ್ಲ. ನ್ಯಾಯಶಾಸ್ತ್ರದಲ್ಲೂ ಪ್ರಾಗಲ್ಭ್ಯವಿಲ್ಲ. ತಿಳಿದುಕೊಳ್ಳಬೇಕಾದ್ದನ್ನು (ದೇವರನ್ನು) ಏನೂ ತಿಳಿದುಕೊಂಡಿಲ್ಲ. (ಹಾಗಾದರೆ ನೀವು ಹೇಗೆ ನ್ಯಾಯಸುಧಾ ರಚಿಸಿದಿರಿ? ಎಂದು ಪ್ರಶ್ನಿಸಿದಾಗ) ನಮ್ಮ ಮೇಲಿರುವ ಏಕೈಕ ಶಕ್ತಿಯೆಂದರೆ ಶ್ರೀ ಮಧ್ವಾಚಾರ್ಯರ ಅನುಗ್ರಹ. ಆದ್ದರಿಂದ ನಮಗೆ ಸಮಾಜದಲ್ಲಿ ಮನ್ನಣೆ. ನಾವು ಏನು ಹೇಳಿದರೂ ಅದು ಮಾನ್ಯವಾಗುತ್ತದೆ''.

ಜಯತೀರ್ಥರು ಯರಗೋಳದಲ್ಲಿದ್ದಾಗ ಅಲ್ಲೊಂದು ಕೆರೆ ನಿರ್ಮಾಣವಾಗುತ್ತಿತ್ತು. ದುರಂತವೆಂದರೆ, ಅದರಲ್ಲಿ ತುಂಬಿದ ನೀರು ಸೋರಿಹೋಗಿ ಸಂಗ್ರಹವು ಖಾಲಿಯಾಗುತ್ತಿತ್ತು. ಊರ ಗೌಡನು ಶ್ರೀಗಳ ಮೊರೆಹೋದಾಗ, ಜಯತೀರ್ಥರು ಒಂದು ಹಿಡಿ ಮಣ್ಣುಕೊಟ್ಟು ಕೆರೆ ಜಾಗದಲ್ಲಿ ಹಾಕುವಂತೆ ಸೂಚಿಸಿದರು. ಅಂತೆಯೇ ಮಾಡಿದಾಗ, ನೀರು ಸೋರಿಹೋಗುವುದು ನಿಂತಿತು. ಈ ಕೆರೆಯನ್ನು ಮತ್ತು ಜಯತೀರ್ಥರ ಗ್ರಂಥನಿರ್ಮಾಣದ ಗುಹೆಯ ಜಾಗವನ್ನು ಈಗಲೂ ನೋಡಬಹುದು. ಸರ್ವಶಾಸ್ತ್ರಗಳಲ್ಲೂ ತಲಸ್ಪರ್ಶಿ ಪಾಂಡಿತ್ಯವಿದ್ದ ಶ್ರೀ ಜಯತೀರ್ಥರು ಪೀಠ ದಲ್ಲಿದ್ದುದು ಸರಿಸುಮಾರು 20 ವರ್ಷಗಳವರೆಗಷ್ಟೇ. ಅವರು ಶ್ರೀ ವಿದ್ಯಾಧಿ ರಾಜ ತೀರ್ಥರನ್ನು ಪೀಠದಲ್ಲಿ ಕುಳ್ಳಿರಿಸಿ ಮಳಖೇಡದಲ್ಲಿ 1388ರಲ್ಲಿ ವೃಂದಾವನಸ್ಥರಾದರು. ಶ್ರೀ ಜಯತೀರ್ಥರ ಈ ಪುಣ್ಯದಿನದಂದು, ಅವರು ಬಿಟ್ಟುಹೋಗಿರುವ ಜ್ಞಾನ ಪರಂಪರೆಯನ್ನು ಯಥಾಶಕ್ತಿ ಅಧ್ಯಯನ ಮಾಡಿ, ಉಳಿಸಿ-ಬೆಳೆಸುವ ಸಂಕಲ್ಪ ತೊಡುವುದೇ ನಾವು ಅವರಿಗೆ ಸಲ್ಲಿಸಬಹುದಾದ ಗೌರವ.

(ಲೇಖಕರು ಹವ್ಯಾಸಿ ಬರಹಗಾರರು)

ಬದಲಾಗುವುದೇ ಮಹಾರಾಷ್ಟ್ರದ ರಾಜಕೀಯ ಸಮೀಕರಣ?

ರಾಜಬೀದಿ

ವಿನಾಯಕ ಮಠಪತಿ
vveditoped@gmail.com

ಚಿಕ್ಕಪ್ಪನ ಪುತ್ರಪ್ರೇಮಕ್ಕೆ ನೊಂದು ಶಿವಸೇನೆಯಿಂದ ಹೊರಬಂದಿದ್ದಾಗಿತ್ತು. ಅಪ್ಪಟ ಹಿಂದುತ್ವವಾದಿ ನಾಯಕ ತಿರುಗಿ ನೋಡುವಷ್ಟರಲ್ಲಿ ಮಹಾರಾಷ್ಟ್ರ ನವನಿರ್ಮಾಣ ಸೇನೆ ಹೆಸರಿನ ಪಕ್ಷ ಉದಯವಾಗಿತ್ತು. 'ಗುಡಿಯೊಳಗಿನ ದೇವರು ಬೇಕು, ಆದರೆ ಹೊರಗಿರುವ ಪೂಜಾರಿ ಬೇಡ' ಎಂಬ ಅಚಲ ನಿರ್ಧಾರಕ್ಕೆ ಬದ್ಧರಾಗಿದ್ದ ಇವರು ಕಳೆದ 20 ವರ್ಷಗಳಿಂದ ತಮ್ಮದೇ ಹಾದಿಯಲ್ಲಿ ಸಾಗಿಯಾಗಿತ್ತು. ಯಾವತ್ತೂ ತಮ್ಮ ಮರಾಠಿ ಅಸ್ಮಿತೆಯಿಂದ ಹೊರ ಬರದೆ ಈ ವ್ಯಕ್ತಿ ಮತ್ತೆ ರಕ್ತಸಂಬಂಧಗಳಿಗೆ ತಲೆಬಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಮತ್ತೊಮ್ಮೆ ಶಿವಸೇನೆಯ ಎರಡು ಮುಖಗಳು ಒಟ್ಟಿಗೆ ಸೇರಿವೆ.

ಹೌದು, ಇಷ್ಟೆಲ್ಲ ಪೀಠಿಕೆ ಹಾಕಿದ್ದು ಮಹಾರಾಷ್ಟ್ರದ ಸದ್ಯದ ಬೆಳವಣಿಗೆಯ ಕುರಿತು. ಕಳೆದ ಎರಡು ದಶಕಗಳಿಂದ ದೂರವಾಗಿದ್ದ ಸಹೋದರರು ಒಂದಾಗಲು ದೇವೇಂದ್ರ ಫಡ್ನವಿಸ್‌ರವರ ಸರಕಾರ ಕ್ಷಣಕಾಲ ಒಂದು ಅದ್ಭುತ ಅವಕಾಶ ಒದಗಿಸಿಕೊಟ್ಟಂತಿತ್ತು. ಮಹಾರಾಷ್ಟ್ರದಲ್ಲಿ ತ್ರಿಭಾಷಾ ಸೂತ್ರದ ಅಡಿಯಲ್ಲಿ ಒಂದರಿಂದ ಐದನೇ ತರಗತಿ ವಿದ್ಯಾರ್ಥಿಗಳಿಗೆ ತೃತೀಯ ಭಾಷೆಯಾಗಿ ಹಿಂದಿಯನ್ನು ಜಾರಿಗೊಳಿಸಲು ಮಹಾಯುತಿ ಮೈತ್ರಿಕೂಟ ಸರಕಾರ ನಿರ್ಧರಿಸಿತ್ತು. ಇದಕ್ಕೆ ಶಿವಸೇನೆ, ಎನ್‌ಸಿಪಿ ಸೇರಿದಂತೆ ಮಹಾರಾಷ್ಟ್ರದ ಪ್ರಾದೇಶಿಕ ಪಕ್ಷಗಳು ತೀವ್ರ ವಿರೋಧ ಮಾಡಿದ್ದು ಮಾತ್ರವಲ್ಲದೆ ಸ್ವತಃ ಉದ್ಧವ್ ಹಾಗೂ ರಾಜ್ ಠಾಕ್ರೆ ಸೇರಿ ಸರಕಾರದ ನೀತಿ ವಿರೋಧಿಸಿ ಬೃಹತ್ ರ್ಯಾಲಿ ಮಾಡುವುದಾಗಿ ಘೋಷಿಸುವಂತಾಯಿತು. ಇದರಿಂದ ಮುಂದಾಗುವ ಪರಿಣಾಮ ಅರಿತ ಸಿಎಂ ಫಡ್ನವಿಸ್ ತಮ್ಮ ನಿರ್ಧಾರದಿಂದ ಹಿಂದೆ ಸರಿದರು. ಇದೇ ಕಾರಣಕ್ಕೆ ವಿಜಯೋತ್ಸವ ಆಚರಣೆಗೆ ಠಾಕ್ರೆ ಕುಡಿಗಳು ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಅವಕಾಶ ಬಂದೊದಗಿತು.

ಹಿಂದೂ ಹೃದಯಸಾಮ್ರಾಟ್ ಬಾಳಾಸಾಹೇಬ್ ಠಾಕ್ರೆಯ ಬಲಗೈನಂತಿದ್ದ ರಾಜ್ ಠಾಕ್ರೆ, ಚಿಕ್ಕಪ್ಪನಂತೆ ಖಡಕ್ ಶೈಲಿಯ ಭಾಷಣದ ಮೂಲಕ ಶಿವಸೈನಿಕರಿಗೆ ನೆಚ್ಚಿನ ನಾಯಕರಾಗಿದ್ದರು. ಆದರೆ ಪುತ್ರಪ್ರೇಮವೆಂಬುದು ಬಾಳ್ ಠಾಕ್ರೆ ಅವರನ್ನೂ ಬಿಡಲಿಲ್ಲ. 2003ರಲ್ಲಿ ತಮ್ಮ ಪುತ್ರ ಉದ್ಧವ್‌ರನ್ನು ಶಿವಸೇನೆ ಪಕ್ಷದ ಕಾರ್ಯಾಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿದರು. ನಂತರ 2006ರಲ್ಲಿ, ಶಿವಸೇನೆಯ ಮುಖವಾಣಿ 'ಸಾಮ್ನಾ' ಪತ್ರಿಕೆ ಸಂಪಾದಕರಾಗಿಯೂ ಉದ್ಧವ್ ನೇಮಕಗೊಂಡರು. ಇವೆಲ್ಲದರಿಂದ ಬೇಸರಿಸಿಕೊಂಡ ರಾಜ್ ಠಾಕ್ರೆ ಶಿವಸೇನೆಯಿಂದ ಹೊರಬಂದು 2006ರಲ್ಲಿ ಮರಾಠಿ ಅಸ್ಮಿತೆ ಪ್ರತಿಪಾದಿಸುವ ಮಹಾರಾಷ್ಟ್ರ ನವನಿರ್ಮಾಣ ಸೇನೆ ಕಟ್ಟುವ ಮೂಲಕ ಬಾಳ್ ಠಾಕ್ರೆಯವರ ಜೀವಿತಾವಧಿಯಲ್ಲೇ ಶಿವಸೇನೆಯನ್ನು ತೊರೆದರು.

ಸ್ವಂತ ಪಕ್ಷ ಸ್ಥಾಪನೆ ನಂತರದಲ್ಲಿ ರಾಜ್ ಠಾಕ್ರೆ, ಅಷ್ಟೇನೂ ಯಶಸ್ಸನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಆದರೆ ಸಹೋದರ ಉದ್ಧವ್ ಠಾಕ್ರೆಯವರ ಶಿವಸೇನೆಗೆ ಯಾವತ್ತೂ ಮಗ್ಗುಲುಮುಳ್ಳಾಗಿದ್ದಂತೂ ಸತ್ಯ. ಸುದೀರ್ಘ ಎರಡು ದಶಕಗಳ ನಂತರದಲ್ಲಿ ಮತ್ತೆ ಮಹಾರಾಷ್ಟ್ರದಲ್ಲಿ ಠಾಕ್ರೆ ಮನೆತನದ ಕುಡಿಗಳು ಒಂದಾಗಿವೆ. ಆದರೆ ಇವರಿಬ್ಬರ ಒಗ್ಗಟ್ಟಿನಿಂದ ಮಹಾರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಬದಲಾವಣೆ ಆಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಐತಿಹಾಸಿಕ ಗೆಲುವು ದಾಖಲಿಸಿ ಅಧಿಕಾರದಲ್ಲಿದೆ. ಇತ್ತ ಕಾಂಗ್ರೆಸ್ ಹಾಗೂ ಶರದ್ ಪವಾರ್ ಪಕ್ಷವೂ ಸುಸ್ಥಿತಿಯಲ್ಲಿದೆ. ಇವೆಲ್ಲದರ ನಡುವೆ ಸಹೋದರರ ಒಗ್ಗಟ್ಟು ರಾಜಕೀಯವಾಗಿ ಎಷ್ಟು ಲಾಭ ತರಲಿದೆ ಎಂಬುದನ್ನು ಈಗಲೇ ಊಹಿಸಲು ಅಸಾಧ್ಯ.

ಶಿವಸೇನೆಯ ಉದ್ಧವ್ ಠಾಕ್ರೆ ಹಾಗೂ ಮಹಾರಾಷ್ಟ್ರ ನವನಿರ್ಮಾಣ ಸೇನೆಯ ರಾಜ್ ಠಾಕ್ರೆ, ಒಟ್ಟಾಗಿರುವುದು ಮುಂಬರುವ ಮುಂಬೈ ಮಹಾನಗರಪಾಲಿಕೆ ಚುನಾವಣೆಯಲ್ಲಿ ಸಾಕಷ್ಟು ಪರಿಣಾಮ ಬೀರಬಹುದು. ಆದರೆ ಶಿವಸೇನೆಯ ಏಕನಾಥ ಶಿಂಧೆ ಬಣ ಹಾಗೂ ಆಡಳಿತಾರೂಢ ಬಿಜೆಪಿ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್‌ರವರ ಶಕ್ತಿಯನ್ನು ಅಷ್ಟು ಸುಲಭಕ್ಕೆ ಕುಂಠಿತಗೊಳಿಸುವುದು ಕಷ್ಟಸಾಧ್ಯ. 227 ಸದಸ್ಯಬಲದ ಮುಂಬೈ ಮಹಾನಗರ ಪಾಲಿಕೆ ದೇಶದಲ್ಲೇ ಅತ್ಯಂತ ಶ್ರೀಮಂತ ಪಾಲಿಕೆಯಾಗಿದೆ. ಇದರ ಆಡಳಿತ ಚುಕ್ಕಾಣಿ ಹಿಡಿಯಲು ರಾಜಕೀಯ ಪಕ್ಷಗಳು ಹೆಣಗಾಡುತ್ತವೆ. ಸದ್ಯ ಮುಂಬೈ ನಗರ ಭಾಗದಲ್ಲಿ ಹಿಡಿತ ಹೊಂದಿರುವ ಠಾಕ್ರೆ ಕುಟುಂಬಕ್ಕೆ ಉದ್ಧವ್ ಹಾಗೂ ರಾಜ್ ಠಾಕ್ರೆ, ಒಟ್ಟಾಗಿರುವುದು ಕೊಂಚ ಲಾಭ ನೀಡುವ ಸಾಧ್ಯತೆ ಇದೆ. ಈ ಹೋರಾಟವು ಬಿಜೆಪಿ ನೇತೃತ್ವದ ಮಹಾಯುತಿ ಒಕ್ಕೂಟವನ್ನು ಸಂಕಷ್ಟಕ್ಕೆ ಸಿಲುಕಿಸಬಹುದು. ಈ ಮೂಲಕ ಇಬ್ಬರು ನಾಯಕರು ಅಧಿಕಾರಕ್ಕೆ ಹತ್ತಿರ ಬರಬಹುದಾಗಿದೆ.

ದೇವೇಂದ್ರ ಫಡ್ನವಿಸ್ ಚಾಣಾಕ್ಷ ನಡೆ

ಮಹಾರಾಷ್ಟ್ರದಲ್ಲಿ ಒಂದನೇ ತರಗತಿಯಿಂದ ತೃತೀಯ ಭಾಷೆಯಾಗಿ ಹಿಂದಿಯನ್ನು ಕಡ್ಡಾಯಗೊಳಿಸುವ ನಿರ್ಧಾರಕ್ಕೆ ಮಹಾರಾಷ್ಟ್ರ ಸರಕಾರ ಬಂದಿದ್ದನ್ನು ನೆಪವಾಗಿಸಿಕೊಂಡ ಶಿವಸೇನೆ ಹಾಗೂ ಎಮ್‌ಎನ್‌ಎಸ್ ನಾಯಕರು ಸರಕಾರದ ವಿರುದ್ಧ ಮುಗಿಬೀಳಲು ಸಿದ್ಧರಾಗಿದ್ದರು. ದಶಕಗಳ ನಂತರ ಉದ್ಧವ್ ಹಾಗೂ ರಾಜ್ ಠಾಕ್ರೆ ಜಂಟಿಯಾಗಿ ಹೋರಾಟ ಕೈಗೊಳ್ಳುವ ಎಚ್ಚರಿಕೆ ನೀಡಿದರು. ಇದರ ಸೂಕ್ಷ್ಮತೆ ಅರಿತ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್ ವಿವಾದಿತ ಕಾನೂನನ್ನು ವಾಪಸ್ ಪಡೆದುಕೊಂಡರು. ಗಡಿ, ಭಾಷೆಯಂಥ ಸೂಕ್ಷ್ಮ ವಿಷಯಗಳನ್ನು ಹಿಡಿದುಕೊಂಡು ವಿಪಕ್ಷಗಳು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಸಜ್ಜಾಗುತ್ತಿದ್ದಂತೆ ಸಿಎಂ ಫಡ್ನವಿಸ್ ವಿರೋಧಿಗಳಿಗೆ ಶಾಕ್ ನೀಡಿದರು.

ಹಾಗೆ ನೋಡಿದರೆ, ಉದ್ಧವ್ ಹಾಗೂ ರಾಜ್ ಠಾಕ್ರೆ ಸಹೋದರರು ರಾಜಕೀಯವಾಗಿ ಏನಾದರೂ ಪಡೆಯಬೇಕೆಂದರೆ ಬಿಜೆಪಿ ಹಾಗೂ ಏಕನಾಥ ಶಿಂಧೆ ಬಣದ ವಿರುದ್ಧವೇ ಹೋರಾಟ ಮಾಡಬೇಕು. ಇದೇ ಕಾರಣಕ್ಕೆ ಎಂಬಂತೆ ವಿಜಯೋತ್ಸವ ಸಮಾವೇಶದಲ್ಲಿ ಮಾತನಾಡಿದ ಉದ್ಧವ್ ಠಾಕ್ರೆ ಮುಂಬರುವ ರಾಜಕೀಯ ಸ್ಥಾನಮಾನದ ಕುರಿತು ಸಾಕಷ್ಟು ಒತ್ತು ನೀಡಿದ್ದರು. ಈ ವೇಳೆ ರಾಜ್ ಠಾಕ್ರೆ ಕೂಡ,

'ನಮ್ಮಿಬ್ಬರನ್ನು ಒಂದಾಗಿಸಲು ಸ್ವತಃ ಬಾಳ್ ಠಾಕ್ರೆಗೆ ಸಾಧ್ಯವಾಗಿರಲಿಲ್ಲ. ಆ ಕೆಲಸವನ್ನು ದೇವೇಂದ್ರ ಫಡ್ನವಿಸ್ ಮಾಡಿದ್ದಾರೆ' ಎಂದು ಹೇಳಿದ್ದರು. ಇದಕ್ಕೆ ಪ್ರತ್ಯುತ್ತರ ನೀಡಿದ್ದ ಫಡ್ನವಿಸ್, 'ಬಾಳಾಸಾಹೇಬ್ ಠಾಕ್ರೆ ನನಗೆ ಆಶೀರ್ವದಿಸಿರಬಹುದು' ಎಂದು ಹೇಳುವ ಮೂಲಕ ಠಾಕ್ರೆ ಸಹೋದರರ ಕುರಿತು ವ್ಯಂಗ್ಯವಾಡಿದ್ದಾರೆ.

ರಾಷ್ಟ್ರೀಯತೆ ಹಾಗೂ ಸ್ಥಳೀಯ ಮರಾಠಿಗರ ಅಸ್ಮಿತೆಯನ್ನು ಸದಾಕಾಲವೂ ಗೌರವಿಸಿಕೊಂಡು ಸಾಗುತ್ತಿರುವ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರಿಗೆ ಸದ್ಯ ಠಾಕ್ರೆ ಸಹೋದರರು ಒಡ್ಡುವ ಸವಾಲುಗಳನ್ನು ಎದುರಿಸುವ ಶಕ್ತಿ ಇದೆ. ಆದರೆ ರಾಜ್ ಠಾಕ್ರೆಯವರ ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಕಾರ್ಯಕರ್ತರು ಇತ್ತೀಚಿನ ದಿನಗಳಲ್ಲಿ ಮರಾಠಿ ಭಾಷೆ ವಿಷಯಕ್ಕೆ ಹಿಂದಿ ಭಾಷಿಕರ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು ತಡೆಗಟ್ಟುವ ಸವಾಲು ಸರಕಾರಕ್ಕಿದೆ. ಭಾಷೆಯ ವಿಚಾರವೇ ಶಿವಸೇನೆ ಹಾಗೂ ಎಮ್‌ಎನ್‌ಎಸ್ ಪಕ್ಷದ ಪ್ರಮುಖ ಅಸ್ತ್ರವಾಗಿರುವಾಗ ಇದೆಲ್ಲವನ್ನೂ ಮೆಟ್ಟಿನಿಲ್ಲುವ ಧೈರ್ಯವನ್ನು ಫಡ್ನವಿಸ್ ತೋರಬೇಕಷ್ಟೇ.

ಭಾಷೆ ವಿಚಾರವಾಗಿ ಎಚ್ಚೆತ್ತರೆ ಒಳಿತು

ಮಹಾರಾಷ್ಟ್ರದಲ್ಲಿ ಹಿಂದಿಯನ್ನು ಕಡ್ಡಾಯ ತೃತೀಯ ಭಾಷೆಯಾಗಿ ಜಾರಿಗೆ ತರಲು ಹೊರಟಿದ್ದ ರಾಜ್ಯ ಸರಕಾರದ ನಡೆಯ ವಿರುದ್ಧ ಹೊತ್ತಿಕೊಂಡ ಬೆಂಕಿ ಇಡೀ ರಾಜಕೀಯ ಸಮೀಕರಣವನ್ನೇ ಬುಡಮೇಲು ಮಾಡಿದೆ. ಮಹಾರಾಷ್ಟ್ರದಲ್ಲಿ ಭಾಷೆ ವಿಚಾರವಾಗಿ ಅಲ್ಲಿನ ರಾಜಕೀಯ ಪಕ್ಷಗಳು ಹಾಗೂ ಮುಖಂಡರು ತೆಗೆದುಕೊಳ್ಳುವ ನಿರ್ಧಾರಗಳು ನಮ್ಮ ರಾಜ್ಯದಲ್ಲಿ ಏಕೆ ಸಾಧ್ಯವಿಲ್ಲ ಎಂಬುದು ಯಕ್ಷಪ್ರಶ್ನೆ. ಚುನಾವಣೆ ಸಂದರ್ಭ ಇರಲಿ, ಇಲ್ಲದಿರಲಿ ಮಹಾರಾಷ್ಟ್ರದ ರಾಜಕಾರಣಿಗಳು ಗಡಿಯಲ್ಲಿ ಮರಾಠಿ ಅಸ್ಮಿತೆ ಕುರಿತು ತಗಾದೆ ಎತ್ತುತ್ತಾರೆ. ಅದನ್ನು 'ರಾಜಕೀಯ ಚರ್ಚಾವಿಷಯ'ವಾಗಿ ಇಟ್ಟುಕೊಳ್ಳುವ ಮೂಲಕ ಸಮಸ್ಯೆಯನ್ನು ಎತ್ತಿ ತೋರಿಸುವ ಪ್ರಯತ್ನ ಸದಾಕಾಲವೂ ನಡೆದಿರುತ್ತದೆ.

ನಮ್ಮ ರಾಜ್ಯದ ರಾಜಕಾರಣದಲ್ಲಿ ಭಾಷೆ ಹಾಗೂ ಗಡಿ ಸಮಸ್ಯೆಗಳು ರಾಜಕೀಯ ಚರ್ಚಾವಿಷಯವಾಗುವುದೇ ಇಲ್ಲ. ಎಷ್ಟು ಜನ ರಾಜಕಾರಣಿಗಳು ಭಾಷೆ, ಗಡಿ ಭಾಗದ ಸಮಸ್ಯೆ ವಿಚಾರವಾಗಿ ಮಹಾರಾಷ್ಟ್ರದ ರಾಜಕಾರಣಿಗಳ ರೀತಿಯಲ್ಲಿ ವಿರೋಧ ಮಾಡುತ್ತಾರೆ. ಅಷ್ಟೇ ಅಲ್ಲದೆ ಹಿಂದಿ ಹೇರಿಕೆ ವಿಚಾರವಾಗಿಯೂ ಈವರೆಗೂ ನಮ್ಮಲ್ಲಿ ಒಗ್ಗಟ್ಟಿನ ವಿರೋಧ ಕಾಣಸಿಗುತ್ತಿಲ್ಲ. ಇದರಿಂದ ಅನಿವಾರ್ಯವಾಗಿ ವಿದ್ಯಾರ್ಥಿಗಳು ಕಡ್ಡಾಯ ತೃತೀಯ ಭಾಷಾ ಶಿಕ್ಷೆಯನ್ನು ಅನುಭವಿಸುವಂತಾಗಿದೆ. ಇದೇ ವಿಚಾರವಾಗಿ ತಮಿಳುನಾಡಿನಲ್ಲಿ ರಾಜಕೀಯ ನಾಯಕರು ಹಿಂದಿ ಹೇರಿಕೆ ವಿರೋಧಿಸಿ ನಿರಂತರ ಹೋರಾಟ ಮುಂದುವರಿಸಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ಒಕ್ಕೊರಲಿನ ವಿರೋಧ ವ್ಯಕ್ತವಾಗದಿರುವುದು ವಿಪರ್ಯಾಸ.

ಹಿಂದಿ ಹೇರಿಕೆ ವಿರೋಧಿ ಹೋರಾಟಕ್ಕೆ ದಶಕಗಳ ಇತಿಹಾಸ ಇದೆ. 1937ರಲ್ಲಿ ತಮಿಳುನಾಡಿನಲ್ಲಿ ಇಂಥ ಮೊದಲ ಹೋರಾಟ ನಡೆಯಿತು. ಪೆರಿಯಾರ್ ಸೇರಿದಂತೆ ಅನೇಕರು ಈ ಹೋರಾಟದ ಭಾಗವಾಗಿದ್ದರು. ಅಂದಿನಿಂದ ಈವರೆಗೂ ನಿರಂತರವಾಗಿ ಹಿಂದಿ ಹೇರಿಕೆ ವಿರೋಧಿ ಹೋರಾಟಗಳು ನಡೆಯುತ್ತಿವೆ. ಹಿಂದಿ ಕಲಿಕೆಯು ವಿದ್ಯಾರ್ಥಿಗಳ ಆಯ್ಕೆ ಆಗಬೇಕೇ ಹೊರತು ಕಡ್ಡಾಯವಾಗಬಾರದು. ಈ ಕುರಿತು ರಾಜ್ಯ ಸರಕಾರಗಳು ಕೇಂದ್ರದ ಗಮನಸೆಳೆದು ಸ್ಥಳೀಯ ಭಾಷೆಯನ್ನು ಉಳಿಸಿ ಬೆಳೆಸಲು ಸಹಕಾರ ಕೊಡುವಂತೆ ಕೇಳಬೇಕು. ಇಲ್ಲವಾದರೆ ವೈವಿಧ್ಯಮಯ ದೇಶವಾದ ಭಾರತವು, ಭಾರತವಾಗಿರಲು ಸಾಧ್ಯವಾಗುವುದಿಲ್ಲ.

(ಲೇಖಕರು ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:182

ಸಮಾಚಾರ ಸಣ್ಣದಲ್ಲ

ಲಾರಿ ಪಲ್ಟಿ: 9 ಸಾವು

ಅಮರಾವತಿ: ಮಾವಿನ ಹಣ್ಣುಗಳನ್ನು ತುಂಬಿದ್ದ ಟ್ರಕ್ ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಪಲ್ಟಿಯಾಗಿ ಒಂಬತ್ತು ಕಾರ್ಮಿಕರು ಸಾವನ್ನಪ್ಪಿದ್ದಾರೆ. 10 ಮಂದಿ ಗಾಯಗೊಂಡಿದ್ದಾರೆ. ಮೃತರಲ್ಲಿ ಐವರು ಮಹಿಳೆಯರು ಸೇರಿದ್ದಾರೆ. ಕಡಪ ಪಟ್ಟಣದಿಂದ 60 ಕಿ.ಮೀ ದೂರದ ಪುಲ್ಲಂಪೇಟೆ ಮಂಡಲದ ರೆಡ್ಡಿ ಚೆರುವು ಕಟ್ಟಾದಲ್ಲಿ ಅಪಘಾತವಾಗಿದೆ. ಎದುರುಗಡೆಯಿಂದ ಬರುತ್ತಿದ್ದ ಕಾರಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಹೋದಾಗ ಲಾರಿ ಚಾಲಕನ ನಿಯಂತ್ರಣ ತಪ್ಪಿದೆ. ಮಾವಿನ ಲೋಡಿನ ಮೇಲೆ ಕುಳಿತಿದ್ದ ಕಾರ್ಮಿಕರು ಲಾರಿ ಉರುಳಿ ತಲೆ ಕೆಳಗಾಗಿ ಬೀಳುತ್ತಿದ್ದಂತೆಯೇ ಸರಕಿನಡಿ ಸಿಲುಕಿ ಉಸಿರುಗಟ್ಟಿ ಸಾವಿಗೀಡಾಗಿದ್ದಾರೆ. ಗಾಯಾಳುಗಳನ್ನು ರಾಜಂಪೇಟೆ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ಸೋಮವಾರ ಮಾಹಿತಿ ನೀಡಿದ್ದಾರೆ.

ಸೋಂಕು: ಸಿಜೆಐ ಗವಾಯಿ ಆಸ್ಪತ್ರೆಗೆ

ದೆಹಲಿ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ತೀವ್ರ ಸೋಂಕಿಗೆ ತುತ್ತಾಗಿದ್ದರಿಂದ ಅವರನ್ನು ಸೋಮವಾರ ದೆಹಲಿಯ ಆಸ್ಪತ್ರೆಗೆ ದಾಖಲಿಸ ಲಾಗಿದೆ. ಜುಲೈ 12ರಂದು ತೆಲಂಗಾಣ ರಾಜಧಾನಿ ಹೈದರಾಬಾದ್‌ನಲ್ಲಿನ ಕಾನೂನು ವಿವಿ ಘಟಿಕೋತ್ಸವಕ್ಕೆ ತೆರಳಿದ್ದಾಗ ಗವಾಯಿ

ಅವರ ದೇಹದಲ್ಲಿ ಸೋಂಕಿನ ಸಮಸ್ಯೆ ಇರುವುದು ಕಂಡುಬಂದಿತ್ತು. ದೆಹಲಿಗೆ ಮರಳಿದ ಬಳಿಕ ಸೋಂಕಿನ ಸಮಸ್ಯೆ ತೀವ್ರಗೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾ ಯಿತು. ಸದ್ಯ ಚಿಕಿತ್ಸೆ ನಡೆದಿದ್ದು, ಸಿಜೆಐ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಹಾಗಾಗಿ, ಒಂದೆರಡು ದಿನಗಳಲ್ಲಿ ಅವರು ಚೇತರಿಸಿಕೊಳ್ಳಲಿದ್ದಾರೆ. ಬಳಿಕ ಡಿಸ್ಚಾರ್ಜ್ ಮಾಡಲಾಗುವುದು ಎಂದು ಆಸ್ಪತ್ರೆ ಮೂಲಗಳು ಸೋಮವಾರ ತಿಳಿಸಿವೆ. ಆ ಬಳಿಕ ಮುಖ್ಯ ನ್ಯಾಯಮೂರ್ತಿಗಳು ಸುಪ್ರೀಂ ಕೋರ್ಟ್‌ನ ದಿನದ ಕಲಾಪಗಳಲ್ಲಿ ಹಾಜರಾಗುವ ನಿರೀಕ್ಷೆಯಿದೆ ಎಂದು ತಿಳಿಸಲಾಗಿದೆ.

ಮಧ್ಯಾಹ್ನ 2.25ಕ್ಕೆ ಡ್ರ್ಯಾಗನ್ ಕ್ಯಾಪ್ಸೂಲ್ ಒಳಕ್ಕೆ ಸೇರಿದ 4 ಗಗನಯಾತ್ರಿಗಳು | ಸ್ಪೇಸ್‌ಎಕ್ಸ್ ಕ್ಯಾಪ್ಸೂಲ್ 'ಡ್ರ್ಯಾಗನ್' ಸೋಮವಾರ ಮಧ್ಯಾಹ್ನ 2.37ಕ್ಕೆ ಸಿದ್ಧ | ಐಎಸ್‌ಎಸ್‌ನಿಂದ ಸಂಜೆ 4.35ಕ್ಕೆ ಹೊರಟು ಭೂಮಿಯತ್ತ ಮರು ಪಯಣ | ಇಂದು ಮಧ್ಯಾಹ್ನ 3ಕ್ಕೆ ಲ್ಯಾಂಡಿಂಗ್

ಗಗನದಿಂದ ಧರೆಯತ್ತ ಶುಭಾಂಶು ಶುಕ್ಲಾ ಮರು ಪಯಣ

ದೆಹಲಿ: ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿ ಭಾರತದ 'ಮಾನವ ಸಹಿತ ಗಗನಯಾನ' ಕನಸಿಗೆ ಶಕ್ತಿ ತುಂಬಿರುವ ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್, ಆಕ್ಸಿಯಮ್-4 ಮಿಷನ್ ಪೈಲಟ್ ಶುಭಾಂಶು ಶುಕ್ಲಾ, 18 ದಿನಗಳ ಕಾಲದ ಅಂತರಿಕ್ಷ ವಾಸದ ಅನುಭವದೊಂದಿಗೆ ಮಂಗಳವಾರ ಮಧ್ಯಾಹ್ನ ಧರೆಗೆ ಮರಳುತ್ತಿದ್ದಾರೆ.

ಭಾರತೀಯ ಕಾಲಮಾನ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಶುಭಾಂಶು ಶುಕ್ಲಾ ಸೇರಿದಂತೆ ನಾಲ್ವರು ಗಗನಯಾತ್ರಿಗಳು ಅಮೆರಿಕದ ಕ್ಯಾಲಿಫೋರ್ನಿಯಾ ಕರಾವಳಿಯಲ್ಲಿ ಬಂದಿಳಿಯಲಿದ್ದಾರೆ. ನಾಲ್ವರೂ ಗಗನಯಾತ್ರಿಗಳನ್ನು ತನ್ನ ಒಡಲಲ್ಲಿ ಭದ್ರವಾಗಿಟ್ಟುಕೊಂಡು 'ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ'(ಐಎಸ್‌ಎಸ್)ದಿಂದ ಹೊರಟಿರುವ ಸ್ಪೇಸ್ ಎಕ್ಸ್ ಕಂಪನಿಯ ವಿಶಿಷ್ಟ 'ಡ್ರ್ಯಾಗನ್' ಕ್ಯಾಪ್ಸೂಲ್, ಕ್ಯಾಲಿಫೋನಿಯಾ ಬಳಿಯ ಕಡಲಿನಲ್ಲಿ ಸ್ಪ್ಲಾಷ್ ಲ್ಯಾಂಡ್ ಆಗಲಿದೆ.

ಅಮೆರಿಕದ ಖಾಸಗಿ ಗಗನಯಾನ ಕಂಪನಿಯ 'ಆಕ್ಸಿಯಂ-4' ಮಿಷನ್ ಭಾಗವಾಗಿ ಅಮೆರಿಕದ ನಾಸಾದ ಗಗನಯಾನಿ ಕಮಾಂಡರ್ ಪೆಗ್ಗಿ ವಿಟ್ಸನ್ ಮತ್ತು ಮಿಷನ್ ತಜ್ಞ ಪೋಲೆಂಡ್ ದೇಶದ ಸ್ಲಾವೋಸ್ಜ್ ಉಜ್‌ನ್ಯಾನ್‌ಸ್ಕಿ ವಿಸ್‌ನಿವ್‌ಸ್ಕಿ ಹಾಗೂ ಹಂಗೇರಿಯ ಟಿಬೋರ್ ಕಾಪು ಜತೆಗೂಡಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ತೆರಳಿದ್ದ ಭಾರತೀಯ ಗಗನಯಾನಿ ಶುಭಾಂಶು ಶುಕ್ಲ, ಸೋಮವಾರ ಮಧ್ಯಾಹ್ನ 2.25ಕ್ಕೆ 'ಡ್ರ್ಯಾಗನ್' ಕ್ಯಾಪ್ಸೂಲ್ ಪ್ರವೇಶಿಸಿದರು. ಬಳಿಕ ಡ್ರ್ಯಾಗನ್ ಗ್ರೇಸ್ ಬಾಹ್ಯಾಕಾಶ ನೌಕೆಯ 'ಹ್ಯಾಚ್'(ಬಾಗಿಲು) ಮಧ್ಯಾಹ್ನ 2.37ಕ್ಕೆ ಮುಚ್ಚಲಾಯಿತು. ನಂತರ 2 ಗಂಟೆಗಳ ಕಾಲ ಸುರಕ್ಷತಾ ಕ್ರಮಗಳ ತಪಾಸಣೆ ನಡೆಸಿದ ಬಳಿಕ ಸಂಜೆ 4.45ಕ್ಕೆ ಸರಿಯಾಗಿ(ನಿಗದಿಗಿಂತ 10 ನಿಮಿಷ ತಡ) ಡ್ರ್ಯಾಗನ್ ಕ್ಯಾಪ್ಸೂಲ್ ಐಎಸ್‌ಎಸ್‌ನ ಜೋಡಣೆಯಿಂದ ಯಶಸ್ವಿಯಾಗಿ 'ಅನ್‌ಲಾಕ್' ಅಥವಾ 'ಅನ್ ಡಾಕಿಂಗ್' ಪ್ರಕ್ರಿಯೆ ನಡೆಸ ಲಾಯಿತು, ಅರ್ಥಾತ್ 'ಐಎಸ್‌ಎಸ್'ಗೆ ಬಿಗಿಯಾಗಿ ಅಪ್ಪಿಕೊಂಡಿದ್ದ ಭಾಗದಿಂದ

ಡ್ರ್ಯಾಗನ್ ಕ್ಯಾಪ್ಸೂಲ್ ಪ್ರತ್ಯೇಕಗೊಳ್ಳುವಂತೆ ಮಾಡಲಾಯಿತು. ಆ ಬಳಿಕ ಡ್ರ್ಯಾಗನ್ ಕ್ಯಾಪ್ಸೂಲ್ ಭೂಮಿಯತ್ತ ಪ್ರಯಾಣ ಆರಂಭಿಸಿತು. ಈ 22 ಗಂಟೆಗಳ ಪಯಣದಲ್ಲಿ ಡ್ರ್ಯಾಗನ್ ಸ್ವಯಂಚಾಲಿತವಾಗಿರಲಿದೆ.



ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಮೊದಲ ಬಾರಿಗೆ ಭಾರತದ ರಾಷ್ಟ್ರಧ್ವಜವನ್ನು ಹಾರಿಸಿ ಸಂಭ್ರಮಿಸಿದ ಗಗನಯಾನಿ ಶುಭಾಂಶು ಶುಕ್ಲಾ

22 ಗಂಟೆಗಳ ಮರು ಪಯಣ

ಭೂಮಿಯಿಂದ ಸರಿಯಾಗಿ 420 ಕಿಮೀಗಳಷ್ಟು ದೂರದಲ್ಲಿರುವ ಐಎಸ್‌ಎಸ್‌ನಿಂದ ಹೊರಟಿರುವ ಡ್ರ್ಯಾಗನ್ ಕ್ಯಾಪ್ಸೂಲ್ ಅಮೆರಿಕದ ಕ್ಯಾಲಿಫೋರ್ನಿಯ ಕಡಲಿಗೆ ಬಂದು ಸುರಕ್ಷಿತವಾಗಿ ಬೀಳುವುದು ಕನಿಷ್ಠ 22 ಗಂಟೆಗಳ ಸಮಯ ಹಿಡಿಯಲಿದೆ. ಮಂಗಳವಾರ ಮಧ್ಯಾಹ್ನ 3 ಗಂಟೆಗೆ ನಾಲ್ವರೂ ಗಗನಯಾತ್ರಿಗಳಿರುವ ಕ್ಯಾಪ್ಸೂಲ್, ಫೆಸಿಫಿಕ್ ಸಾಗರದಲ್ಲಿ ಬಂದು ಬಿದ್ದು ತೇಲಲಿದೆ. ಆ ಬಳಿಕ ಕೆಲವು ನಿಮಿಷಗಳ ತರುವಾಯ ಕ್ಯಾಪ್ಸೂಲ್‌ನ ಬಾಗಿಲನ್ನುತೆರೆದು ನಾಲ್ವರೂ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ಹೊರಕ್ಕೆ ಕರೆತಂದು ಪ್ರತ್ಯೇಕವಾಗಿ ಇರಿಸಲಾಗುತ್ತದೆ.

- ಸೋಮವಾರ ಮಧ್ಯಾಹ್ನ 2.25ಕ್ಕೆ ಡ್ರ್ಯಾಗನ್ ಗ್ರೇಸ್ ಬಾಹ್ಯಾಕಾಶ ನೌಕೆಗೆ ನಾಲ್ವರೂ ಗಗನಯಾತ್ರಿಗಳ ಪ್ರವೇಶ- ಬಾಹ್ಯಾಕಾಶ ಸೂಟ್‌ಗಳ ಧಾರಣೆ
- ಮಧಾಹ್ನ 2.37ಕ್ಕೆ ಸರಿಯಾಗಿ ಡ್ರ್ಯಾಗನ್ ಕ್ಯಾಪ್ಸೂಲ್‌ನ ಬಾಗಿಲು ಬಂದ್ ಮಾಡಲಾಯಿತು.
- ಸಂಜೆ 4.35ಕ್ಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಜೋಡಣೆಯಾಗಿದ್ದ ಡ್ರ್ಯಾಗನ್ ಕ್ಯಾಪ್ಸೂಲ್ ಪ್ರತ್ಯೇಕಗೊಳಿಸಲಾಯಿತು.
- ನಾಲ್ವರೂ ಗಗನಯಾತ್ರಿಗಳನ್ನು ಒಡಲಲ್ಲಿ ಭದ್ರವಾಗಿರಿಸಿಕೊಂಡಿರುವ ಡ್ರ್ಯಾಗನ್ ಕ್ಯಾಪ್ಸೂಲ್ ಸಂಜೆ 4.36ಕ್ಕೆ ಭೂಮಿಯತ್ತ ಮರಳಿ ಪಯಣ ಆರಂಭಿಸಿದೆ.
- ಮಂಗಳವಾರ ಮಧ್ಯಾಹ್ನ 3 ಗಂಟೆಯ ವೇಳೆಗೆ ಅಮೆರಿಕದ ಕ್ಯಾಲುಫೋರ್ನಿಯಾ ಸಮೀಪದ ಕಡಲಿನಲ್ಲಿ ಡ್ರ್ಯಾಗನ್ ಕ್ಯಾಪ್ಸೂಲ್ ಬಿದ್ದು ತೇಲಲಿದೆ.

ನಾಲ್ವರ ಆರೋಗ್ಯ ತಪಾಸಣೆ-ವಿಶ್ರಾಂತಿ

ಮೊದಲಿಗೆ ನಾಲ್ವರೂ ಗಗನಯಾತ್ರಿಗಳ ದೈಹಿಕ-ಮಾನಸಿಕ ಆರೋಗ್ಯದ ಪರಿಶೀಲನೆ ನಡೆಯಲಿದೆ. ಗುರುತ್ವ ರಹಿತ ಬಾಹ್ಯಾಕಾಶ ನಿಲ್ದಾಣದಲ್ಲಿನ 18 ದಿನಗಳ ಕಾಲ ಇದ್ದು ಬಂದಿರುವುದರಿಂದ ನಾಲ್ವರೂ ಗಗನಯಶಗಳ ಮೂಳೆಗಳ ಸಾಂದ್ರತೆಯನ್ನು ಮುಖ್ಯವಾಗಿ ಪರಿಶೀಲಿಸಲಾಗುತ್ತದೆ. ಜತೆಗೆ, ಗುರುತ್ವ ರಹಿತ ಸ್ಥಿತಿಯಲ್ಲಿ 18 ದಿನಗಳ ಕಾಲ ತೇಲಾಡುತ್ತಾ ಇದ್ದ ನಾಲ್ವರೂ ಗಗನಯಾತ್ರಿಗಳ ದೇಹಗಳು, ಥಟ್ಟನೆ ಮರಳಿ ಗುರುತ್ವಾಕರ್ಷಣೆಗೆ ಒಳಪಡುವುದು ಕಷ್ಟವಾಗುವ ಕಾರಣ, ಕೆಲ ಕಾಲ ಕೃತಕ ಗುರುತ್ವ ರಹಿತ ಕೋಶದಲ್ಲಿ ನಾಲ್ವರನ್ನೂ ಇರಿಸಿ ನಿಧಾನವಾಗಿ ಗುರುತ್ವಾಕರ್ಷಣೆ ಸ್ಥಿತಿಗೆ ದೇಹ ವನ್ನು ಹೊಂದಿಕೊಳ್ಳುವಂತೆ ಮಾಡಲಾಗುತ್ತದೆ. ಇದೆಲ್ಲದರ ಬಳಿಕ ವಿಶ್ರಾಂತಿ ಮತ್ತು ಕ್ವಾರಂಟೇನ್ (ಏಕಾಂತ ವಾಸ)ಕ್ಕೆ ಒಳಪಡಿಸಲಾಗುತ್ತದೆ.

ಡ್ರ್ಯಾಗನ್ ಕ್ಯಾಪ್ಸೂಲ್ ಸೋಮವಾರ ಸಂಜೆ 4.35ಕ್ಕೆ 'ಐಎಸ್‌ಎಸ್'ನಿಂದ 'ಅನ್ ಡಾಕಿಂಗ್' ಆಗಿದೆ.

ಶುಭಾಂಶು ಶುಕ್ಲಾ ಸೇರಿದಂತೆ ಆಕ್ಸಿಯಮ್-4 ಮಿಷನ್ ಗಗನಯಾತ್ರಿಗಳಿಗೆ ಐಎಸ್‌ಎಸ್‌ನಲ್ಲಿ ಸೋಮವಾರ ಮಧ್ಯಾಹ್ನ ಬೀಳ್ಕೊಡುಗೆ.

ನರ್ಸ್‌ಗೆ ನಾಳೆ ಗಲ್ಲು ಶಿಕ್ಷೆ

ದೆಹಲಿ: ಯೆಮೆನ್ ದೇಶದಲ್ಲಿ ಜು.16ರ ಬುಧವಾರ ಗಲ್ಲು ಶಿಕ್ಷೆಗೆ ಗುರಿಯಾಗಲಿರುವ ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರನ್ನು ಶಿಕ್ಷೆಯಿಂದ ತಪ್ಪಿಸಲು ಸದ್ಯ ಏನೂ ಮಾಡಲು ಸಾಧ್ಯವಿಲ್ಲವಾಗಿದೆ ಎಂದು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದೆ.

ಭಾರತ ಸರಕಾರ ಹೆಚ್ಚಿನದನ್ನೇನೂ ಮಾಡಲು ಈಗ ಸಾಧ್ಯವಿಲ್ಲ. ಯೆಮೆನ್ ದೇಶ ರಾಜತಾಂತ್ರಿಕವಾಗಿ ಭಾರತದ ಜತೆ ನಂಟು ಹೊಂದಿಲ್ಲ. ಹಾಗಾಗಿ, ಭಾರತದ ಕೋರಿಕೆಗೆ ಯೆಮೆನ್ ಸರಕಾರ ಸ್ಪಂದಿಸುತ್ತಿಲ್ಲ. ಗಲ್ಲು ಶಿಕ್ಷೆ ಬದಲಿಗೆ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ರೂಪದಲ್ಲಿ ಹಣ ನೀಡುವ ಬಗೆಗೂ ಮಾತುಕತೆ ನಡೆಸಲು ಯತ್ನಿಸಲಾಗಿದೆ. ಅಲ್ಲಿಯ ಶೇಖ್ ಜತೆಗೂ ಮಾತುಕತೆಗೆ ಪ್ರಯತ್ನಿಸಲಾಗಿದೆ. ಆದರೆ ಯಾವುದೇ ಪ್ರತಿಕ್ರಿಯೆ ಬರುತ್ತಿಲ್ಲ ಎಂದು ಕೇಂದ್ರ ಸರಕಾರದ ಪರ ಹಾಜರಾಗಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಪೀಠಕ್ಕೆ ವಿವರಿಸಿದರು. ಆ ಬಳಿಕ ಅರ್ಜಿ ವಿಚಾರಣೆಯನ್ನು ಪೀಠ ಶುಕ್ರವಾರಕ್ಕೆ ಮುಂದೂಡಿತು.

ಭಾರತದ ಸರಕಾರ ಮಧ್ಯಪ್ರವೇಶಿಸಿ ವಿಧಿಷಾ ಗಲ್ಲು ಶಿಕ್ಷೆ ತಪ್ಪಿಸಲಿ, ಆ ಸಂಬಂಧ ಸರಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಇಂಟರ್‌ನ್ಯಾಷನಲ್ ಆಕ್ಷನ್ ಕೌನ್ಸಿಲ್ ಎಂಬ ಸಂಸ್ಥೆ ನಿಮಿಷ ಪ್ರಿಯಾ ಪರವಾಗಿ ಸಾರ್ವಜನಿಕ ಹಿತಾಸಕ್ತ ಅರ್ಜಿ ಸಲ್ಲಿಸಿದೆ.

ಹೈದರಾಬಾದ್‌ನಲ್ಲೀಗ ಮಾದಕದ್ರವ್ಯದ ಹಾವಳಿ: 14 ಮಂದಿ ಸೆರೆ

ಮುತ್ತಿನ ನಗರಿಯೀಗ ಮತ್ತಿನ ನಗರಿ

ಹೈದರಾಬಾದ್: ದೇಶದ ಮಾಹಿತಿ ತಂತ್ರಜ್ಞಾನದ(ಐಟಿ) ಹಬ್ ಮತ್ತು 'ಮುತ್ತಿನ ನಗರಿ' ಎಂದೇ ಹೆಸರಾಗಿರುವ ಹೈದರಾಬಾದ್‌ನಲ್ಲಿ ಗಾಂಜಾ ಮತ್ತು ಮರಿಜುವಾನಾ ಹಾವಳಿ ಮಿತಿಮೀರಿದೆ. ಹೈದರಾಬಾದ್ ಈಗ ಮಾದಕದ್ರವ್ಯ ಮಾರಾಟದ ರಾಜಧಾನಿಯಾಗುತ್ತಿದೆ. ಮುತ್ತಿನ ನಗರಿ ಈಗ 'ಮತ್ತಿನ ನಗರಿ' ಎಂದು ಕರೆಸಿಕೊಳ್ಳುವ ಸ್ಥಿತಿಗೆ ಬಂದಿದೆ.

ಮಾದಕ ವಸ್ತು ಮಾರಾಟ ಜಾಲ ತಡೆಗೆಂದೇ ವಿಶೇಷವಾಗಿ ತೆಲಂಗಾಣ ಸರಕಾರ ಹೊಸದಾಗಿ ರಚಿಸಿದ 'ಎಲೈಟ್ ಆಕ್ಷನ್ ಗ್ರೂಪ್ ಫಾರ್ ಡ್ರಗ್ ಲಾ ಎನ್‌ಫೋರ್ಸ್‌ಮೆಂಟ್'(ಇಎಜಿಎಲ್‌ಇ-ಈಗಲ್) ಪೊಲೀಸ್ ತಂಡದ ಅಧಿಕಾರಿಗಳು ಇತ್ತೀಚೆಗೆ ಹೈದರಾಬಾದ್‌ನ ಐಟಿ ಕಾರಿಡಾರ್ ಗಚಿಬೌಲಿಯಲ್ಲಿ ಬಿರುಸಿನ ಕಾರ್ಯಾಚರಣೆ ನಡೆಸಿ ಮರಿಜುವಾನಾ ಮಾರುತ್ತಿದ್ದ ಹಳೆ ಅಪರಾಧಿ ಮತ್ತು ಖರೀದಿಸುತ್ತಿದ್ದ 13 ಜನರನ್ನು ವಶಕ್ಕೆ ಪಡೆದು ಸ್ಥಳದಲ್ಲೇ ಮೂತ್ರ ಪರೀಕ್ಷೆ ನಡೆಸಿ ಪಾಸಿಟಿವ್ ವರದಿ ಬಂದ ಬಳಿಕ 14 ಜನರನ್ನು ಬಂಧಿಸಲಾಗಿದೆ.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ 'ಈಗಲ್' ಪೊಲೀಸ್ ಪಡೆ ವರಿಷ್ಠಾಧಿಕಾರಿ ಚೆನ್ನೂರಿ ರೂಪೇಶ್, 'ಗಚಿಬೌಲಿ ಪ್ರದೇಶದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಹಳೆ ಅಪರಾಧಿ ಸಂದೀಪ್ ಎಂಬಾತನನ್ನು ಬಂಧಿಸಲಾಗಿದೆ. ಸಂದೀಪ್, ತಲಾ 50 ಗ್ರಾಂ ತೂಕದ 100 ಪ್ಯಾಕೆಟ್‌ಗಳಲ್ಲಿ 5 ಕೆಜಿ ಗಾಂಜಾ ಸಾಗಿಸುತ್ತಿದ್ದಾಗ ಸೆರೆ ಸಿಕ್ಕ. ಆತ ಐಟಿ ವಲಯದ ಉದ್ಯೋಗಿಗಳು ಮತ್ತು ಖಾಸಗಿ ಕಂಪನಿಗಳ ಸಿಬ್ಬಂದಿಗೆ ಪ್ರತಿ ಪ್ಯಾಕೆಟ್ 3,000 ರೂ.ನಂತೆ ಗಾಂಜಾ ಮಾರಾಟ ಮಾಡುತ್ತಿದ್ದುದು ತಿಳಿಯಿತು. 100ಕ್ಕೂ ಹೆಚ್ಚು ಗ್ರಾಹಕರನ್ನು ಈತನೊಬ್ಬನೇ ನಿರ್ವಹಿಸುತ್ತಿದ್ದ. 'ಭಾಯಿ ಬಚ್ಚಾ ಆ ಗಯಾ ಭಾಯಿ' ಎಂಬ ಕೋಡ್ ವರ್ಡ್ ವಾಟ್ಸಾಪ್ ಸಂದೇಶ ಮೂಲಕ ಗಾಂಜಾ ವ್ಯಸನಿಗಳ ಜತೆ ಸಂವಹನ ನಡೆಸುತ್ತಿದ್ದ ಎಂದು ವಿವರಿಸಿದರು.

ಮುಖ್ಯಾಂಶಗಳು

- 4 ವರ್ಷದ ಕಂದನ ಜತೆ ಗಾಂಜಾ ಖರೀದಿಗೆ ಬಂದಿದ್ದ ದಂಪತಿ
- ಆನ್ಲೈನ್ ವ್ಯಾಪಾರಿ, ವಾಸ್ತುಶಿಲ್ಪಿ, ಐಟಿ ಉದ್ಯೋಗಿ, ವಿದ್ಯಾರ್ಥಿ ಸೆರೆ
- 50 ಗ್ರಾಂ ತೂಕದ ಗಾಂಜಾ ಪ್ಯಾಕೆಟ್ 3,000 ರೂ.ಗೆ ಮಾರಾಟ
- 5 ಕೆಜಿ ಗಾಂಜಾ ಸಾಗಿಸುತ್ತಿದ್ದ ಮಾರಾಟಗಾರ ಹಳೆ ಅಪರಾಧಿ ಸೆರೆ

2 ಗಂಟೆಯಲ್ಲೇ 14 ಸೆರೆ!

ಮರಿಜುವಾನಾ ಜಾಲದಡಿ ಬಂಧಿತರಾದವರಲ್ಲಿ ಆನ್‌ಲೈನ್ ವ್ಯಾಪಾರಿ, ವಾಸ್ತುಶಿಲ್ಪಿ, ರಿಯಲ್ ಎಸ್ಟೇಟ್ ಸಂಸ್ಥೆ ಮಾರಾಟ ಪ್ರತಿನಿಧಿ, ಐಟಿ ಉದ್ಯೋಗಿ ಮತ್ತು ಕಾಲೇಜು ವಿದ್ಯಾರ್ಥಿ ಸೇರಿದ್ದಾರೆ. ಆಘಾತಕಾರಿ ಸಂಗತಿ ಏನೆಂದರೆ ಈಗಲ್ ತಂಡ ಕಾರ್ಯಾಚರಣೆ ನಡೆಸಿದ್ದಾಗ, 4 ವರ್ಷದ ಪುಟ್ಟ ಕಂದಮ್ಮನ ಜತೆ ದಂಪತಿ ಗಾಂಜಾ ಖರೀದಿಗೆ ಬಂದಿದ್ದನ್ನುನ್ನು ನೋಡಿ ಅಧಿಕಾರಿಗಳೇ ಹೌಹಾರಿದರು. ತಂದೆಗೆ ಗಾಂಜಾ ಸೇವನೆ ಇರುವುದು ದೃಢಪಟ್ಟಿದ್ದರಿಂದ ಆತನನ್ನು ಬಂಧಿಸಲಾಯಿತು. ತಾಯಿ ಮತ್ತು ಮಗುವನ್ನು ಬಿಟ್ಟು ಕಳುಹಿಸಲಾಯಿತು. ಮತ್ತೊಂದು ಪ್ರಕರಣದಲ್ಲಿ ಗಾಂಜಾ ಖರೀದಿಸಲು ಬಂದ ದಂಪತಿ ಇಬ್ಬರಿಗೂ ಗಾಂಜಾ ಸೇವನೆ ಪಾಸಿಟಿವ್ ವರದಿ ಬಂದಿದ್ದರಿಂದ ಇಬ್ಬರನ್ನೂ ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ಚೆನ್ನೂರಿ ರೂಪೇಶ್ ವಿವರಿಸಿದರು.

ಐಐಎಂ ಅತ್ಯಾಚಾರ ಆರೋಪಿ ತಪ್ಪೊಪ್ಪಿಗೆ

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯದ ಕೋಲ್ಕತ್ತ ಮಹಾನಗರದಲ್ಲಿನ ಪ್ರತಿಷ್ಠಿತ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ -ಕೋಲ್ಕತ್ತ' ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ನಿಲಯದ ಕೊಠಡಿಯಲ್ಲಿ ನಡೆದ ಅತ್ಯಾಚಾರ ಪ್ರಕರಣದ ಆರೋಪಿ ಕರ್ನಾಟಕ ಮೂಲದ ವಿದ್ಯಾರ್ಥಿ ಪೊಲೀಸರ ಬಳಿ ತಪ್ಪೊಪ್ಪಿಕೊಂಡಿದ್ದಾನೆ. ಹತ್ತಿರದ ಔಷಧ ಮಳಿಗೆಯಿಂದ ನಿದ್ರೆ ಮಾತ್ರೆಗಳನ್ನು ಖರೀದಿಸಿ, ತಂಪು ಪಾನೀಯಕ್ಕೆ ಬೆರೆಸಿ, ಮನೋಚಿಕಿತ್ಸಾ ಸಮಾಲೋಚನೆ ಗೆಂದು ಬಂದಿದ್ದ ಕ್ಲಿನಿಕಲ್ ಸೈಕ್ರಿಯಾಟಿಸ್ಟ್ ಕೌನ್ಸಿಲಿಂಗ್ ಮಹಿಳೆಗೆ ಕುಡಿಸಿದ್ದಾಗಿ ಒಪ್ಪಿಕೊಂಡಿದ್ದಾನೆ. ಪ್ರಜ್ಞಾಹೀನ ಮಹಿಳೆ ಮೇಲೆ ಅತ್ಯಾಚಾರ ನಡೆಸಿದ್ದಾಗಿಯೂ ತಪ್ಪೊಪ್ಪಿಕೊಂಡಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಮಾಧಮಗಳಿಗೆ ಸೋಮವಾರ ತಿಳಿಸಿದ್ದಾರೆ. ಮಹಿಳೆ ಬಾಲಕರ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಯ ಕೊಠಡಿಗೆ ಹೋಗಿರುವು ದಕ್ಕೆ ಸಾಂದರ್ಭಿಕ ಪುರಾವೆಗಳಿವೆ. ಅತ್ಯಾಚಾರ ನಡೆಸಿದ ನಂತರ ಆರೋಪಿ, ಕೊಠಡಿಯ ಮುಂದೆ ಮತ್ತು ವರಾಂಡಾ ದಲ್ಲಿ ನಡೆದಾಡುತ್ತಾ ಸ್ನೇಹಿತನಿಗೆ ಕರೆ ಮಾಡಿ ಘಟನೆ ಬಗ್ಗೆ ವಿವರಿಸಿದ್ದಾನೆ ಎಂದು ವಿಶೇಷ ತನಿಖಾ ತಂಡದ ಪೊಲೀಸ್ ಅಧಿಕಾರಿ ವಿವರಿಸಿದ್ದಾರೆ. ಸಂತ್ರಸ್ತೆಯ ತಂದೆ ವಿರುದ್ಧ ಹೇಳಿಕೆ ನೀಡಿರುವ ಬಗ್ಗೆ ಪ್ರಶ್ನಿಸಿದಾಗ, ದೂರು ವಾಪಸ್ ತೆಗೆದುಕೊಳ್ಳುವಂತೆ ಕುಟುಂಬದ ಮೇಲೆ ಒತ್ತಡ ಹೇರುತ್ತಿರಬಹುದು ಎಂಬ ಶಂಕೆ ಇದೆ. ಅದನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದೇವೆ ಎಂದು ಪೊಲೀಸ್ ಅಧಿಕಾರಿ ಉತ್ತರಿಸಿದ್ದಾರೆ. ಅತ್ಯಾಚಾರ ಆರೋಪಿ ಕರ್ನಾಟಕ ಮೂಲದ ಯುವಕ ಮಹಾವೀರ ತೋಪಣ್ಣವರ್ ಅಲಿಯಾಸ್ ಪರಮಾನಂದ ಜೈನ್‌ನನ್ನು ಬಂಧಿಸಲಾಗಿದೆ.

ಇಂಡೊನೇಷ್ಯಾ 6.7 ತೀವ್ರತೆಯ ಭೂಕಂಪ

ತಣಿಂಬಾರ್: ಇಂಡೋನೇಷ್ಯಾದ ತಣಿಂಬಾರ್ ದ್ವೀಪ ಸಮೂಹಗಳಲ್ಲಿ ಸೋಮವಾರ ಬೆಳಗ್ಗೆ ಭೂಕಂಪವಾಗಿದೆ. ರಿಕ್ಟರ್ ಮಾಪಕದಲ್ಲಿ 6.7ರಷ್ಟು ಕಂಪನದ ತೀವ್ರತೆ ದಾಖಲಾಗಿದ್ದು, ಸುನಾಮಿ ರೂಪುತಳೆಯುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಲಾಗಿದೆ. ಭೂಕಂಪನದ ಕೇಂದ್ರ ಬಿಂದು ಇಂಡೋನೇಷ್ಯಾದ ಕಡಲ ತೀರದಲ್ಲಿ 98 ಕಿಮೀ ಆಳದಲ್ಲಿ ಕಂಡುಬಂದಿದೆ.



ರಾಹುಲ್, ಸೋನಿಯಾ ವಿರುದ್ಧ ಆರೋಪ ಪರಿಗಣನೆ ಆದೇಶ

ನ್ಯಾಷನಲ್ ಹೆರಾಲ್ಡ್ ಪ್ರಕರಣ: ದೋಷಾರೋಪ ಆದೇಶ 29ಕ್ಕೆ

ದೆಹಲಿ: ಇತ್ತೀಚೆಗೆ ದೇಶದಲ್ಲಿ ಬಹು ಚರ್ಚಿತವಾಗಿರುವ 'ನ್ಯಾಷನಲ್ ಹೆರಾಲ್ಡ್' ಮಾಧ್ಯಮ ಸಂಸ್ಥೆಯ ಪ್ರಕರಣದಲ್ಲಿ ಮುಖ್ಯ ಆರೋಪಿಗಳಾಗಿರುವ ಕಾಂಗ್ರೆಸ್‌ನ ಪ್ರಮುಖ ನೇತಾರರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಹಾಗೂ ಉಳಿದ ಐವರ ಆರೋಪಿಗಳ ವಿರುದ್ಧದ 'ಅಕ್ರಮ ಹಣ ವರ್ಗಾವಣೆ' ದೋಷಾರೋಪವನ್ನು ಪರಿಗಣಿಸಬೇಕೆ ಅಥವಾ ಬೇಡವೇ? ಎಂಬ ವಿಚಾರವಾಗಿ ನೀಡಬೇಕಾಗಿರುವ ಆದೇಶವನ್ನು ಎರಡು ವಾರಗಳ ಕಾಲಕ್ಕೆ ಕಾಯ್ದಿರಿಸಿರುವುದಾಗಿ ದೆಹಲಿ ನ್ಯಾಯಾಲಯ ಸೋಮವಾರ ಹೇಳಿದೆ.

ಪ್ರಕರಣದಲ್ಲಿನ ಆರೋಪಿಗಳ ವಿರುದ್ಧದ ದೋಷಾರೋಪ ಪರಿಗಣನೆ ಕುರಿತು ಜುಲೈ 29ರಂದು ಆದೇಶ ಪ್ರಕಟಿಸುವುದಾಗಿ ರೋಸ್ ಅವೆನ್ಯೂ ಕೋರ್ಟ್ ಸಂಕೀರ್ಣದಲ್ಲಿನ ಭ್ರಷ್ಟಾಚಾರ ತಡೆ ಕಾಯ್ದೆಯಡಿ ರಚನೆಯಾಗಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶಾಲ್ ಗೋಗ್ನೆ ಅವರು ತಿಳಿಸಿದ್ದಾರೆ. ನೆಹರು ಕುಟುಂಬದ ಸೋನಿಯಾ ಮತ್ತು ರಾಹುಲ್ ಗಾಂಧಿ ಮಾತ್ರಲ್ಲದೇ ಸುಮನ್ ದುಬೆ, ಸ್ಯಾಮ್ ಪಿತ್ರೋಡಾ, ಸುನಿಲ್ ಭಂಡಾರಿ ಹಾಗೂ ಯಂಗ್ ಇಂಡಿಯನ್, ಡೋಟೆಕ್ಸ್ ಮರ್ಚಂಡೈಸ್‌ನ ಹೆಸರೂ ಪ್ರಕರಣದಲ್ಲಿ ಆರೋಪಿಗಳ ಪಟ್ಟಿಯಲ್ಲಿದೆ. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಒಡೆತನ ಹೊಂದಿದ್ದ ಅಸೋಸಿಯೇಟೆಡ್ ಜರ್ನಲ್ಸ್ ಲಿ.(ಎಜೆಎಲ್)ಗೆ ನೀಡ ಲಾಗಿದ್ದ ಸಾಲ ಹಣಕ್ಕೆ ಬದಲಾಗಿ ಎಜೆಎಲ್‌ಗೆ ಸೇರಿದ ಆಸ್ತಿಗಳನ್ನು ಕಬಳಿಸಲು 'ಯಂಗ್ ಇಂಡಿಯನ್' ಸಂಸ್ಥೆಯನ್ನು ಬಳಸಿಕೊಳ್ಳಲಾಗಿದೆ. ಇದರಲ್ಲಿ ದೊಡ್ಡ ಮೊತ್ತದ ಹಣ ಅಕ್ರಮವಾಗಿ ವರ್ಗಾವಣೆಗೊಂಡಿದೆ ಎಂದು ಜಾರಿ ನಿರ್ದೇಶನಾಲಯ(ಇ.ಡಿ) ಆರೋಪಿಸಿದೆ.

ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರು ಮೊದಲಿಗೆ ಈ ಪ್ರಕರಣದಲ್ಲಿ ಎಜೆಲ್ ವಂಚನೆ, ಕ್ರಿಮಿನಲ್ ಪಿತೂರಿ, ಕ್ರಿಮಿನಲ್ ನಂಬಿಕೆ ದ್ರೋಹ ಹಾಗೂ ಆಸ್ತಿ ದುರುಪ ಯೋಗದ ಖಾಸಗಿ ದೂರು ದಾಖಲಿಸಿದ್ದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ-1, ಕೆ.ಐ.ಎ.ಡಿ.ಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೆಲಮಂಗಲ
ನಂ. 14/3, 1ನೇ ಮಹಡಿ, ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು
ದೂರವಾಣಿ: 080-22236840 ಇ-ಮೇಲ್: slao1bmicp@kiadb.in
ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಬೆಂ.ಗ್ರಾ.ನೆ/505/2025-26 ದಿನಾಂಕ: 14.07.2025

ಸಾರ್ವಜನಿಕ ನೋಟೀಸು

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(4)ರ ಅನ್ವಯ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಓಬಳಾಪುರ ಗ್ರಾಮದಲ್ಲಿ ಈ ಕೆಳಕಂಡ ಸರ್ವೆ ನಂಬರ್ ಜಮೀನುಗಳನ್ನು ಕೈಗಾರಿಕಾ ಸ್ಥಾಪನೆಗಾಗಿ ಕೆಐಎಡಿ ಕಾಯ್ದೆ ಕಲಂ 28(4)ರಡಿ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 242 ಎಸ್ಪಿಕ್ಯೂ 2020 ದಿ: 16.06.2025 ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆ ದಿನಾಂಕ: 24.06.2025 ರಂದು ಹೊರಡಿಸಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(4)ರ ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರಗಳು:-

ಕ್ರ.ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಐನ್ ಎ-ಗುಂ	ಖರಾಬು ಎ-ಗುಂ	ಉಳಿಕೆ ಎ-ಗುಂ
1	2	3	4	5	6	7
ಗ್ರಾಮ: ಓಬಳಾಪುರ ತಾಲ್ಲೂಕು: ನೆಲಮಂಗಲ				ಹೋಬಳಿ: ತ್ಯಾಮಗೊಂಡ್ಲು ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1.	ಸರೋಜಮ್ಮ ಕೋಂ ಲೇಟ್ ಎನ್ ತಮ್ಮಯ್ಯ	ಸರೋಜಮ್ಮ ಕೋಂ ಲೇಟ್ ಎನ್ ತಮ್ಮಯ್ಯ	53/1	1-02	0-02	1-00
			ಒಟ್ಟು	1-02	0-02	1-00

-:: ಘೋಷ್ವಾರೆ ::-

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
1	ಓಬಳಾಪುರ	1-02	0-02	1-00
	ಒಟ್ಟು	1-02	0-02	1-00

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ-1 ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂ.ಗ್ರಾಂ, ನೆಲಮಂಗಲ ತಾಲ್ಲೂಕು, ಬೆಂಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ-1, ಕೆಐಎಡಿಬಿ(ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೆಲಮಂಗಲ,
ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-560001,
ದೂ: 080-22236840, ಇ-ಮೇಲ್: slao1bmicp@kiadb.in
ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಬೆಂ.ಗ್ರಾ.ನೆ/504/2025-26 ದಿನಾಂಕ: 14.07.2025

ಸಾರ್ವಜನಿಕ ನೋಟೀಸ್

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(4)ರ ಅನ್ವಯ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಓಬಳಾಪುರ ಗ್ರಾಮದಲ್ಲಿ ಈ ಕೆಳಕಂಡ ಸರ್ವೆ ನಂಬರ್ ಜಮೀನುಗಳನ್ನು ಕೈಗಾರಿಕಾ ಸ್ಥಾಪನೆಗಾಗಿ ಕೆಐಎಡಿ ಕಾಯ್ದೆ ಕಲಂ 28(4)ರಡಿ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 242 ಎಸ್‌ಪಿಕ್ಯೂ 2020 ದಿ:16.06.2025 ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆ ದಿನಾಂಕ:24.06.2025 ರಂದು ಹೊರಡಿಸಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(4)ರ ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರಗಳು:-

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನ್ ಎ-ಗು	ಖರಾಬು ಎ-ಗು	ಬಾಕಿ ಎ-ಗು
1	2	3	4	5	6	7
ಗ್ರಾಮ: ಓಬಳಾಪುರ ತಾಲ್ಲೂಕು: ನೆಲಮಂಗಲ				ಹೋಬಳಿ: ತ್ಯಾಮಗೊಂಡ್ಲು ಜಿಲ್ಲೆ:- ಬೆಂಗಳೂರು ಗ್ರಾಮಾಂತರ		
1	ಜಿ ನಾರಾಯಣಪ್ಪ ಬಿನ್ ಲೇಟ್ ಗಂಗಯ್ಯ	ಜಿ ನಾರಾಯಣಪ್ಪ ಬಿನ್ ಲೇಟ್ ಗಂಗಯ್ಯ	39/1ರಪೈಕಿ	0-26	-	0-26
2	ನಾರಾಯಣಪ್ಪ	ನಾರಾಯಣಪ್ಪ(ಎನ್.ಎ ಖರಾಬು)	39/2	0-04	0-04	-
3	ಕೆ ಶ್ರೀನಿವಾಸಮೂರ್ತಿ	ಕೆ ಶ್ರೀನಿವಾಸಮೂರ್ತಿ	101/4	1-38	0-03	1-35
4	ಡಾ॥ ಕೆ ಶ್ರೀನಿವಾಸಮೂರ್ತಿ ಬಿನ್ ಲೇಟ್ ಎಂ ಕೆಂಪಯ್ಯ,	ಡಾ॥ ಕೆ ಶ್ರೀನಿವಾಸಮೂರ್ತಿ ಬಿನ್ ಲೇಟ್ ಎಂ ಕೆಂಪಯ್ಯ	101/5	2-17	0-04	2-13
			ಒಟ್ಟು	5-05	0-11	4-34

-:: ಘೋಷ್ವಾರೆ ::-

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
1	ಓಬಳಾಪುರ	5-05	0-11	4-34
	ಒಟ್ಟು	5-05	0-11	4-34

ಸಹಿ/-ವಿಶೇಷ ಭೂಸ್ವಾಧೀನಾಧಿಕಾರಿ-1, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂ.ಗ್ರಾಂ, ನೆಲಮಂಗಲ ತಾಲ್ಲೂಕು, ಬೆಂಗಳೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ, ದಾಸರಹಳ್ಳಿ ವಲಯ,
ಹೆಸರುಘಟ್ಟ ಮುಖ್ಯರಸ್ತೆ, ಎಂಇಐ ಬಡಾವಣೆ, ಬಾಗಲಗುಂಟೆ, ಬೆಂಗಳೂರು-73
ಸಂಖ್ಯೆ: ಹಿಸನಿತೋ/ದಾವ/ಟೆಂಡರ್/8/2025-26 ದಿನಾಂಕ: 14.07.2025

ಮರು-ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ಅಲ್ಪಾವಧಿ (ದ್ವಿಲಕೋಟೆ ಪದ್ಧತಿ) (ಎಸ್‌ಟಿಡಿ ಕೆಡಬ್ಲ್ಯೂ-3)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ದಾಸರಹಳ್ಳಿ), ಇವರು (ಈ ದಾಖಲಾತಿಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಅನುಷ್ಠಾನಗೊಳಿಸಲು ಅರ್ಹ ಮತ್ತು ನುರಿತ ವ್ಯಕ್ತಿಗಳು / ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ವಾರ್ಡ್ ಸಂಖ್ಯೆ-15ರ ಕಮ್ಮಗೊಂಡನಹಳ್ಳಿಯ ಕಾನ್ಷಿರಾಮ್ ಅಂಬೇಡ್ಕರ್ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. **ಟೆಂಡರಿಗಿಟ್ಟ ಮೊತ್ತ** (ಜಿಎಸ್‌ಟಿ ಹೊರತುಪಡಿಸಿ): **₹.84,74,447.00** **ಇಎಂಡಿ ಮೊತ್ತ: ₹.1,69,489.00**

ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ 14.07.2025. (2) ಟೆಂಡರ್ ಆಕ್ಷೇಪಣೆ/ವಿವರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ 15.07.2025ರ ಸಂಜೆ 4:30 ಗಂಟೆಯವರೆಗೆ. (3) ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ ದಿನಾಂಕ 21.07.2025ರ ಸಂಜೆ 4:30 ಗಂಟೆಗೆ. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 23.07.2025ರ ಸಂಜೆ 4:30 ಗಂಟೆಯವರೆಗೆ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 24.07.2025ರ ಸಂಜೆ 4:35 ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವ ದಿನಾಂಕ 25.07.2025ರ ಸಂಜೆ 4:45 ಗಂಟೆಗೆ.

ಸಹಿ/- ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ,
ದಾಸರಹಳ್ಳಿ ವಲಯ, ಬೃಬೆಂಮಪಾಲಿಕೆ ಬೆಂಗಳೂರು

ಸಮಾಚಾರ ಸಣ್ಣದಲ್ಲ

ಅಪರಾಧ ರಾಜಧಾನಿ ಬಿಹಾರ: ರಾಹುಲ್

ದೆಹಲಿ: ಬಿಹಾರದ ಕಾನೂನು ಸುವ್ಯವಸ್ಥೆ ಪೂರ್ಣ ಹದಗೆಟ್ಟಿದೆ. ಬಿಹಾರ 'ಭಾರತದ ಅಪರಾಧ ರಾಜಧಾನಿ'ಯಾಗಿ ಬದಲಾಗಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಸ್ಥಾನ ಉಳಿಸಿಕೊಳ್ಳುವುದರಲ್ಲಿ ಬಿಜಿಯಾಗಿದ್ದಾರೆ. ಬಿಜೆಪಿ ಸಚಿವರು ಕಮಿಷನ್ ವಸೂಲಿಯಲ್ಲಿ ತೊಡಗಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕೆಯ ಮಳೆಗರೆದಿದ್ದಾರೆ. ಬಿಹಾರ ವಿವಿಧೆಡೆ ಕಳೆದ 11 ದಿನಗಳಲ್ಲಿ 31 ಕೊಲೆಗಳಾಗಿವೆ. ರಾಜ್ಯದಲ್ಲಿ ಗುತ್ತಿಗೆ ಕೊಲೆ ಸರಣಿಯೋಪಾದಿ ನಡೆದಿವೆ. ರಾಜ್ಯದ ಪ್ರತಿ ಗಲ್ಲಿಯಲ್ಲೂ ಭಯ, ಪ್ರತಿ ಮನೆಯಲ್ಲೂ ಅಶಾಂತಿ ನೆಲೆಸಿದೆ. ಗೂಂಡಾ ರಾಜ್ಯ ನಿರುದ್ಯೋಗಿ ಯುವಕರನ್ನು ಕೊಲೆಗಾರರನ್ನಾಗಿ ಮಾಡುತ್ತಿದೆ ಎಂದು ನಿತೀಶ್ ಕುಮಾರ್ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಈ ಬಾರಿ ಸರಕಾರವನ್ನು ಬದಲಾಯಿಸುವುದರ ಜತೆಗೇ ಬಿಹಾರವನ್ನು ಉಳಿಸುವುದಕ್ಕಾಗಿಯೂ ಮತ ಹಾಕಿ ಎಂದು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ಕರೆ ನೀಡಿದ್ದಾರೆ.

ದ್ವೇಷ ಭಾಷಣಗಳನ್ನು ನಿಯಂತ್ರಿಸಿ: ಸುಪ್ರೀಂ

ದೆಹಲಿ: ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ದ್ವೇಷ ಭಾಷಣಗಗಳನ್ನು ನಿಯಂತ್ರಿಸುವಂತೆ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳಿಗೆ ಸುಪ್ರೀಂಕೋರ್ಟ್ ಸೋಮವಾರ ಸೂಚನೆ ನೀಡಿದೆ. ಇನ್‌ಸ್ಟಾಗ್ರಾಮ್ ಇನ್‌ಫ್ಲುಯೆನ್ಸರ್ ಶರ್ಮಿಷ್ಠ ಪನೋಲಿ ವಿರುದ್ಧ ಪ್ರಕರಣದಲ್ಲಿನ ದೂರುದಾರ ವಜಾಹತ್ ಖಾನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ಸಂದರ್ಭ ಈ ಸೂಚನೆ ಹೊರಬಿದ್ದಿದೆ. ದ್ವೇಷ ಭಾಷಣಗಳನ್ನು 'ಅಭಿವ್ಯಕ್ತಿ ಸ್ವಾತಂತ್ರ್ಯ' ಎಂದು ಹೇಳುವುದಕ್ಕೆ ವಿಷಾದ ವ್ಯಕ್ತಪಡಿಸಿದ ನ್ಯಾ.ಬಿ.ವಿ.ನಾಗರತ್ನ ಮತ್ತು ನ್ಯಾ.ಕೆ.ವಿ.ವಿಶ್ವನಾಥನ್ ಅವರ ಪೀಠ, ದ್ವೇಷ ಭಾಷಣವನ್ನು ನಿಯಂತ್ರಿಸಲು ಸರಕಾರವೇ ಮುಂದಾಗಬೇಕು ಎಂಬುದನ್ನು ಯಾರೂ ಬಯಸುವುದಿಲ್ಲ. ವಾಕ್ ಸ್ವಾತಂತ್ರ್ಯ ಮೌಲ್ಯಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕಾದ ಅಗತ್ಯವಿದೆ. ಜನರು ಅಂತಹ ದ್ವೇಷದ ಭಾಷಣವನ್ನು ಹಂಚಿಕೊಳ್ಳುವುದು ಮತ್ತು ಲೈಕ್ ಮಾಡುವುದನ್ನು ನಿರ್ಬಂಧಿಸಬೇಕು ಎಂದು ಹೇಳಿತು.

ಪುದುಚೇರಿ: ಖ್ಯಾತ ಮಾಡೆಲ್ ಆತ್ಮಹತ್ಯೆ

ಪುದುಚೇರಿ: ಮಾಜಿ ಮಿಸ್ ಪುದುಚೇರಿ ಮತ್ತು ಜನಪ್ರಿಯ ಮಾಡೆಲ್ ಸ್ಯಾನ್ ರಾಚೆಲ್ ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಆಕೆಯಿಂದ ಒಂದು

ಸೂಸೈಡ್ ನೋಟ್ ಪತ್ತೆಯಾಗಿದೆ ಎಂದು ಮಾಹಿತಿ ಇದೆ. ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯವಾಗಿದ್ದ ರಾಚೆಲ್, ಕರಮನಿಕುಪ್ಪಂನ ತಮ್ಮ ಮನೆಯಲ್ಲಿ ತಂದೆಯನ್ನು ಭೇಟಿಯಾದ ಬಳಿಕ ಅತಿಯಾದ ರಕ್ತದೊತ್ತಡದ ಮಾತ್ರೆಗಳನ್ನು ಸೇವಿಸಿದ್ದಾರೆ. ಆರಂಭದಲ್ಲಿ ಸರಕಾರಿ ಆಸ್ಪತ್ರೆಗೆ ಕೊಂಡೊಯ್ದು ನಂತರ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಕೊನೆಗೆ ಜವಾಹರಲಾಲ್ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್ ಗ್ರಾಜುಯೇಟ್ ಮೆಡಿಕಲ್ ಎಜುಕೇಶನ್ ಆ್ಯಂಡ್ ರಿಸರ್ಚ್‌ನಲ್ಲಿ ಆಕೆ ಕೊನೆಯುಸಿರೆಳೆದರು. 2022ರಲ್ಲಿ ಮಿಸ್ ಪುದುಚೇರಿ ಪಟ್ಟ ಗಳಿಸಿದ್ದ ರಾಚೆಲ್ ಇತ್ತೀಚೆಗೆ ವಿವಾಹವಾಗಿದ್ದರು. ಚಿತ್ರರಂಗ ಮತ್ತು ಫ್ಯಾಷನ್ ಉದ್ಯಮದಲ್ಲಿ ಕಪ್ಪು ಬಣ್ಣದವರಿಗೆ ಎದುರಾಗುವ ತಾರತಮ್ಯದ ವಿರುದ್ಧ ಧ್ವನಿಯಾಗಿದ್ದ ಆಕೆ, ಆ ಕುರಿತು ಸಾರ್ವಜನಿಕವಾಗಿ ಮಾತನಾಡಿದ್ದರು. ಶಂಕರಪ್ರಿಯ ಎಂದೂ ಕರೆಯಲ್ಪಡುತ್ತಿದ್ದ ರಾಚೆಲ್, ಮಿಸ್ ಪಾಂಡಿಚೇರಿ, ಮಿಸ್ ಡಾರ್ಕ್ ಕ್ವೀನ್ ತಮಿಳುನಾಡು ಮತ್ತು ಬ್ಲ್ಯಾಕ್‌ಬ್ಯೂಟಿ ವಿಭಾಗದಲ್ಲಿ ಮಿಸ್‌ವರ್ಲ್ಡ್ ಸೇರಿದಂತೆ ಹಲವು ಸೌಂದರ್ಯ ಸ್ಪರ್ಧೆಯ ಪ್ರಶಸ್ತಿಗಳನ್ನು ಗೆದ್ದಿದ್ದರು.

ಪಾಕ್‌ನಲ್ಲಿ ರಾಮಾಯಣ ನಾಟಕ ಪ್ರದರ್ಶನ

ಕರಾಚಿ: ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಕರಾಚಿಯಲ್ಲಿ ಮೌಜ್ ರಂಗಭೂಮಿ ತಂಡವು ಕೃತಕ ಬುದ್ಧಿಮತ್ತೆ ಮೂಲಕ ಪ್ರಸ್ತುತಿಗೊಳಿಸಿದ ಭಾರತೀಯ ಮಹಾಕಾವ್ಯವಾದ ರಾಮಾಯಣ ನಾಟಕ ವ್ಯಾಪಕ ಶ್ಲಾಘನೆಗೆ ಪಾತ್ರವಾಗಿದೆ. ಕರಾಚಿ ಕಲಾ ಮಂಡಳಿಯಲ್ಲಿ ಕಳೆದ ವಾರಾಂತ್ಯದಲ್ಲಿ ಪ್ರದರ್ಶನಗೊಂಡ ನಾಟಕವು, ಪಾಕಿಸ್ತಾನದ ಮುಖ್ಯವಾಹಿನಿಯ ಕಲಾ ಕ್ಷೇತ್ರದಲ್ಲಿ ಪ್ರದರ್ಶನಗೊಂಡ ಅಪರೂಪದ ಘಟನೆಯಾಗಿದೆ. ಯೋಗೇಶ್ವರ್ ಕರೇರಾ ನಿರ್ದೇಶನದ ಈ ನಾಟಕವು ಎ.ಐ ತಂತ್ರಜ್ಞಾನವನ್ನು ಬಳಸಿ ದೃಶ್ಯ ಕಥನ, ಬೆಳಕಿನ ವಿನ್ಯಾಸದ ಆಧುನಿಕ ಆಕರ್ಷಣೆ ನೀಡಿದ್ದು, ರಾಮಾಯಣವನ್ನು ರಂಗದ ಮೇಲೆ ಜೀವಂತಗೊಳಿಸುವ ದೃಶ್ಯವು ನೋಡುಗರ ಕಣ್ಣಿಗೆ ರಸದೌತಣ ನೀಡಿದಂತಾಯಿತು. ಪಾಕಿಸ್ತಾನ ಸಮಾಜವು ಊಹಿಸಿದ್ದಕ್ಕಿಂತ ಸಹಿಷ್ಣುವೆಂದು ಕರೇರಾ ಹೇಳಿದ್ದು, ಈ ಪ್ರದರ್ಶನಕ್ಕೆ ಯಾವುದೇ ವಿರೋಧ ಬರಲಿಲ್ಲ ಎಂದು ಅವರು ತಿಳಿಸಿದ್ದಾರೆ. ನಾಟಕಕ್ಕೆ ಪ್ರೇಕ್ಷಕರು ಮತ್ತು ವಿಮರ್ಶಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸೀತೆಯ ಪಾತ್ರಧಾರಿಯಾದ ನಿರ್ಮಾಪಕಿ ರಾನಾ ಕಾಜ್ಮಿ, ಪುರಾತನ ಕಥೆಯನ್ನು ಸ್ಥಳೀಯರಿಗೆ ಹೊಸ ಅನುಭವ ನೀಡಿತು ಎಂದಿದ್ದಾರೆ.

{ **ಡೊನಾಲ್ಡ್ ಟ್ರಂಪ್** } ಅಮೆರಿಕ ಅಧ್ಯಕ್ಷ

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಒಂದೊಂದು ಬಾರಿ ಒಂದೊಂದು ರೀತಿ ಮಾತನಾಡುತ್ತಾರೆ, ಅವರು ತುಂಬಾ ನಿರಾಶೆಗೊಂಡಿದ್ದಾರೆ. ಅವರ ಪ್ರತಿಯೊಂದು ಹೇಳಿಕೆಗೆ ಅರ್ಥವಿದೆ ಎಂದು ನಾನು ಭಾವಿಸಿದ್ದೆ, ಆದರೆ ಅವರು ಹಗಲಿನಲ್ಲಿ ತುಂಬಾ ಚೆನ್ನಾಗಿ ಮಾತನಾಡಿ, ಬಳಿಕ ರಾತ್ರಿ ಜನರ ಮೇಲೆ ಬಾಂಬ್ ಹಾಕುತ್ತಾರೆ. ಉಕ್ರೇನ್ ಮೇಲೆ ಮಾಸ್ಕೋ ದಾಳಿ ನಡೆಸುತ್ತಿರುವುದು ಬೇಸರದ ಸಂಗತಿ.

ಕಾರ್ಯಕ್ರಮದ ಬಗ್ಗೆ ತಮ್ಮೊಂದಿಗೆ ಯಾರೂ ಚರ್ಚೆ ಮಾಡಿಲ್ಲ: ಸಿಎಂ

ಕೇಂದ್ರದಿಂದ ಶಿಷ್ಟಾಚಾರ ಪಾಲನೆಯಾಗಿಲ್ಲ

ಬೆಂಗಳೂರು: ಸಿಗಂಧೂರು ಚೌಡೇಶ್ವರಿ ದೇವಸ್ಥಾನವನ್ನು ಸಂಪರ್ಕಿಸುವ ರಾಜ್ಯದ ಉದ್ದನೆಯ ತೂಗು ಸೇತುವೆ ಉದ್ಘಾಟನಾ ಕಾರ್ಯಕ್ರಮಕ್ಕೆ ತಮ್ಮನ್ನು ಆಹ್ವಾನಿಸಿಲ್ಲ ಎಂದು

ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಕ್ಕೂಟ ವ್ಯವಸ್ಥೆಯಲ್ಲಿ ಈ ರೀತಿಯ ನಡವಳಿಕೆಗಳು ಸರಿಯಲ್ಲ. ಕಾರ್ಯಕ್ರಮದ ಬಗ್ಗೆ ತಮ್ಮೊಂದಿಗೆ ಯಾರೂ ಚರ್ಚೆ ಮಾಡಿಲ್ಲ. ನನಗೆ ಹೇಳದೇ ಎಲ್ಲವನ್ನೂ ನಿಗದಿ ಮಾಡಿದ್ದಾರೆ. ಕಾರ್ಯಕ್ರಮದ ಮಾಹಿತಿ ಪಡೆದು ನಾನೇ ಖುದ್ದಾಗಿ ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಕರೆ ಮಾಡಿದ್ದೆ. ಕಾರ್ಯಕ್ರಮ ಮುಂದೂಡುವುದಾಗಿ ಹೇಳಿದ್ದರು. ಆದರೆ ಸ್ಥಳೀಯ ಬಿಜೆಪಿ ನಾಯಕರ ಒತ್ತಡದ ಮೇರೆಗೆ ಕಾರ್ಯಕ್ರಮ ನಡೆಸಲಾಗಿದೆ. ತಮಗೆ ಆಹ್ವಾನ ನೀಡದೇ ಇರುವ ಕಾರಣಕ್ಕೆ ಪ್ರತಿಭಟನಾತ್ಮಕವಾಗಿ ಕಾರ್ಯಕ್ರಮದಲ್ಲಿ ತಾವೂ ಸೇರಿದಂತೆ ಯಾರೂ ಭಾಗವಹಿಸುತ್ತಿಲ್ಲ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಮಧುಬಂಗಾರಪ್ಪ, ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣ ಸೇರಿದಂತೆ ಯಾರೂ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿಲ್ಲ ಎಂದರು.

ಕಾರ್ಯಕ್ರಮ ಬಹಿಷ್ಕರಿಸುವುದರಿಂದ ರಾಜ್ಯ ಮತ್ತು ಕೇಂದ್ರ ಸರಕಾರಗಳ ನಡುವೆ ಸಂಘರ್ಷ ಏರ್ಪಡುವುದಿಲ್ಲವೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರು, ಇದನ್ನು ಶುರು ಮಾಡಿದ್ದು ನಾವಲ್ಲ, ಅವರು. ಕರೆಯದೇ ಕಾರ್ಯಕ್ರಮ ಮಾಡಿ ಶಿಷ್ಟಾಚಾರ ಉಲ್ಲಂಘಿಸುತ್ತಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಇದು ಸರಿಯಲ್ಲ ಎಂದು ಆಕ್ಷೇಪಿಸಿದರು. ಬಹಳಷ್ಟು ಯೋಜನೆಗಳಲ್ಲಿ ರಾಜ್ಯಸರಕಾರದ ಪಾಲು ಶೇ.75 ರಷ್ಟಿದೆ. ಆದರೂ ನಾವು ಕೇಂದ್ರ ಸರಕಾರದವರನ್ನು ಆಹ್ವಾನಿಸುತ್ತೇವೆ. ರೈಲ್ವೆ ಇಲಾಖೆಯಲ್ಲಿ ಶೇ.50 ರಷ್ಟು ಯೋಜನಾ ವೆಚ್ಚ ಹಾಗೂ ಭೂಮಿ ನೀಡುತ್ತೇವೆ. ಅದನ್ನು ರಾಜ್ಯಸರಕಾರದ ಯೋಜನೆಗಳೆಂದು ಬಿಂಬಿಸಿಕೊಳ್ಳುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಣದೀಪ್ ಸಿಂಗ್ ಸುರ್ಜೇವಾಲ ಕಿಡಿ

ಭಾರತೀಯ ಜನತಾ ಪಕ್ಷ ಮತ್ತು ಮೋದಿ ಸರಕಾರಕ್ಕೆ ಕನ್ನಡಿಗರನ್ನು ಸತತವಾಗಿ ಅವಮಾನ ಮಾಡುವ ದುರ್ನಡತೆ ಅಭ್ಯಾಸವಾಗಿ ಹೋಗಿದೆ. ಕರ್ನಾಟಕ

ರಾಜ್ಯವು ಅವರ ಪಾಲಿಗೆ ಕೇವಲ ತೆರಿಗೆ ಸಂಗ್ರಹದ ಯಂತ್ರದಂತೆ ಕಾಣುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಪ್ರತಿಕ್ರಿಯಿಸಿ, ಇದು ಕೇವಲ ನಮ್ಮ ರಾಜ್ಯದ ಮುಖ್ಯಮಂತ್ರಿಯವರನ್ನು ಅಪಮಾನಿಸಿರುವ ನಡತೆಯಲ್ಲ. ಏಳು ಕೋಟಿ ಕನ್ನಡಿಗರ ಆತ್ಮಗೌರವಕ್ಕೆ ಧಕ್ಕೆ ತರುವ ಹಾಗೂ ಅವರ ಮನೋಬಲದ ಮೇಲೆ ಎಳೆದಿರುವ ಬರೆ. ನಮ್ಮ ಇಡೀ ಕನ್ನಡ ರಾಜ್ಯವನ್ನು ತಿರಸ್ಕರಿಸುವ ಧಿಕ್ಕರಿಸುವ ಕೃತ್ಯ ಇದಾಗಿದೆ ಎಂದಿದ್ದಾರೆ.

ಒಂದು ಕಡೆ, ಮೋದಿ ಸರಕಾರ ಕರ್ನಾಟಕದ ಜನರ ಮೇಲೆಗೆ ಹೆಚ್ಚುವರಿ ಟೋಲ್ ತೆರಿಗೆ ವಿಧಿಸಿ ದೋಚುತ್ತಿದೆ. ಮೇಕೆದಾಟು ಯೋಜನೆಗೆ ಮಂಜೂರಾತಿ ನೀಡುತ್ತಿಲ್ಲ. ಕಳಸಾ-ಬಂಡೂರಿ ಮತ್ತು ಎತ್ತಿನಹೊಳೆ ಯೋಜನೆಗಳಿಗೆ ಹಣಕಾಸು ಬಿಡುಗಡೆ ಮಾಡುತ್ತಿಲ್ಲ. ಕೃಷ್ಣಾ ನೀರಿನ ವಿವಾದ ಟ್ರಿಬ್ಯೂನಲ್-2 ರ ತೀರ್ಪನ್ನು ಈಗವರೆಗೂ ಅಧಿಸೂಚನೆಗೊಳಿಸಿಲ್ಲ. 17 ಬಿಜೆಪಿ ಸಂಸದರು ಮತ್ತು 2 ಜೆಡಿಎಸ್ ಸಂಸದರು ಇದ್ದರೂ ಸಹ ಕಳೆದ ಎರಡು ವರ್ಷದಲ್ಲಿ ಕರ್ನಾಟಕದ ಪರವಾಗಿ ಕೇಂದ್ರ ಸರಕಾರ ಒಂದೇ ಒಂದು ಅಭಿವೃದ್ಧಿ ಯೋಜನೆ ಮಂಜೂರು ಮಾಡಿಲ್ಲ. ಕನ್ನಡ ನಾಡಿನ ಹೆಮ್ಮೆ ಮತ್ತು ಆತ್ಮಗೌರವಕ್ಕೆ ಧಕ್ಕೆ ತಂದವರನ್ನು ಕನ್ನಡಿಗರು ಎಂದಿಗೂ ಕ್ಷಮಿಸಿಲ್ಲ ಎಂಬುದನ್ನು ಇತಿಹಾಸದಿಂದ ಬಿಜೆಪಿ ಅರಿತುಕೊಳ್ಳಲಿ. ಕನ್ನಡನಾಡಿನ ಜನತೆ ಇದನ್ನು ಮರೆಯದೇ ಮುಂದಿನ ದಿನಗಳಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದಿದ್ದಾರೆ.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮೇಜರ್ ಅಭಿಷೇಕ್ ಅಭಿಮತ

ಮಕ್ಕಳಲ್ಲಿ ದೇಶದ ಬಗ್ಗೆ ಅಭಿಮಾನವಿರಲಿ

ಬೆಂಗಳೂರು: ಕಳೆದ 13 ವರ್ಷಗಳಿಂದ ಸಮುದಾಯದ ವಿದ್ಯಾರ್ಥಿಗಳು ಉತ್ತಮ ಅಂಕ ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ. ಈ ಬಾರಿಯೂ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದ್ದೇವೆ ಎಂದು ವಿಪ್ರ ವೃಂದದ ಅಧ್ಯಕ್ಷ ಬೆಳವಾಡಿ ನಾಗರಾಜ್ ಹೇಳಿದರು.

ಜೆ.ಪಿ.ನಗರದ ಲಕ್ಷ್ಮಿ ನರಸಿಂಹ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ವಿಪ್ರ ವೃಂದಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೇಜರ್ ಅಭಿಷೇಕ್ ಮಾತನಾಡಿ, ಆಪರೇಷನ್ ಸಿಂಧೂರ್ ಇದು ಪ್ರತಿ ಭಾರತೀಯರಿಗೂ ಹೆಮ್ಮೆ ಪಡುವ ವಿಷಯವಾಗಿದೆ. ಮಕ್ಕಳಿಗೆ ಪ್ರೇರಣಾದಾಯಕ ಮಾತುಗಳನ್ನು ತಮ್ಮ ಭಾರತೀಯ ಸೇನೆಯ ಆದರ್ಶ ಸತ್ಯ ಘಟನೆಗಳ ಕಥನವನ್ನು ವಿವರಿಸುವ ಮೂಲಕ ಮಕ್ಕಳಲ್ಲಿ ದೇಶ ಮೊದಲು ಎಂಬ ಭಾವನೆ ಜತೆಗೆ ರಾಷ್ಟ್ರೀಯ ಸಂಸ್ಕೃತಿ ಬಗ್ಗೆ ಅರಿವು ಮೂಡಿಸಬೇಕು ಎಂದು ಹೇಳಿದರು.

ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಶಾಸಕ ಎಂ.ಕೃಷ್ಣಪ್ಪ ಅವರ ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಈ ವೇಳೆ ಶಾಸಕ ಎಂ.ಕೃಷ್ಣಪ್ಪ, ಮಾಜಿ ಪಾಲಿಕೆ ಸದಸ್ಯ ನಾರಾಯಣ್, ಮಾಜಿ ಅಧ್ಯಕ್ಷ ಅಶ್ವಥ್ ನಾರಾಯಣ್, ವೀಣಾ ಬಾರ್ವೆ, ವೆಂಕಟಾಚಲಪತಿರವರು ಮತ್ತು ವಿಪ್ರ ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು.



ಜೆ.ಪಿ. ನಗರದಲ್ಲಿ ನಡೆದ ಸಮಾರಂಭದಲ್ಲಿ ವಿಪ್ರ ವೃಂದಪ್ರತಿಭಾದಿಂದ ವಿದ್ಯಾರ್ಥಿನಿಗೆ ಸನ್ಮಾನ ಮಾಡಲಾಯಿತು.

ಕಲಾವಿದರ ಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಿಂದ ಹಲ್ಲೆ ಯತ್ನ

ಪೊಲೀಸರಿಗೆ ದೂರು: ಅಮಾನತಿಗೆ ಪಟ್ಟು

ಬೆಂಗಳೂರು: ಜಾನಪದ ಕಲಾವಿದ ಜೋಗಿಲ ಸಿದ್ದರಾಜು ಅವರ ಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಹಲ್ಲೆಗೆ ಯತ್ನ ನಡೆಸಿರುವ ಘಟನೆ ಶುಕ್ರವಾರ ನಡೆದಿದ್ದು ಪ್ರಕರಣ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ.

ಜಾನಪದ ಗಾಯಕ ಜೋಗಿಲ ಸಿದ್ದರಾಜು ಮತ್ತವರ ಒಡನಾಡಿ ನಾಗೇಶ್ ಎಂಬುವವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ ಅವರಿಗೆ ಅಹವಾಲು ಸಲ್ಲಿಸಲು ತೆರಳಿದ್ದಾಗ ಹಲ್ಲೆಯತ್ನ ನಡೆಸಿದ್ದಾರೆ ಎನ್ನಲಾಗಿದೆ.

ರಾಜ್ಯ ವ್ಯಾಪಿಯ ಜನಪದ ಕಲಾವಿದರಿಗೆ ಮೂರು ವರ್ಷಗಳಿಂದ ಬಾಕಿ ಉಳಿದಿರುವ ಪ್ರಾಯೋಜನೆಯ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರಲು ಜೋಗಿಲ ಸಿದ್ದರಾಜು ಮತ್ತವರ ಗೆಳೆಯ ನಿರ್ದೇಶಕರ ಕೊಠಡಿಗೆ ಹೋಗಿದ್ದ ವೇಳೆ ನಿರ್ದೇಶಕರು ಸಿಟ್ಟಿನಿಂದ ಮಾತನಾಡಿದರೆನ್ನಲಾಗಿದೆ. 'ನಿಮ್ಮನ್ನು ಕೇಳಿ ಅಧಿಕಾರ ಮಾಡಬೇಕೆ? ನನಗೆ ಗೊತ್ತಿಗೆ ಹೋಗಿ ಎಂದಿದ್ದಲ್ಲದೆ, ಗೆಟ್ ಔಟ್ ಎಂದು ಗದರಿದರೆಂದು ಜೋಗಿಲ ಸಿದ್ದರಾಜು ತಿಳಿಸಿದ್ದಾರೆ.

ನಿರ್ದೇಶಕಿ ಕೆ.ಎಂ. ಗಾಯತ್ರಿ ಅವರ ವರ್ತನೆಯ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬುತ್ತಿದ್ದಂತೆಯೇ ಕಲಾವಿದರ ಸಮೂಹ ಕನ್ನಡ ಭವನಕ್ಕೆ ದಾಂಗುಡಿಯಿಟ್ಟು ಪ್ರತಿಭಟಿಸಿದ ಬೆನ್ನಿಗೇ ಸ್ಥಳಕ್ಕೆ ಆಗಮಿಸಿದ ಜೆ.ಪಿ.ಪೊಲೀಸರು ಪರಿಸ್ಥಿತಿ ತಹಬದಿಗೆ ತಂದರೆಂದು ವರದಿಯಾಗಿದೆ.

ಆನಂತರ ಜೋಗಿಲ ಸಿದ್ದರಾಜು ಅವರು ಜೆ.ಪಿ. ಪಾರ್ಕ್ ಪೊಲೀಸ್ ಠಾಣೆಗೆ ತೆರಳಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ವಿರುದ್ಧ ದೂರು ನೀಡಿದ್ದಾರೆ.

ಬಡಕಲಾವಿದರಿಗೆ ಬರಬೇಕಾದ ಹಣವನ್ನು ಕೇಳಲು ಹೋದಾಗ ಈ ಹಲ್ಲೆಯತ್ನ ನಡೆಯಿತು. ಕೂಡಲೇ ನಿರ್ದೇಶಕರನ್ನು ಅಮಾನತ್ತಿನಲ್ಲಿಡಬೇಕು, ಕಲಾವಿದರಿಗೆ ನ್ಯಾಯ ಒದಗಿಸಬೇಕು.

-ಜೋಗಿಲ ಸಿದ್ದರಾಜು, ಹಲ್ಲೆಗೊಳಗಾದ ಕಲಾವಿದ

ಮೋದಿ ಮತ್ತು ಆರ್‌ಎಸ್‌ಎಸ್ ವಿರುದ್ಧದ ಸಾಮಾಜಿಕ ಜಾಲತಾಣದ ಪೋಸ್ಟ್

ವ್ಯಂಗ್ಯಚಿತ್ರ ಅಳಿಸಲು ವ್ಯಂಗ್ಯಚಿತ್ರಕಾರ ಒಪ್ಪಿಗೆ

ದೆಹಲಿ: ಪ್ರಧಾನಿ ಮೋದಿ ಮತ್ತು ಆರ್‌ಎಸ್‌ಎಸ್ ಕುರಿತು ಆಕ್ಷೇಪಾರ್ಹ ವ್ಯಂಗ್ಯಚಿತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದ ಇಂದೋರ್ ಮೂಲದ ವ್ಯಂಗ್ಯಚಿತ್ರಕಾರ ಹೇಮಂತ್ ಮಾಳವೀಯ ಅವರನ್ನು ಸೋಮವಾರ ಸುಪ್ರೀಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ. ನಡವಳಿಕೆಯು ಪ್ರಚೋದನಕಾರಿ ಮತ್ತು ಅಪಕ್ವವಾಗಿದೆ ಎಂದು ಗಮನಿಸಿದ ನಂತರ, ಈ ಪೋಸ್ಟ್‌ಗಳನ್ನು ಡಿಲೀಟ್ ಮಾಡಲು ವ್ಯಂಗ್ಯಚಿತ್ರಕಾರ ಒಪ್ಪಿಕೊಂಡರು. ಸೋಮವಾರ ನಡೆದ ಸಂಕ್ಷಿಪ್ತ ವಿಚಾರಣೆಯ ಸಂದರ್ಭದಲ್ಲಿ, ನ್ಯಾಯಮೂರ್ತಿ ಸುಧಾಂಶು ಧುಲಿಯಾ ಮತ್ತು ನ್ಯಾಯಮೂರ್ತಿ ಅರವಿಂದ್ ನೇತೃತ್ವದ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠ, ವ್ಯಂಗ್ಯಚಿತ್ರಕಾರರ ನಡವಳಿಕೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

ಮಾಳವೀಯ ಅವರ ನಡವಳಿಕೆಯನ್ನು ಪ್ರಶ್ನಿಸಿದ ಸುಪ್ರೀಂಕೋರ್ಟ್, ಅರ್ಜಿದಾರರು ತಮ್ಮ ಪೋಸ್ಟ್ ಅನ್ನು ಡಿಲೀಟ್ ಮಾಡಲು ಸಿದ್ಧರಿದ್ದಾರೆಯೇ ಎಂದು ಪ್ರಶ್ನಿಸಿತು. ಅದಕ್ಕೆ ಅವರ ಪರ ವಕೀಲೆ ವೃಂದಾ ಗ್ರೋವರ್ ಅವರು ಒಪ್ಪಿಗೆ ಸೂಚಿಸಿದರು. ನಿರೀಕ್ಷಣಾ ಜಾಮೀನು ಕೋರಿ ಹೇಮಂತ್ ಮಾಳವೀಯ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, 'ಅವರಲ್ಲಿ ಇನ್ನೂ ಪ್ರಬುದ್ಧತೆ ಬಂದಿಲ್ಲ, ಇದು ನಿಜಕ್ಕೂ ಉದ್ರಿಕ್ತವಾಗಿದೆ. ವಾಕ್ ಸ್ವಾತಂತ್ರ್ಯವನ್ನು ಈ ವ್ಯಂಗ್ಯಚಿತ್ರಕಾರರು, ಸ್ಟ್ಯಾಂಡ್-ಅಪ್ ಹಾಸ್ಯನಟರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ' ಎಂದು ಕಿಡಿ ಕಾರಿತು.

ಹೇಮಂತ್ ಮಾಳವೀಯ ಅವರನ್ನು ಬಂಧಿಸದಂತೆ ಯಾವುದೇ ಮಧ್ಯಂತರ ಆದೇಶವನ್ನು ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದು, ಅರ್ಜಿಯ ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿದೆ.

ಇಂದೋರ್‌ನ ಸೆಷನ್ಸ್ ನ್ಯಾಯಾಲಯವು ಮೇ 24ರಂದು ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು, ನಂತರ ಜುಲೈ 3ರಂದು ಮಧ್ಯಪ್ರದೇಶದ ಹೈಕೋರ್ಟ್ ಹೇಮಂತ್ ಮಾಳವೀಯ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು.

ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ

ಪ್ರಮುಖ ಜಂಕ್ಷನ್‌ಗಳ ಸಮಗ್ರ ಅಭಿವೃದ್ಧಿಗೆ ವಿನ್ಯಾಸ ರೂಪಿಸಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಮುಖ ಜಂಕ್ಷನ್‌ಗಳ ಸಮಗ್ರ ಅಭಿವೃದ್ಧಿಗೆ ವಿನ್ಯಾಸ ರೂಪಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವಲಯ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಡೆದ ಸಭೆ ಉದ್ದೇಶಿಸಿ ಮಾತನಾಡಿ, ನಗರದಲ್ಲಿ ಈಗಾಗಲೇ ಹಲವಾರು ಜಂಕ್ಷನ್‌ಗಳ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದು, ಇನ್ನಿತರೆ ಜಂಕ್ಷನ್‌ಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿಗಾಗಿ ಯೋಜನೆ ರೂಪಿಸಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಸ್ತುತ 53 ಪ್ರವಾಹ ಪೀಡಿತ ಪ್ರದೇಶಗಳಿದ್ದು, ಈಗಾಗಲೇ 4 ಕಡೆ ಸಮಸ್ಯೆ ಬಗೆಹರಿಸಲಾಗಿದೆ.

ಇನ್ನು 49 ಕಡೆ ಸಮಸ್ಯೆ ಬಗೆಹರಿಸಬೇಕಿದ್ದು, 22 ಕಡೆ ವರ್ಲ್ಡ್ ಬ್ಯಾಂಕ್ ಅನುದಾನದಿಂದ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಎಲ್ಲಿಯೂ ಯಾವುದೇ ರೀತಿಯ ಸಮಸ್ಯೆ ಆಗದಂತೆ ತಾತ್ಕಾಲಿಕ ಕ್ರಮ ಕೈಗೊಂಡು ಮುಂಜಾಗ್ರತಾ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಡಾ.ಕೆ. ಹರೀಶ್ ಕುಮಾರ್, ವಲಯ ಆಯುಕ್ತ ಸತೀಶ್, ಕರೀಗೌಡ, ರಮ್ಯಾ, ರಮೇಶ್, ಸ್ನೇಹಲ್, ದಿಗ್ವಿಜಯ್ ಬೋಡ್ಕೆ, ಉಪ ಆಯುಕ್ತರು, ಎಲ್ಲಾ ಮುಖ್ಯ ಅಭಿಯಂತರರು ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಬಿಎಂಪಿ ವಲಯ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಕೆ ಕೇಂದ್ರ ಕಚೇರಿಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸಭೆ ನಡೆಸಿದರು.

ಅನಧಿಕೃತ ಕಟ್ಟಡಗಳ ನಿರ್ಮಾಣ ಮಾಡಿದರೆ ಕ್ರಮ

ನಗರದಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ ಮಾಡುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕು. ಈ ಸಂಬಂಧ ನಕ್ಷೆ ಉಲ್ಲಂಘಿಸಿ ನಿರ್ಮಾಣ ಮಾಡುತ್ತಿದ್ದಲ್ಲಿ, ಕೂಡಲೇ ಬೆಸ್ಕಾಂಗೆ ಪತ್ರ ಪಡೆದು ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಆ ಬಳಿಕ ಕಾನೂನು ಕ್ರಮ ಕೈಗೊಳ್ಳಬೇಕು. ನಗರದಲ್ಲಿ ರಸ್ತೆಗಳು, ಮೇಲ್ಸೇತುವೆ, ಕೆಳಸೇತುವೆ ಸೇರಿದಂತೆ ಇನ್ನಿತರೆ ಯೋಜನೆಗಳಿಗಾಗಿ ಟಿಡಿಆರ್ ನೀಡಿ ಭೂಸ್ವಾಧೀನ ಪಡಿಸಿಕೊಳ್ಳಬೇಕಿರುವ ಕುರಿತು ಆಯಾ ವಲಯಗಳಿಂದ ಸೂಕ್ತ ಕ್ರಮ ಕೈಗೊಳ್ಳಬೇಕು. ಎಲ್ಲೆಲ್ಲಿ ಭೂಸ್ವಾಧೀನದ ಅವಶ್ಯಕತೆಯಿದೆ ಅದನ್ನು ಪಟ್ಟಿ ಮಾಡಿಕೊಂಡು ಆಸ್ತಿ ಮಾಲೀಕರಿಗೆ ಟಿಡಿಆರ್ ನೀಡಿ, ಜಾಗವನ್ನು ಪಾಲಿಕೆಗೆ ಭೂಸ್ವಾಧೀನಪಡಿಸಿಕೊಂಡು ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ಜಾರ್ಖಂಡ್ ಮಳೆ: 12 ಮಂದಿ ಸಾವು

ರಾಂಚಿ: ಜಾರ್ಖಂಡ್‌ನಲ್ಲಿ ಹವಾಮಾನ ವೈಪರೀತ್ಯದಿಂದ ಭಾನುವಾರ ಮತ್ತು ಸೋಮವಾರ ಭಾರಿ ಮಳೆಯಾಗಿದ್ದು, ವಿವಿಧ ಜಿಲ್ಲೆಗಳಲ್ಲಿ ಸಿಡಿಲು ಬಡಿದು ಕನಿಷ್ಠ 12 ಜನರು ಸಾವನ್ನಪ್ಪಿದ್ದು, ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಸಾವನ್ನಪ್ಪಿದವರಲ್ಲಿ ಹಲವರು ತಮ್ಮ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದಾಗ ಸಿಡಿಲು ಬಡಿದಿದೆ. ಗಿರಿದಿಹ್ ಮತ್ತು ದುಮ್ಕಾ ಜಿಲ್ಲೆಗಳು ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದು, ಎರಡೂ ಜಿಲ್ಲೆಗಳಲ್ಲಿ ತಲಾ ಮೂವರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಈ ಮಧ್ಯೆ ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಜುಲೈ 16ರ ವರೆಗೆ ಜಾರ್ಖಂಡ್ ರಾಜ್ಯದಲ್ಲಿ ಭಾರೀ ಮಳೆ ಮತ್ತು ಮಿಂಚಿನ ಎಚ್ಚರಿಕೆಯನ್ನು ನೀಡಿದೆ.

ಪೊಲೀಸ್ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖ | ಕಾಂಗ್ರೆಸ್ ಅಪಪ್ರಚಾರಕ್ಕೆ ಹಿನ್ನಡೆ

ಪರಶುರಾಮ ಪ್ರತಿಮೆ ಫೈಬರ್‌ದಲ್ಲ ಹಿತ್ತಾಳೆಯದು

ಕಾರ್ಕಳ: ಕಾರ್ಕಳದ ಉಮ್ಮಿಕಲ್ ಬೆಟ್ಟದ ಮೇಲೆ ಪರಶುರಾಮ ಪ್ರತಿಮೆಯನ್ನು ಫೈಬರ್‌ನಿಂದ ನಿರ್ಮಿಸಲಾಗಿದೆ ಎಂದು ಕಾಂಗ್ರೆಸಿಗರು ನಡೆಸುತ್ತಿದ್ದ ಅಪಪ್ರಚಾರಕ್ಕೆ ಮತ್ತೆ ಹಿನ್ನಡೆಯಾಗಿದ್ದು, ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪ ಪಟ್ಟಿಯಲ್ಲಿ ಪ್ರತಿಮೆಯನ್ನು ಹಿತ್ತಾಳೆಯಿಂದ ಮಾಡಲಾಗಿದೆ ಎಂದು ಉಲ್ಲೇಖಿಸಲಾಗಿದೆ.

1231 ಪುಟಗಳ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಕಾರ್ಕಳದ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಅದರಲ್ಲಿ ಶಿಲ್ಪಿ ಕೃಷ್ಣನಾಯ್ಕ ಕಂಚಿನ ಲೋಹದಿಂದ ಪರಶುರಾಮ ಮೂರ್ತಿಯನ್ನು ನಿರ್ಮಾಣ ಮಾಡದೇ, ಹಿತ್ತಾಳೆ ಲೋಹದಿಂದ ಪರಶುರಾಮ ಮೂರ್ತಿಯನ್ನು ನಿರ್ಮಾಣ ಮಾಡಿರುವುದು ತಜ್ಞರ ಪರಿಶೀಲನಾ ವರದಿಯಿಂದ ಹಾಗೂ ತನಿಖೆಯಿಂದ ಸಾಬೀತಾಗಿರುತ್ತದೆ ಎಂದು ಉಲ್ಲೇಖಿಸಲಾಗಿದೆ. ಅಲ್ಲಿಗೆ ಕಾಂಗ್ರೆಸಿಗರು ಹೆಣೆದ ಫೈಬರ್ ಪ್ರತಿಮೆ ವಾದ ಮಕಾಡೆ ಬಿದ್ದಂತಾಗಿದೆ. ಒಪ್ಪಂದದ ಪ್ರಕಾರ ಪ್ರತಿಮೆಯನ್ನು ಕಂಚಿನಿಂದ ನಿರ್ಮಿಸಬೇಕೆಂದಿದೆ. ಆದರೆ ಪ್ರತಿಮೆ ಹಿತ್ತಾಳೆಯದ್ದಾಗಿದ್ದು ಕಾರ್ಕಳದಲ್ಲಿ ನಿರ್ಮಿಸಿರುವ ಪರಶುರಾಮನ ಪ್ರತಿಮೆ ಫೈಬರ್

ನದ್ದು ಎಂಬ ವಾದ ಮುರಿದು ಬಿದ್ದಂತಾಗಿದೆ.

ದಿನಾಂಕ 21.06.2024 ರಂದು ಕೃಷ್ಣ ಶೆಟ್ಟಿ ಇವರು ಫಿರ್ಯಾದಿ ನೀಡಿದ್ದು, ಅದರಲ್ಲಿ ಕೃಷ್ಣ ನಾಯಕ್ Krish Art World ಎಂಬ ಸಂಸ್ಥೆಯ ಮುಖಾಂತರ ಕಾರ್ಕಳ ತಾಲೂಕಿನ ಪರಶುರಾಮ್ ಥೀಮ್ ಪಾರ್ಕ್‌ನಲ್ಲಿ ಕಂಚಿನ ಪರಶುರಾಮ್ ಮೂರ್ತಿಯನ್ನು ಸ್ಥಾಪಿಸಲು ಉಡುಪಿ ನಿರ್ಮಿತಿ ಕೇಂದ್ರದಿಂದ ಹಣ ಪಡೆದುಕೊಂಡು ಕಾಮಗಾರಿ ನಡೆಸುತ್ತಿದ್ದು, ನಂತರ ಆರೋಪಿ ಕೃಷ್ಣ ನಾಯ್ಕ ಎಂಬವರು ಕಂಚಿನ ಮೂರ್ತಿಯನ್ನು ಮಾಡದೇ ನಕಲಿ ಪರಶುರಾಮ ಮೂರ್ತಿಯನ್ನು ನಿರ್ಮಿಸಿ ಸರಕಾರಕ್ಕೆ ವಂಚನೆ ಯನ್ನು ಮಾಡಿರುತ್ತಾರೆ. ಎಂದು ನೀಡಿದ ಫಿರ್ಯಾದಿಯಂತೆ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗಿತ್ತು.

ಮೂವರಿಂದ ಸಾಕ್ಷಿ ನಾಶ

ಆರೋಪಿಗಳಾದ ಶಿಲ್ಪಿ ಕೃಷ್ಣ ನಾಯ್ಕ ಉಡುಪಿ ನಿರ್ಮಿತಿ ಕೇಂದ್ರದ ಪ್ರೊಜೆಕ್ಟ್ ಡೈರೆಕ್ಟರ್ ಅರುಣ ಕುಮಾರ್ ಹಾಗೂ ಎಂಜಿನಿಯರ್ ಸಚಿನ್ ವೈ ಕುಮಾರ್ ಇವರುಗಳು ಅಪರಾಧಿಕ ಒಳಸಂಚು ಮತ್ತು ನಂಬಿಕೆ ದ್ರೋಹ ಮತ್ತು ವಂಚನೆ ಎಸಗಿ, ಸಾಕ್ಷಿ ನಾಶ ಮಾಡಿರುತ್ತಾರೆ. ಅವರ ವಿರುದ್ಧ 1231 ಪುಟಗಳ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಕಾರ್ಕಳದ ನ್ಯಾಯಾಲಯಕ್ಕೆ ನಿವೇದಿಸಲಾಗಿದೆ.

ಡಿಜಿ ಲಾಕರ್ ತಂತ್ರಜ್ಞಾನ ಇಂದು ಲೋಕಾರ್ಪಣೆ

ಬೆಂಗಳೂರು: ದೇಶದಲ್ಲೇ ಮೊದಲ ಬಾರಿಗೆ ಶುಶ್ರೂಷಕರ ನೋಂದಣಿಗಾಗಿ, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ ಅಭಿವೃದ್ಧಿಪಡಿಸಿರುವ ವಿಶೇಷ ಡಿಜಿ ಲಾಕರ್ ತಂತ್ರಜ್ಞಾನ ಜಾರಿಗೆ ಬಂದಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್. ಪಾಟೀಲ್ ತಿಳಿಸಿದರು.

ಈ ಕುರಿತು ಪ್ರಕಟಣೆ ಹೊರಡಿಸಿ ಆಧಾರ್, ಡಿಜಿ ಲಾಕರ್ ಇ-ಕೆವೈಸಿ ಮೂಲಕ ನೋಂದಣಿ ಪ್ರಮಾಣ ಪತ್ರಗಳನ್ನು ವಿತರಿಸುವ ತಂತ್ರಜ್ಞಾನದ ಲೋಕಾರ್ಪಣೆ ಜುಲೈ 15 ರಂದು ನಡೆಯಲಿದೆ. ಯುಐಡಿಎಐ, ಸಿ-ಇಜಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿ ಸಹಯೋಗದೊಂದಿಗೆ ಈ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ ಎಂದಿದ್ದಾರೆ.

ಈ ತಂತ್ರಜ್ಞಾನದ ನೆರವಿನಿಂದ ಆಧಾರ್ ಇ-ಕೆವೈಸಿಯಿಂದ ಶುಶ್ರೂಷಕರ ವೈಯಕ್ತಿಕ ಡಾಟಾ, ವಿಳಾಸ, ಫೋಟೊ, ಹಾಗೂ ಇತರೆ ಮಾಹಿತಿಗಳನ್ನು ಆಧಾರ್ ಸರ್ವರ್‌ನಿಂದ ನೇರವಾಗಿ ಕರ್ನಾಟಕ ಶುಶ್ರೂಷ ಪರಿಷತ್ ಪಡೆದುಕೊಳ್ಳಬಹುದಾಗಿದೆ. ಈ ಹಿಂದೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ನೋಂದಣಿಗಾಗಿ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತಿನ ಬೆಂಗಳೂರಿನ ಕೇಂದ್ರ ಕಚೇರಿಗೆ ಬರಬೇಕಾಗಿತ್ತು ಎಂದರು.

ನಕಲಿ ಹಾವಳಿ ತಡೆಗಟ್ಟಲು ಸಹಕಾರಿ

ಹೊಸ ಡಿಜಿ ಲಾಕರ್ ತಂತ್ರಜ್ಞಾನದಿಂದ ಶುಶ್ರೂಷಕರ ಆಧಾರ್ ಕಾರ್ಡ್, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಅಂಕಪಟ್ಟಿ ಮತ್ತಿತರ ಪ್ರಮಾಣಪತ್ರಗಳನ್ನು ಸಂಬಂಧಪಟ್ಟ ಆಯಾ ಪರೀಕ್ಷಾ ಬೋರ್ಡ್‌ಗಳಿಂದ ನೇರವಾಗಿ ಪಡೆದುಕೊಳ್ಳಬಹುದು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ರಾಜ್ಯ ಶುಶ್ರೂಷ ಪರೀಕ್ಷಾ ಮಂಡಳಿಗಳು ಅಳವಡಿಸಿಕೊಂಡಿರುವ ಈ ತಂತ್ರಜ್ಞಾನದಿಂದ ಪರೀಕ್ಷಾ ಫಲಿತಾಂಶವನ್ನು ನೇರವಾಗಿ ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ ಪಡೆದುಕೊಳ್ಳಲಿದೆ. ನಂತರ ಡಿಜಿ ಲಾಕರ್ ತಂತ್ರಜ್ಞಾನದಿಂದ ಶುಶ್ರೂಷಕರಿಗೆ ನೇರವಾಗಿ ನೋಂದಣಿ ಪತ್ರವನ್ನು ವಿತರಿಸಬಹುದಾಗಿದೆ ಎಂದು ಶುಶ್ರೂಷ ಪರಿಷತ್ತಿನ ಕುಲಸಚಿವರಾದ ಡಾ.ಕೆ.ಮಲ್ಲು ತಿಳಿಸಿದ್ದಾರೆ.

ಉ.ಪ್ರ. ಶೂಟರ್ ಪಠಾಣ್‌ಗೆ ಗುಂಡು

ಮುಜಫರ್‌ನಗರ: ಉತ್ತರ ಪ್ರದೇಶದ ಮುಜಫರ್‌ನಗರದಲ್ಲಿ ಮೀರತ್ ಪೊಲೀಸ್ ಇಲಾಖೆಯ ವಿಶೇಷ ಕಾರ್ಯಾಚರಣೆ

ಪಡೆ(ಎಸ್‌ಟಿಎಫ್) ಕುಖ್ಯಾತ ಗ್ಯಾಂಗ್‌ಸ್ಟರ್ ಆಗಿದ್ದ ಮುಖ್ತಾರ್ ಅನ್ಸಾರಿ ತಂಡದ ಶಾರ್ಪ್ ಶೂಟರ್ ಎನಿಸಿಕೊಂಡಿದ್ದ ಶಾರುಖ್ ಪಠಾಣ್ ಎಂಬಾತನಿಗೆ ಬಂಧನ ಕಾರ್ಯಾಚರಣೆ ವೇಳೆ ಪ್ರತಿರೋಧ ತೋರಿದ್ದಕ್ಕೆ ಗುಂಡಿಕ್ಕಿದೆ. ಎಸ್‌ಟಿಎಫ್‌ನ ಗುಂಡೇಟಿನಿಂದ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದ ಪಠಾಣ್‌ನನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲೆತ್ನಿಸಲಾಗಿದೆ. ಆದರೆ, ಮಾರ್ಗ ಮಧ್ಯೆಯೇ ಪಠಾಣ್ ಪ್ರಾಣ ಬಿಟ್ಟಿದ್ದಾನೆ. ಥಾನಾ ಛಾಪರ್ ಪ್ರದೇಶದ ಬಿಜೋಪುರ ತಿರಾಹಾದಲ್ಲಿ ಪೊಲೀಸರು ಮತ್ತು ಪಠಾಣ್ ತಂಡದ ನಡುವೆ ಕೆಲಕಾಲ ಗುಂಡಿನ ಚಕಮಕಿ ನಡೆದಿದ್ದು, ಆಗಲೇ ಪಠಾಣ್‌ಗೆ ಗುಂಡು ತಗುಲಿದೆ ಎನ್ನಲಾಗಿದೆ. ಶಾರುಖ್ ಪಠಾಣ್ ಎಸ್‌ಟಿಎಫ್ ತಂಡದ ಮೇಲೆ 10ಕ್ಕೂ ಹೆಚ್ಚು ಸುತ್ತು ಗುಂಡು ಹಾರಿಸಿದ. ಪ್ರತಿಯಾಗಿ ಎಸ್‌ಟಿಎಫ್ ನಡೆಸಿದ ಗುಂಡಿನ ದಾಳಿಯಲ್ಲಿ ಶಾರುಖ್ ಗಾಯಗೊಂಡು ಆಸ್ಪತ್ರೆಗೆ ಕರೆದೊಯ್ಯುವಾಗ ಅಸುನೀಗಿದೆ ಎಂದು ಎಸ್‌ಟಿಎಫ್‌ನ ಮುಖ್ಯಸ್ಥ ಎಎಸ್‌ಪಿ ಬ್ರಿಜೇಶ್ ಕುಮಾರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಜಫರ್‌ನಗರ ನಿವಾಸಿಯಾದ ಶಾರುಕ್ ವಿರುದ್ಧ ಕೊಲೆ, ಸುಲಿಗೆ, ಕೊಲೆ ಯತ್ನ ಮತ್ತು ಬೆದರಿಕೆ ಮೊದಲಾದ ಗಂಭೀರ ಸ್ವರೂಪದ ಡಜನ್‌ಗೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಅಲ್ಲದೆ ಆತನ ಸೆರೆಗೆ ನೆರವಾದವರಿಗೆ 50 ಸಾವಿರ ರು. ಬಹುಮಾನವನ್ನೂ ಪೊಲೀಸ್ ಇಲಾಖೆ ಘೋಷಿಸಿದೆ. 2015ರಲ್ಲಿ ಪೊಲೀಸ್ ಕಸ್ಟಡಿಯಲ್ಲಿದ್ದಾಗಲೇ ಕೊಲೆ, 2017ರಲ್ಲಿ ಸಾಕ್ಷಿದಾರ ಮತ್ತು ಆತನ ತಂದೆಯ ಕೊಲೆ, 2017ರಲ್ಲಿ ಹರಿದ್ವಾರದಲ್ಲಿ ಉದ್ಯಮಿ ಗೋಲ್ಡಿ ಕೊಲೆ ಮಾಡಿದ ಆರೋಪಗಳೂ ಪಠಾಣ್ ಮೇಲಿವೆ. 2017ರಲ್ಲಿಯೇ ನ್ಯಾಯಾಲಯ ಆತನನ್ನು ಅಪರಾಧಿ ಎಂದು ಘೋಷಿಸಿತ್ತು.

ಬ್ರಹ್ಮೋಸ್ ಕ್ಷಿಪಣಿಗೆ 15 ದೇಶಗಳ ಬೇಡಿಕೆ

ಲಖನೌ: ಆತ್ಮನಿರ್ಭರ ಭಾರತ ಪರಿಕಲ್ಪನೆಯಡಿ ದೇಶದಲ್ಲೇ ತಯಾರಾಗುತ್ತಿರುವ 'ಬ್ರಹ್ಮೋಸ್ ಕ್ಷಿಪಣಿ'ಯ ಸಾಮರ್ಥ್ಯ ಕಂಡು ಜಗತ್ತು ಬೆರಗಾಗಿದೆ. ಹಾಗಾಗಿಯೇ ಕ್ಷಿಪಣಿ ಖರೀದಿಗೆ ಆಸಕ್ತಿ ತೋರಿ 15 ದೇಶಗಳಿಂದ ಬೇಡಿಕೆ ಬಂದಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಉತ್ತರ ಪ್ರದೇಶದ ಲಖನೌನಲ್ಲಿ ಇತ್ತೀಚೆಗೆ ಸ್ಥಾಪಿಸಲಾಗಿರುವ ಬ್ರಹ್ಮೋಸ್ ಪರೀಕ್ಷಾ ಕೇಂದ್ರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ರಾಜನಾಥ್ ಸಿಂಗ್, ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ ಭಾಗದಲ್ಲಿ ಭಾರತೀಯ ಸಶಸ್ತ್ರ ಪಡೆಗಳು ನಡೆಸಿದ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ವೇಳೆಯಲ್ಲೇ ಬ್ರಹ್ಮೋಸ್ ಕ್ಷಿಪಣಿ ಅದೆಷ್ಟು ಬಲಿಷ್ಠ ಹಾಗೂ ಬಲು ದೂರದವರೆಗೂ ಸಾಗಿ ನಿಖರವಾಗಿ ಗುರಿಯ ಮೇಲೆ ದಾಳಿ ಮಾಡಬಲ್ಲದು ಎಂಬುದು ಸಾಬೀತಾಗಿದೆ. ಹಾಗಾಗಿಯೇ ವಿವಿಧ ದೇಶಗಳಿಂದ ಬ್ರಹ್ಮೋಸ್‌ಗಾಗಿ ಬೇಡಿಕೆ ಬರುತ್ತಿದೆ ಎಂದು ಹೇಳಿದರು.

ಬ್ರಹ್ಮೋಸ್ ಕ್ಷಿಪಣಿಯನ್ನು ಇನ್ನು ಮುಂದೆ ಲಖನೌ ಕೇಂದ್ರದಿಂದಲೇ ರಫ್ತು ಮಾಡಬಹುದಾಗಿದೆ. ಇದರಿಂದ ಲಖನೌ ಕೇಂದ್ರದಲ್ಲಿ ಮತ್ತಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದರು. ಕಟ್ಟುನಿಟ್ಟು ಕಾನೂನು ವ್ಯವಸ್ಥೆ ಮತ್ತು ರಾಜ್ಯ ಸರಕಾರದ ಉತ್ತೇಜಕ ಕ್ರಮಗಳಿಂದಾಗಿ ಉತ್ತರ ಪ್ರದೇಶ ರಾಜ್ಯ ಈಗ ಕೈಗಾರಿಕೋದ್ಯಮಿಗಳ ಮೆಚ್ಚಿನ ತಾಣವಾಗುತ್ತಿದೆ. ರಾಜ್ಯದ ಮೂಲಸೌಕರ್ಯ ವಲಯದಲ್ಲಿಯೂ ಭಾರೀ ಬದಲಾವಣೆ ಕಾಣಬಂದಿದೆ ಎಂದು ಪ್ರಶಂಸಿಸಿದರು.

ಹೆದ್ದಾರಿಗಳು ಪ್ರಗತಿಯ ಸಂಕೇತ

ಸಿಗಂದೂರು ಸೇತುವೆ ಲೋಕಾರ್ಪಣೆಯಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿಕೆ

1. ಸಾಗರದಲ್ಲಿ ನಡೆದ ಸಮಾರಂಭದಲ್ಲಿ ವೇದಿಕೆಯ ಮೂಲಕ ವಿವಿಧ 6 ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ನೆರವೇರಿಸಿದರು. 2. ಸಾಗರ ತಾಲೂಕಿನ ಅಂಬಾರಗೋಡ್ಲು-ಕಳಸವಳ್ಳಿ ನಡುವಿನ ಶರಾವತಿ ಹಿನ್ನೀರಲ್ಲಿ ನಿರ್ಮಿಸಿದ ತೂಗು ಸೇತುವೆಯನ್ನು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪರಿಶೀಲಿಸಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಬಿ.ವೈ.ರಾಘವೇಂದ್ರ ಉಪಸ್ಥಿತರಿದ್ದರು.

ಸಾಗರ: ಪ್ರಗತಿಯ ಸಂಕೇತವಾದ ಹೆದ್ದಾರಿ ಸಂಪರ್ಕಗಳಿಗೆ ಆದ್ಯತೆ ನೀಡಲಾಗುತ್ತಿದೆ ಇದರ ಭಾಗವಾಗಿಯೇ ಕರ್ನಾಟಕದಲ್ಲಿ 2000 ಕೋಟಿ ರು. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾದ ನಾನಾ ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಾಗಿದೆ ಎಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದರು.

ಐತಿಹಾಸಿಕ ಅಂಬರಗೊಡ್ಲು, ಕಳಸವಳ್ಳಿ ಸಂಪರ್ಕದ ಸಿಗಂದೂರು ಸೇತುವೆ ಸೋಮವಾರ ಉದ್ಘಾಟಿಸಿದ ನಂತರ ಸಾಗರದಲ್ಲಿ ನಡೆದ ಸಮಾರಂಭದಲ್ಲಿ ವೇದಿಕೆಯ ಮೂಲಕ ವಿವಿಧ 6 ಪ್ರಮುಖ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಆರ್ಥಿಕವಾಗಿ ಪ್ರಯೋಜನವಲ್ಲದ ಆದರೆ ಜನರ ಬದುಕಿಗೆ ಅಗತ್ಯವಾಗಿರುವ ಸಿಗಂದೂರು ಸೇತುವೆ ನಿರ್ಮಾಣ ನನ್ನ ಕಡೆಯಿಂದ ಸಾಧ್ಯವಾಯಿತು ಎನ್ನುವುದಕ್ಕಿಂತ ತಾಯಿ ಚೌಡೇಶ್ವರಿಯ ಕೃಪೆಯ ಕಾರಣ 20 ಸಾವಿರ ಕುಟುಂಬಗಳ ಕಷ್ಟ ಪರಿಹಾರವಾಗಿದೆ ಎಂದರು.

ಇನ್ನು ಕರ್ನಾಟಕದಲ್ಲಿ ಈ ಹಿಂದೆ ಕೇವಲ 6000 ಕಿಮೀ ಹೆದ್ದಾರಿ ಸಂಪರ್ಕ ಮಾತ್ರ ಇತ್ತು. ಪ್ರಸ್ತುತ 9000 ಕಿ.ಮೀ ಹೆದ್ದಾರಿ ನಿರ್ಮಿಸಲಾಗಿದೆ. ಅಲ್ಲದೆ ಉದ್ದೇಶಿಸಿರುವ ದೆಹಲಿಯಿಂದ ಕನ್ಯಾಕುಮಾರಿಯವರೆಗಿನ ಹೆದ್ದಾರಿಯೊಂದು ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಸಂಪರ್ಕದ ಬಹು ದೊಡ್ಡ ಸೇತುವಾಗಿ ಕಾರ್ಯನಿರ್ವಹಿಸಲಿದೆ ಎಂದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ಬಹು ದೊಡ್ಡ ಯೋಜನೆಯೊಂದನ್ನು ಶಂಕುಸ್ಥಾಪನೆ ಮಾಡುವುದು ಮುಖ್ಯವಲ್ಲ ಅದರ ಶಂಕುಸ್ಥಾಪನೆಗೈದ ವ್ಯಕ್ತಿಯೇ ಉದ್ಘಾಟನೆಯನ್ನೂ ಮಾಡುವುದು ವಿಶೇಷ. ಪ್ರಸ್ತುತ ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿಯವರು ಪ್ರಸ್ತಾಪಿಸುವ ವಿಷಯವೇ ಇದು. ಯಾರು ಕಾಮಗಾರಿಯನ್ನು ಶಂಕುಸ್ಥಾಪನೆ ಮಾಡುತ್ತಾರೋ ಅವರೇ ಉದ್ಘಾಟಿಸುವಂತಾಗಬೇಕು ಎಂದು, ಇದರರ್ಥ ಕಾಮಗಾರಿ ಸಕಾಲದಲ್ಲಿ ಮುಗಿಯಬೇಕು ಎನ್ನುವುದು. ಅಂತಯೇ ನಿತಿನ್ ಗಡ್ಕರಿಯವರು ಅಡಿಗಲ್ಲು ಹಾಕುವ ಕಾಮಗಾರಿಗಳನ್ನು ಅವರೇ ಉದ್ಘಾಟಿಸುತ್ತಿರುವುದು ಅವರ ಇಚ್ಛಾಶಕ್ತಿಗೆ ಸಾಕ್ಷಿಯಾಗಿದೆ ಹಾಗಾಗಿಯೇ ಹೆದ್ದಾರಿ ನಿರ್ಮಾತೃ ಆಗಿರುವ ಅವರನ್ನು ಗಡ್ಕರಿ ಎನ್ನುವ ಹೆಸರಿನ ಜತೆ ರೋಡ್ಕರಿ ಎಂದು ಕರೆಯಬಹುದು ಎಂದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ, ಅಜಯ್ ಚೌದ್, ಶಾಸಕರಾದ ಆರಗ ಜ್ಞಾನೇಂದ್ರ, ಚನ್ನಬಸಪ್ಪ, ಗುರುರಾಜ ಗಂಟಿಹೊಳೆ, ಸಿಮೆಂಟ್‌ಮಂಜು, ಡಿ.ಎಸ್. ಅರುಣ್, ಧನಂಜಯ ಸರ್ಜಿ, ಹೇಮಲತಾ ನಾಯಕ್, ಮಾಜಿ ಸಚಿವ ಹರತಾಳು ಹಾಲಪ್ಪ, ಮಾಜಿ ಶಾಸಕ ಬಿ. ಸ್ವಾಮಿರಾವ್, ಕೆ.ಜಿ. ಕುಮಾರಸ್ವಾಮಿ, ಕರೂರು ಪರಮೇಶ್ವರ್ ಮತ್ತಿತರರು ಇದ್ದರು.

ಇದು ಸೇತುವೆ ಅಲ್ಲ, ಜನರ ವಿಶ್ವಾಸ

ಇದು ಸೇತುವೆ ಅಲ್ಲ ಬದಲಾಗಿ ಜನರ ವಿಶ್ವಾಸ ಎಂದು ಮಾಜಿ ಮುಖ್ಯಮಂತ್ರಿ ಸಿಗಂದೂರು ಸೇತುವೆಯ ರೂವಾರಿಯೂ ಆಗಿರುವ ಬಿ.ಎಸ್. ಯಡಿಯೂರಪ್ಪನವರು ಅಭಿಪ್ರಾಯ ವ್ಯಕ್ತಪಡಿಸಿದರು. ಶರಾವತಿ ಸಂತ್ರಸ್ತರ ನ್ಯಾಯ ಗೌರವಕ್ಕೆ ಸಾಕ್ಷಿಯಾದ ಈ ಸೇತುವೆ ಈ ಜಿಲ್ಲೆಗೆ ಮಾತ್ರವಲ್ಲ ಇಡೀ ದೇಶದಲ್ಲಿ ಹೀಗೊಂದು ಪ್ರಗತಿಯ ಕಾರ್ಯವಾಗುತ್ತಿದೆ ಎನ್ನುವುದಕ್ಕೆ ಉದಾಹರಣೆಯಾಗಿ ನಿಂತಿದೆ. ಈ ಮೂಲಕವೇ ಪ್ರಧಾನಿ ನರೇಂದ್ರ ಮೋದಿಯವರು ಹೇಳುತ್ತಿರುವ ವಿಕಸಿತ ಭಾರತ ರೂಪುಗೊಳ್ಳುತ್ತಿದೆ ಎಂದರು.

ಸಿಗಂದೂರು ಸೇತುವೆ ಕೆಲಸ ಎನ್ನುವುದು ಶಾಶ್ವತವಾಗಿ ನೆನಪಿನಲ್ಲಿ ಉಳಿಯುವ ಕೆಲಸ. ಹೀಗೊಂದು ಸಂಪರ್ಕ ವ್ಯವಸ್ಥೆ ಸಾಧ್ಯವೇ ಇಲ್ಲ ಎನ್ನುವ ಆ ಕಾಲಘಟ್ಟವನ್ನು ಹತ್ತಿರದಿಂದ ಬಲ್ಲ ಪ್ರತಿಯೊಬ್ಬರೂ ಅದ್ಭುತ ಎನಿಸಿರುವ ಈ ಕಾರ್ಯದ ಕುರಿತು ಅಭಿಮಾನ ಹೊಂದಲೇಬೇಕು. ಕೇಂದ್ರ ಸಚಿವರ ಇಚ್ಛಾಶಕ್ತಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಬದ್ಧತೆ, ಅನೇಕ ಹೋರಾಟಗಾರರ ಶ್ರಮ ಎಲ್ಲವೂ ಇಲ್ಲಿಯ ಜನಮಾನಸದಲ್ಲಿ ಉಳಿಯಲಿದೆ.

- ಬಿ.ವೈ.ರಾಘವೇಂದ್ರ ಸಂಸದರು

ಈಗಾಗಲೇ ಅನೇಕ ಹೆದ್ದಾರಿಗಳ ಅಭಿವೃದ್ಧಿಯ ಫಲವಾಗಿ ಸಂಚಾರದ ಸಮಯ ಉಳಿತಾಯವಾಗಿದೆ. ಹಿನ್ನೀರ ಸಂತ್ರಸ್ತರಾಗಿ ಬವಣೆ ಅನುಭವಿಸುತ್ತಿರುವ ಶರಾವತಿ ಮುಳುಗಡೆ ಜನರ ಕಷ್ಟವೂ ಇಂದಿಗೆ ಮುಕ್ತಾಯವಾಗಿದೆ. ಚೌಡೇಶ್ವರಿ ದೇವಿಯ ಕೃಪೆಯನ್ನು ನೆನಪಿಸಿಕೊಂಡೇ ಈ ಸೇತುವೆಗೆ ಸಿಗಂದೂರು ಚೌಡೇಶ್ವರಿ ದೇವಿ ಸೇತುವೆ ಎಂಬ ನಾಮಕರಣಕ್ಕೂ ಉದ್ದೇಶಿಸಲಾಗಿದೆ.

-ನಿತಿನ್ ಗಡ್ಕರಿ ಕೇಂದ್ರ ಭೂ ಸಾರಿಗೆ ಸಚಿವ

ಧರ್ಮಸ್ಥಳ ಪ್ರಕರಣ: ಎಸ್‌ಐಟಿ ತನಿಖೆಗೆ ನೀಡಲು ಸಿಎಂಗೆ ಪತ್ರ

ಬೆಂಗಳೂರು: ರಾಜ್ಯಾದ್ಯಂತ ವ್ಯಾಪಕ ಸುದ್ದಿಗೆ ಗ್ರಾಸವಾಗುತ್ತಿರುವ ಧರ್ಮಸ್ಥಳ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ)ಕ್ಕೆ ನೀಡುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಪತ್ರ ಬರೆದು ಒತ್ತಾಯಿಸಿದ್ದಾರೆ.

ಧರ್ಮಸ್ಥಳ ಗ್ರಾಮ ವ್ಯಾಪ್ತಿಯಲ್ಲಿ ಕಾಣೆಯಾದ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು, ಅಸ್ವಾಭಾವಿಕ ಸಾವುಗಳು ಮತ್ತು ಕೊಲೆ ಅತ್ಯಾಚಾರ ಪ್ರಕರಣಗಳ ತನಿಖೆಗಾಗಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆದಿದ್ದಾರೆ.

ಜುಲೈ 14 ರಂದು ಬರೆದ ತಮ್ಮ ಪತ್ರದಲ್ಲಿ, ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ವ್ಯಕ್ತಿಯೊಬ್ಬರು ಧರ್ಮಸ್ಥಳ ಪ್ರದೇಶದಲ್ಲಿ ಹಲವಾರು ಶವಗಳನ್ನು ಹೂತು ಹಾಕಿದ್ದಾರೆ ಮತ್ತು ಪತ್ತೆಯಾಗಿರುವ ಅಸ್ಥಿಪಂಜರಗಳ ಬಗ್ಗೆ ಮತ್ತು ವೈದ್ಯಕೀಯ ವಿದ್ಯಾರ್ಥಿನಿಯ ನಾಪತ್ತೆ ಪ್ರಕರಣದ ಬಗ್ಗೆ ವರದಿಗಳಿವೆ. ಇದನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಗಂಭೀರವಾಗಿ ಪರಿಗಣಿಸಿದೆ. ಕಳೆದ 20 ವರ್ಷದಿಂದ, ಹಲವಾರು ಜನರು, ಮಹಿಳೆಯರು ಮತ್ತು ವಿದ್ಯಾರ್ಥಿಗಳನ್ನು ಕ್ರೂರವಾಗಿ ಕೊಲ್ಲಲಾಗಿದೆ, ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಮತ್ತು ಅವರ ದೂರಿನಲ್ಲಿ ಹಲವಾರು ಕಾಣೆಯಾದ ಪ್ರಕರಣಗಳು ಮತ್ತು ಅಸ್ವಾಭಾವಿಕ ಸಾವುಗಳ ಬಗ್ಗೆಯೂ ಮಾತನಾಡುತ್ತಾರೆ ಎಂದು ದೂರುದಾರರು ಹೇಳಿಕೊಂಡಿದ್ದಾರೆ.

ಕೊಲೆ, ಅತ್ಯಾಚಾರ ಪ್ರಕರಣಗಳು ತನಿಖೆಗೆ ಒತ್ತಾಯ: ಹಲ ಕುಟುಂಬಗಳು ತಮ್ಮ ಮಕ್ಕಳ ನಾಪತ್ತೆ, ಸಾವಿನ ಪ್ರಕರಣವನ್ನು ದಾಖಲಿಸಲು ಹೋದಾಗ ಪೊಲೀಸರಿಂದ ಸರಿಯಾದ ಪ್ರತಿಕ್ರಿಯೆ ನಿರಾಕರಿಸಲಾಗಿದೆ ಎಂಬ ಆರೋಪಗಳಿವೆ. ಇದೇ ಕಾರಣಕ್ಕೆ ಧರ್ಮಸ್ಥಳ ವ್ಯಾಪ್ತಿಯಲ್ಲಿ ಮಹಿಳೆಯರು ಮತ್ತು ವಿದ್ಯಾರ್ಥಿಗಳ ನಾಪತ್ತೆ ಪ್ರಕರಣಗಳು, ಅಸ್ವಾಭಾವಿಕ ಸಾವುಗಳು, ಕೊಲೆಗಳು ಮತ್ತು ಅತ್ಯಾಚಾರ ಪ್ರಕರಣಗಳ ಸಂಪೂರ್ಣ ಮತ್ತು ಪಕ್ಷಪಾತವಿಲ್ಲದ ತನಿಖೆಗಾಗಿ ಹಿರಿಯ ಪೊಲೀಸ್ ಅಧಿಕಾರಿಗಳ ಎಸ್‌ಐಟಿ ತಂಡ ರಚಿಸಬೇಕು ಎಂದು ಎಂದು ಡಾ.ಚೌಧರಿ ಹೇಳಿದ್ದಾರೆ.

ಹೃದಯಾಘಾತದಿಂದ ಸಾವು

ಚಿಕ್ಕಮಗಳೂರು: ಹೃದಯಾಘಾತದಿಂದ 50 ವರ್ಷದ ಗೃಹಿಣಿಯೊಬ್ಬರು ಮೃತಪಟ್ಟ ಘಟನೆ ಜಿಲ್ಲೆಯ ಮೂಡಿಗೆರೆ ತಾಲೂಕಿನ ಮುತ್ತಿಗೆಪುರ ಗ್ರಾಮದಲ್ಲಿ ಸೋಮವಾರ ಬೆಳಕಿಗೆ ಬಂದಿದೆ. ಮುತ್ತಿಗೆಪುರ ಗ್ರಾಮದ ಗೋಪಾಲ್ ಅವರ ಪತ್ನಿ ಲಲಿತಾ (50) ಮೃತ ಗೃಹಿಣಿ. ಮೃತದೇಹ ಮನೆಯ ಬಾಗಿಲ ಬಳಿ ಪತ್ತೆಯಾಗಿದೆ. ಘಟನೆಯ ಸಮಯ ಲಲಿತಾ ಮನೆಯಲ್ಲಿ ಒಬ್ಬರೇ ಇದ್ದರು. ಪತಿ ಗೋಪಾಲ್ ಭಾನುವಾರ ರಾತ್ರಿ ಕಾರು ಬಾಡಿಗೆಗಾಗಿ ಮನೆ ಬಿಟ್ಟು ಹೊರ ಹೋಗಿದ್ದರು. ಪಕ್ಕದ ಮನೆಯವರು ಸೋಮವಾರ ಬೆಳಗ್ಗೆ ಶವ ಕಂಡ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಕರಡಿ ದಾಳಿ: ವ್ಯಕ್ತಿ ಸಾವು

ಚಾಮರಾಜನಗರ: ಕರಡಿ ದಾಳಿಗೆ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಸೋಮವಾರ ಜರುಗಿದೆ. ಬಿಳಿಗಿರಿರಂಗನ ಬೆಟ್ಟದ ಸೀಗೆಬೆಟ್ಟ ಪೋಡಿನ ನಿವಾಸಿ ಸಿದ್ದೇಗೌಡ (30) ಮೃತ ದುರ್ದೈವಿಯಾಗಿದ್ದಾರೆ. ಅರಣ್ಯ ಪ್ರದೇಶದ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಸೋಮವಾರ ಮಧ್ಯಾಹ್ನ ತೆರಳಿದ ಸಮಯದಲ್ಲಿ ನೇರಿಗೇರಿ ಎಂಬ ಅರಣ್ಯ ಪ್ರದೇಶದಲ್ಲಿ ಇವರ ಮೇಲೆ ಕರಡಿ ದಾಳಿ ಮಾಡಿ ಸ್ಥಳದಲ್ಲೇ ಇವರು ಮೃತಪಟ್ಟಿದ್ದಾರೆ.

ಮನೆ ಜಪ್ತಿ ಮಾಡಿದ ಫೈನಾನ್ಸ್ ಸಿಬ್ಬಂದಿ

ರಾಮನಗರ: ಸಕಾಲದಲ್ಲಿ ಸಾಲ ಮರು ಪಾವತಿಸಿಲ್ಲ ಎಂದು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಸಂಸ್ಥೆಯು ಪಟ್ಟಣದ ತೊರೆದೊಡ್ಡಿ (ಇಟ್ಟಮಡು) ಗ್ರಾಮದ ಮನೆಯೊಂದಕ್ಕೆ ಬೀಗ ಜಡಿದು ಜಪ್ತಿ ಮಾಡಿದೆ. ನ್ಯಾಯಾಲಯದ ಜಪ್ತಿ ಆದೇಶ ಹಿಡಿದು ಪೊಲೀಸರೊಂದಿಗೆ ಗ್ರಾಮಕ್ಕೆ ಬಂದ ಫೈನಾನ್ಸ್ ಸಿಬ್ಬಂದಿ ಅಲಮೇಲಮ್ಮ ಅವರ ಮನೆ ಜಪ್ತಿ ಮಾಡಿ ಬೀಗ ಜಡಿದರು. ಮನೆ ಜಪ್ತಿ ನೋಟಿಸ್ ಅನ್ನು ಮನೆಗೆ ಅಂಟಿಸಲಾಗಿದೆ. ಸಂಸ್ಥೆಯಿಂದ ಗೃಹಸಾಲ ಪಡೆದಿದ್ದ ಗ್ರಾಮದ ಅಲಮೇಲಮ್ಮ ಸಕಾಲದಲ್ಲಿ ತೀರಿಸಿರಲಿಲ್ಲ. ನಾಲ್ಕು ಸಲ ನೋಟಿಸ್ ನೀಡಲಾಗಿತ್ತು ಎಂದು ಎಂದು ಫೈನಾನ್ಸ್ ಸಿಬ್ಬಂದಿ ತಿಳಿಸಿದರು

ಜಿಲ್ಲಾ ಕಾಂಗ್ರೆಸ್‌ನಿಂದ ಲಿಂಗರಾಜ್ ಉಚ್ಚಾಟನೆ

ಕಲಬುರಗಿ: ಮಾದಕದ್ರವ್ಯ ಸಾಗಾಟದಲ್ಲಿ ಮಹಾರಾಷ್ಟ್ರ ಪೊಲೀಸರು ಬಂಧಿಸಿದ ಬೆನ್ನಲ್ಲೇ ಕಲಬುರಗಿ ದಕ್ಷಿಣ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗರಾಜ್ ಕಣ್ಣಿಯನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ರಾಜ್ಯಮಟ್ಟದಲ್ಲಿ ಭಾರೀ ಸುದ್ದಿ ಆಗುತ್ತಿದ್ದಂತೆ ಎಚ್ಚೆತ್ತ ಜಿಲ್ಲಾ ಕಾಂಗ್ರೆಸ್ ಸಮಿತಿ ಪಕ್ಷದಿಂದ ಉಚ್ಚಾಟಿಸಿ ಆದೇಶ ಹೊರಡಿಸಿದ್ದು, ತಕ್ಷಣವೇ ಜಾರಿಗೆ ಬರುವಂತೆ ಪಕ್ಷದಿಂದ ಉಚ್ಚಾಟಿಸಲಾಗಿದೆ. ಕಲಬುರಗಿ ದಕ್ಷಿಣ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಲಿಂಗರಾಜ ಕಣ್ಣಿ ಇವರು ಮಾದಕ ದ್ರವ್ಯ ಸಾಗಾಣಿಕೆಯಲ್ಲಿ ಭಾಗಿಯಾಗಿದ್ದಾರೆಂದು ಆರೋಪ ಬಂದ ಹಿನ್ನೆಲೆ ತಕ್ಷಣವೇ, ಇವರನ್ನು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಜಗದೇವ್ ಗುತ್ತೇದಾರ್ ಆದೇಶಿಸಿದ್ದಾರೆ.

ಎಂಆರ್‌ಪಿಎಲ್ ಅವಘಡ: ದೂರು

ಸುರತ್ಕಲ್: ಎಂಆರ್‌ಪಿಎಲ್ ಸ್ಥಾವರದಲ್ಲಿ ಶನಿವಾರ ಸಂಭವಿಸಿದ ದುರಂತದಲ್ಲಿ ಮೃತಪಟ್ಟಿರುವ ಕಾರ್ಮಿಕ ದೀಪ್‌ಚಂದ್ರ ಬಾರ್ತಿಯ ಅವರ ಪತ್ನಿ ನೀಡಿದ ದೂರಿನ ಮೇರೆಗೆ ಎಂಆರ್‌ಪಿಎಲ್‌ನ 6 ಮಂದಿ ಅಧಿಕಾರಿಗಳ ವಿರುದ್ಧ ಸುರತ್ಕಲ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅನಿಲ ಸೋರಿಕೆ ಕುರಿತಂತೆ ಪರಿಶೀಲಿಸಲು ತೆರಳಿದ್ದಾಗ ದೀಪ್ಚಂದ್ರ, ಬಾರ್ತಿಯ ಹಾಗೂ ಇಜಿಲ್ ಪ್ರಸಾದ್ ಗ್ಯಾಸ್‌ನ ಘಾಟು ವಾಸನೆಗೆ ಉಸಿರುಗಟ್ಟಿ ಮೃತಪಟ್ಟಿದ್ದರು. ಸುರತ್ಕಲ್ ಉಪತಹಸೀಲ್ದಾರರು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದು ಜಿಲ್ಲಾಧಿಕಾರಿಗಳಿಗೆ ಪ್ರಥಮ ಮಾಹಿತಿ ನೀಡಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
15.07.2025
ಮಂಗಳವಾರದ ಅತಿಥಿ

ಶ್ರೀ ನವೀನ್ ಎಲ್ಲಂಗಳ
ವಿಷಯ
ಮಕ್ಕಳ ಮೇಲೆ ಸಾಮಾಜಿಕ ಜಾಲತಾಣಗಳ ಪ್ರಭಾವ
vishwavani.news

ಫನ್‌ತರಂಗ
- ರಘುಪತಿ ಶೃಂಗೇರಿ -

ಸಿಗಂದೂರು ಸೇತುವೆ ಉದ್ಘಾಟನೆ, ರಾಜಕೀಯ ಪಕ್ಷಗಳ ಗೊಂದಲದ ಹೇಳಿಕೆಗಳು
ಸುದ್ದಿ



ಯಾವ ಕ್ರಾಂತಿಯೂ ಇಲ್ಲ, ಬರೀ ಶಾಂತಿ: ರಾಮಲಿಂಗಾರೆಡ್ಡಿ

ಮೈಸೂರು: ಸೆಪ್ಟಂಬರ್ ತಿಂಗಳಲ್ಲಿ ಯಾವ ಕ್ರಾಂತಿಯೂ ಇಲ್ಲ. ಎಲ್ಲಾ ಬರೀ ಶಾಂತಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಎಲ್ಲದಕ್ಕೂ ತೆರೆ ಎಳೆದ ಮೇಲೆ ಬೇರೇನೂ ಇಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಾನೇ ಐದು ವರ್ಷ ಸಿಎಂ ಎಂದು ಹೇಳಿ ಎಲ್ಲಾ ವಿಚಾರಗಳಿಗೂ ಕೊನೆ ಹಾಡಿದ್ದಾರೆ. ಸಚಿವರು, ಶಾಸಕರು ನಾಯಕತ್ವ ವಿಚಾರದಲ್ಲಿ ಮಾತನಾಡದಂತೆ ಸೂಚಿಸಲಾಗಿದೆ. ಹೀಗಿರುವಾಗ ಯಾವ ಸೆಪ್ಟಂಬರ್‌ನಲ್ಲಿ ಯಾವ ಕ್ರಾಂತಿಯೂ ನಡೆಯಲ್ಲ ಎಂದರು.

ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ಯಾವ ವಿಚಾರವನ್ನೂ ಹೇಳಿಲ್ಲ. ಅಲ್ಲಿ ಏನಾಗಿದೆ ಎಂಬುದು ತಿಳಿಯದು. ಎಲ್ಲರೂ ಒಂದೇ ಬಾರಿ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ. ಮುಂದೆ ಅವಕಾಶ ದೊರೆಯಬಹುದು. ಡಿ.ಕೆ. ಶಿವಕುಮಾರ್ ಹುಟ್ಟು ಕಾಂಗ್ರೆಸ್ಸಿಗ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಶ್ರಮವಹಿಸಿದ್ದಾರೆ. ಅದೇ ರೀತಿ ಸಿದ್ದರಾಮಯ್ಯ ಅವರು ಒಳ್ಳೆಯ ನಾಯಕ. ಸಿದ್ದರಾಮಯ್ಯ ಅವರಿಂದ ಅಭಿವೃದ್ಧಿ ಆಗಿದೆಯೋ, ಇಲ್ಲವೋ ನೀವೇ ಹೇಳಬೇಕೆಂದು ಮಾಧ್ಯಮದವರನ್ನು ಪ್ರಶ್ನಿಸಿದರು.

ಸಾರಿಗೆ ನೌಕರರ ಬೇಡಿಕೆಗಳನ್ನು ಈಡೇರಿಸಲಾಗುತ್ತಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಒಂದು ಬೇಡಿಕೆ ಬಾಕಿ ಇದೆ. ಉಳಿದಂತೆ ಎಲ್ಲಾ ಬೇಡಿಕೆಗಳನ್ನು ಸರಕಾರ ಈಡೇರಿಸಿದೆ. ಬಿಜೆಪಿ ಸರಕಾರ ಇದ್ದಾಗ ಎರಡು-ಮೂರು ತಿಂಗಳಿಗೊಮ್ಮೆ ಸಂಬಳ ನೀಡಲಾಗುತ್ತಿತ್ತು. ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರತಿ ತಿಂಗಳು ವೇತನ ನೀಡಲಾಗುತ್ತಿದೆ. ಶಕ್ತಿ ಯೋಜನೆಯಿಂದ ಸಂಸ್ಥೆಗೂ ಆದಾಯ ಬರುತ್ತಿದೆ. 5,800 ಕೋಟಿ ರು. ಶಕ್ತಿ ಯೋಜನೆಗೆ ನೀಡಲಾಗಿದೆ. ಮಹಿಳೆಯರಿಗೆ ಇದರಿಂದ ತುಂಬಾ ಅನುಕೂಲವಾಗಿದೆ.

- ರಾಮಲಿಂಗಾರೆಡ್ಡಿ ಸಚಿವ

ಸುರ್ಜೇವಾಲ ಚರ್ಚೆಗೆ ವಿಶೇಷ ಅರ್ಥ ಬೇಕಿಲ್ಲ

ತುಮಕೂರು: ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ ಶಾಸಕರೊಂದಿಗೆ ಚರ್ಚೆ ನಡೆಸಿದ್ದು, ಏನಾದರೂ ಅನುದಾನ ಕೊರತೆಗಳಿದ್ದರೆ ಆ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಿದ್ದಾರೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸ್ವಾಭಾವಿಕವಾಗಿ ರಾಜಕೀಯವಾಗಿ ಎರಡು ಅಭಿಪ್ರಾಯಗಳು ಇದ್ದೇ ಇರುತ್ತವೆ. ಇದು ಎಲ್ಲ ಪಕ್ಷಗಳಲ್ಲೂ ಸರ್ವೇ ಸಾಮಾನ್ಯ. ಸುರ್ಜೇವಾಲ ಅವರು ಶಾಸಕರೊಂದಿಗೆ ಸಭೆ ನಡೆಸುತ್ತಿರುವುದು ಕ್ಷೇತ್ರಗಳ ಅಭಿವೃದ್ಧಿ ವಿಚಾರದ ಕುರಿತು ಮಾಹಿತಿ ಪಡೆದುಕೊಳ್ಳಲು ಅಷ್ಟೇ ಎಂದರು. ಪೊಲೀಸ್ ಇಲಾಖೆಯಲ್ಲಿ ಮೂರು ಪಾಳಿಯಲ್ಲಿ ಕೆಲಸ ಮಾಡಿಸುವ ಬಗ್ಗೆ ಇನ್ನು ಮಾತುಕತೆ ನಡೆಸಲಾಗುತ್ತಿದೆ. ಎಲ್ಲ ಸಾಧಕ-ಬಾಧಕಗಳನ್ನು ಪರಿಶೀಲನೆ ಮಾಡಿ ನಂತರ ಆ ಬಗ್ಗೆ ನಿರ್ಧಾರ ಮಾಡಲಾಗುವುದು ಎಂದು ಹೇಳಿದರು.

ಸಿಗಂದೂರು ಸೇತುವೆ ಉದ್ಘಾಟನೆಗೆ ಯಾರ ವಿರೋಧವೂ ಇಲ್ಲ. ಇದು ಕೇಂದ್ರದ ಯೋಜನೆಯಾಗಿರುವುದರಿಂದ ಅವರೇ ಬಂದು ಉದ್ಘಾಟನೆ ಮಾಡಲು ಮುಂದಾಗಿದ್ದಾರೆ. ಈ ಉದ್ಘಾಟನೆಯನ್ನು ಮುಂದಕ್ಕೆ ಹಾಕಿ ಎಂದಷ್ಟೇ ಮುಖ್ಯಮಂತ್ರಿಗಳು ಪತ್ರ ಬರೆದಿದ್ದರೂ ಪ್ರಯೋಜನವಾಗಿಲ್ಲ. ಸಾಮಾನ್ಯವಾಗಿ ಕೇಂದ್ರ ಸರಕಾರದ ಯೋಜನೆಗಳಲ್ಲಿ ನಮ್ಮದೂ ಪಾಲು ಇರುತ್ತದೆ. ಕೇಂದ್ರ ಒಂದೇ ಮಾಡಲು ಸಾಧ್ಯವಿಲ್ಲ. ಎರಡು ಒಟ್ಟಿಗೆ ಕೆಲಸ ಮಾಡಬೇಕಾಗುತ್ತದೆ.

-ಪರಮೇಶ್ವರ ಗೃಹ ಸಚಿವ

ಬಾಗಲಕೋಟೆ ಪಂಚಮಸಾಲಿ ಮಹಾಪೀಠದ ಗೇಟಿಗೆ ಬೀಗ

ಬಾಗಲಕೋಟೆ: ಜಿಲ್ಲೆಯ ಕೂಡಲಸಂಗಮದ ಪಂಚಮಸಾಲಿ ಪೀಠದ ವಿವಾದ ಮತ್ತೊಮ್ಮೆ ಭುಗಿಲೆದ್ದಿದೆ. ಪಂಚಮಸಾಲಿ ಪೀಠದ ಗೇಟಿಗೆ ಬೀಗ ಜಡೆಯಲಾಗಿದ್ದು, ಪೀಠದ ಸುತ್ತಲೂ ಬಿಗಿ ಪೊಲೀಸ್ ಬಂದೋ ಬಸ್ತ್ ವ್ಯವಸ್ಥೆ ಮಾಡಲಾಗಿದೆ .

ಕೂಡಲಸಂಗಮದಲ್ಲಿರುವ ಪಂಚಮಸಾಲಿ ಪೀಠಕ್ಕೆ ಬೀಗ ಹಾಕಿರುವುದು.

ಕೆಲ ದಿನಗಳ ಹಿಂದೆ ಪಂಚಮಸಾಲಿ ಪೀಠಾಧ್ಯಕ್ಷರ ಬದಲಾವಣೆಯ ಮಾತುಗಳು ಕೇಳಿ ಬಂದಿದ್ದವು. ಅಂದಿನಿಂದ ಪೀಠದ ಜಗದ್ಗುರುಗಳಾದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಪೀಠದಲ್ಲಿ ತೀರ ವಿರಳವಾಗಿ ಕಾಣಿಸಿಕೊಳ್ಳುತ್ತಿದ್ದರು. ಇದರ ನಡುವೆ ಭಾನುವಾರ ತಡರಾತ್ರಿ ಪೀಠದ ಗೇಟ್ ಸೇರಿದಂತೆ ವಿವಿಧೆಡೆ ಬೀಗ ಜಡೆಯಲಾಗಿದೆ.

ಕಳೆದ ಕೆಲವು ದಿನಗಳ ಹಿಂದೆ ಶುರುವಾಗಿದ್ದ ಹೊಸ ಪೀಠದ ಚರ್ಚೆಗಳು ಪ್ರಾರಂಭವಾಗಿದ್ದವು. ಆ ಸಂದರ್ಭದಲ್ಲಿ ಪ್ರಸಂಗ ಬಂದರೆ ಪೀಠಾಧ್ಯಕ್ಷರನ್ನು ಬದಲಾವಣೆ ಮಾಡುತ್ತೇವೆ ಎಂದು ಪಂಚಮಸಾಲಿ ರಾಷ್ಟ್ರೀಯ ಅಧ್ಯಕ್ಷ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ.

ಈ ಸಂದರ್ಭದಲ್ಲಿ ಗದಗ ಜಿಲ್ಲೆಯ ಮಲಪ್ರಭಾ ತೀರದಲ್ಲಿ ಹೊಸ ಪಂಚಮಸಾಲಿ ಪೀಠ ಕಟ್ಟಿಸಿಕೊಡುತ್ತೇವೆ ಎಂದು ಮಾಜಿ ಸಚಿವ ಸಿ.ಸಿ.ಪಾಟೀಲ ಹೇಳಿದ್ದರು. ಜತೆಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿಷಯದಲ್ಲಿ ಕಾಶಪ್ಪನವರ- ಬಸವಜಯ ಮೃತ್ಯುಂಜಯ ಶ್ರೀಗಳ ನಡುವೆ ಬಿರುಕು ಮೂಡಿತ್ತು.

ನನಗೆ ಮಾಹಿತಿ ಇಲ್ಲ: ಗುರು ಪೂರ್ಣಿಮಾದ ಬಳಿಕ ನಾನು ಪೀಠಕ್ಕೆ ಹೋಗಿಲ್ಲ. ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಹೋರಾಟದ ಅಂಗವಾಗಿ ವಿಜಯಪುರದಲ್ಲಿ ನಡೆದ ವಕೀಲ ಪರಿಷತ್ ಸಭೆಯಲ್ಲಿ ಪಾಲ್ಗೊಂಡಿದ್ದೇನೆ. ನನಗೆ ಪೀಠಕ್ಕೆ ಬೀಗ ಹಾಕಿರುವ ಬಗ್ಗೆ ಮಾಹಿತಿ ಇಲ್ಲ. ಪೊಲೀಸರು ತನಿಖೆ ಮಾಡಿ ಬೀಗ ಹಾಕಿದವರು ಯಾರು ಎಂದು ಕಂಡುಹಿಡಿಯಬೇಕು ಎಂದು ಪೀಠದ ಜಗದ್ಗುರುಗಳಾದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಯುವಜನತೆಯ ಸದ್ಬಳಕೆ ದೇಶದ ಅಭಿವೃದ್ಧಿಗೆ ರಹದಾರಿ

ಶ್ರೀಮತಿ ಶಿವಕಾಂತಮ್ಮ (ಕಾಂತಾ) ನಾಯಕ
ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು

ಒಂದು ದೇಶದ ಶಕ್ತಿಯೇ ಯುವಜನತೆ, ದೇಶವು ಅಭಿವೃದ್ಧಿಯಾಗಬೇಕಾದರೆ ಯುವಜನತೆಯ ಪಾತ್ರವು ಅಗಾಧ. ಉದ್ಯೋಗದಲ್ಲಿ ತೊಡಗಿಕೊಳ್ಳುವ ಯುವಕ-ಯುವತಿಯರು ವಿವಿಧ ರೀತಿಯ ಕೌಶಲ್ಯವನ್ನು ಹೊಂದಿರುವುದು ಅತ್ಯಗತ್ಯ. ಆದರೆ ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಕೌಶಲ್ಯದ ಕೊರತೆಯಿಂದಾಗಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುತ್ತಿದೆ. ಹೀಗಾಗಿ ಯುವಕರನ್ನು ಕೌಶಲ್ಯಭರಿತವಾದ ತರಬೇತಿಯೊಂದಿಗೆ ಸಜ್ಜುಗೊಳಿಸಬೇಕಿದೆ. ಈ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ವರ್ಷ ಜುಲೈ 15 ರಂದು ವಿಶ್ವ ಯುವ ಕೌಶಲ್ಯ ದಿನವನ್ನು ಆಚರಿಸಲಾಗುತ್ತಿದೆ. ನಿರುದ್ಯೋಗ ಸವಾಲುಗಳನ್ನು ಕಡಿಮೆ ಮಾಡಿ ಉದ್ಯೋಗಾಧಾರಿತ ಕೌಶಲ್ಯವನ್ನು ಉತ್ತೇಜಿಸಲು ವಿಶ್ವದಾದ್ಯಂತ ಯುವಜನರಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ ಈ ದಿನವು ಮಹತ್ವದ್ದಾಗಿದೆ. ಇದು ಕೇವಲ ಒಂದು ದಿನದ ಆಚರಣೆಯಾಗದೇ, ಯುವಜನತೆಗೆ ಸೃಜನಶೀಲತೆ, ಉದ್ಯಮಶೀಲತೆ ಮತ್ತು ಉದ್ಯೋಗದತ್ತ ಹೊರಳಲು ಪ್ರತಿಜ್ಞೆ ವಹಿಸುವ ಮಹತ್ವದ ಘಟ್ಟ, ಪ್ರಪಂಚದಾದ್ಯಂತ ಯುವಕರು ಇಂದು ಅವರ ಪೋಷಕರು ಎದುರಿಸಿದ ಸವಾಲುಗಳಿಗಿಂತ ಭಿನ್ನವಾದ ಕೌಶಲ್ಯ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದಂತೆ ಗಂಭೀರ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಆಧುನಿಕ ಉದ್ಯೋಗಗಳಿಗೆ ಯುವಕರನ್ನು ಸಿದ್ಧಪಡಿಸುವುದು ಬಹಳ ಕ್ಲಿಷ್ಟಕರವಾದ ವಿಷಯ. ಆದರೆ ಅದು ಇಂದಿನ ಅಗತ್ಯವೂ ಆಗಿದೆ. ಇದಕ್ಕೆ ಪೂರಕವಾಗಿ ಕರ್ನಾಟಕದಲ್ಲಿ ಹಲವು ಕೌಶಲ್ಯ ಅಭಿವೃದ್ಧಿ ತರಬೇತಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಆ ಮೂಲಕ ದೇಶದಲ್ಲಿ ಮಾದರಿ ರಾಜ್ಯವಾಗಿ ಹೊರಹೊಮ್ಮಿದೆ.

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಮತ್ತು ಉಪಮುಖ್ಯಮಂತ್ರಿಗಳಾದ ಡಿ. ಕೆ. ಶಿವಕುಮಾರ್, ಸಚಿವರಾದ ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲ್ ರವರ ಸಹಕಾರದೊಂದಿಗೆ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಹಲವಾರು ಹೊಸ ಯೋಜನೆಗಳು, ತರಬೇತಿಗಳು ಮತ್ತು ಉದ್ಯೋಗ ಸಂಪರ್ಕ ಕಾರ್ಯಕ್ರಮಗಳ ಮೂಲಕ ಯುವಕರಿಗೆ ಜೀವನ ರೂಪಿಸುವ ಶಕ್ತಿಯನ್ನು ನೀಡುತ್ತಿದೆ. ಸರಕಾರದ ಗ್ಯಾರಂಟಿ ಯೋಜನೆಯಾದ ಯುವನಿಧಿ ಪ್ಲಸ್ ಯೋಜನೆಯಡಿ ಸಾವಿರಾರು ಯುವಕರಿಗೆ ಕೈಗಾರಿಕಾ ತರಬೇತಿ ನೀಡಲಾಗುತ್ತಿದ್ದು, ಈ ತರಬೇತಿ ಹೊಸ ತಂತ್ರಜ್ಞಾನಗಳಲ್ಲಿ (AL, Robotics, Future Skills) ನಡೆಯುತ್ತಿರುವುದು ಗಮನಾರ್ಹ.

ಕಲಿಕೆ ಜತೆ ಕೌಶಲ್ಯ ಯೋಜನೆಯಡಿ ಪದವಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜತೆಗೆ ಕೈಗಾರಿಕಾ ಕೌಶಲ್ಯ ನೀಡಲಾಗುತ್ತಿದೆ. ಈಗಾಗಲೇ 2023-24 ನೇ ಸಾಲಿನಿಂದ ಇಲ್ಲಿಯವರೆಗೆ 63000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದ್ದು, ಉನ್ನತ ಶಿಕ್ಷಣದ ಜತೆಗೆ ಉದ್ಯೋಗಪಾತ್ರತೆ ಹೆಚ್ಚಿಸುವ ನಿಟ್ಟಿನಲ್ಲಿ ಇದು ಹೊಸ ಪ್ರವೃತ್ತಿಯಾಗಿದೆ.

'ನನ್ನ ವೃತ್ತಿ ನನ್ನ ಆಯ್ಕೆ' ಎಂಬ ಕಾರ್ಯಕ್ರಮವು 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳಿಗೆ ವೃತ್ತಿ ಆಯ್ಕೆ ಬಗ್ಗೆ ಸ್ಪಷ್ಟತೆ ನೀಡುತ್ತಿದೆ. ಈ ಮೂಲಕ ಮಕ್ಕಳು ತನ್ನ ಇಚ್ಛೆಯ ಉದ್ದೇಶಗಳನ್ನು ಇನ್ನಷ್ಟು ಸುಲಭವಾಗಿ ರೂಪಿಸಿಕೊಳ್ಳಲು ಸಹಾಯಕವಾಗುತ್ತಿದೆ. ರಾಜ್ಯಾದ್ಯಂತ ನಡೆದ ಉದ್ಯೋಗ ಮೇಳಗಳ ಮುಖಾಂತರ ಹೆಚ್ಚು ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗದ ಅವಕಾಶ ಕಲ್ಪಿಸಿಕೊಡಲು ನಿಗಮವು ಶ್ರಮಿಸುತ್ತಿದೆ.

2024ನೇ ಸಾಲಿನಲ್ಲಿ ನಡೆದ ಇಂಡಿಯಾ ಸ್ಕಿಲ್ ಸ್ಪರ್ಧೆಯಲ್ಲಿ ಕರ್ನಾಟಕವು ಪದಕಗಳನ್ನು ಗೆಲ್ಲುವ ಮೂಲಕ ರಾಷ್ಟ್ರದ 2ನೇ ರಾಜ್ಯವಾಗಿ ಹೊರಹೊಮ್ಮಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡ 4 ಮೆಡಲಿಯನ್ ಆಫ್ ಎಕ್ಸಲೆನ್ಸ್‌ಗಳನ್ನು ರಾಜ್ಯದ ಯುವಕರಿಗೇ ನೀಡಲಾಗಿದೆ. ಈ ಕೌಶಲ್ಯ ಸ್ಪರ್ಧೆಗಳು ಯುವಕರಲ್ಲಿ ತಂತ್ರಜ್ಞಾನದ ಜ್ಞಾನ, ನಿಯೋಜನಾ ನೈಪುಣ್ಯತೆ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕತೆ ಒದಗಿಸುತ್ತದೆ. ಅಂತಾರಾಷ್ಟ್ರೀಯ ವಲಸೆ ಕೇಂದ್ರ-ಕರ್ನಾಟಕ ಯೋಜನೆಯಡಿ ಸುಮಾರು 1000ಕ್ಕೂ ಅಧಿಕ ಯುವಕರಿಗೆ ವಿದೇಶದಲ್ಲಿ ಉದ್ಯೋಗಕ್ಕೆ ಅವಕಾಶ ಕಲ್ಪಿಸಲಾಗಿದೆ. ಜತೆಗೆ ಪ್ರಿ ಆಂಡ್ ಡಿಪಾರ್ಟ್ ಓರಿಯೆಂಟೆಂಡ್ ಟ್ರೈನಿಂಗ್ ಎಂಬ ಸುರಕ್ಷಿತ ಪ್ರಕ್ರಿಯೆಯ ಮೂಲಕ ವಿದೇಶಿಯ ಕಾರ್ಮಿಕ ಅವಧಾನ ಮತ್ತು ಜಾಗೃತಿಯನ್ನು ಸಹ ಕಲಿಸುತ್ತಿದೆ. ನಲ್-ಜಲ್ ಮಿತ್ರ ಯೋಜನೆಯ ಮೂಲಕ ಗ್ರಾಮೀಣ ಭಾಗದ ಮಹಿಳೆಯರಿಗೆ ಅಡುಗೆ ಮನೆಯಿಂದ ಅಂತರೀಕ್ಷದವರೆಗೂ ಎಂಬ ಪರಿಕಲ್ಪನೆಯಡಿ ಅಸಾಧಾರಣ ಕೌಶಲ್ಯವನ್ನು ಕಲಿಸಿ ಆರ್ಥಿಕವಾಗಿ ಸದೃಢ ಪಡಿಸುವಲ್ಲಿ ನಿಗಮವು ಶ್ರಮವಹಿಸುತ್ತಿದೆ.



ವಿಶ್ವ ಕೌಶಲ್ಯ ದಿನದ ಪಾಠ ಬಹುಪಾಲು ರಾಷ್ಟ್ರಗಳಿಗೆ ಯುವಶಕ್ತಿಯ ಹಕ್ಕು ಮತ್ತು ಹೊಣೆಗಾರಿಕೆ ಬಗ್ಗೆ ನೆನಪಿಸುತ್ತಿದೆ. ಆದರೆ ಕರ್ನಾಟಕ ಈ ದಿನವನ್ನು ಕೇವಲ ಆಚರಣೆಯಾಗಿ ತೆಗೆದುಕೊಳ್ಳದೇ, ಎಲ್ಲ ವಿಭಾಗಗಳೊಳಗಿನ ಸಜೀವ ಯೋಜನೆಗಳ ಮೂಲಕ ಕೌಶಲ್ಯವಂತ ಕರ್ನಾಟಕದ ಭವಿಷ್ಯವನ್ನು ನಿರ್ಮಿಸುತ್ತಿದೆ. ಇದು ನಮ್ಮ ನಾಡಿನ ನವೋದ್ಯಮದ ನಕ್ಷೆ. ಯುವಕರಿಗೆ ಕೌಶಲ್ಯ ನೀಡುವುದು ಕೇವಲ ತರಬೇತಿಯಾಗಿರಬಾರದು, ಅದು ಅವರ ಜೀವನಕ್ಕೆ ಉಜ್ವಲ ದಿಕ್ಕು ನೀಡಬೇಕು. ಕರ್ನಾಟಕ ಈಗಲೇ ಆ ದಿಕ್ಕಿನಲ್ಲಿ ನಡಿಗೆಯಿಟ್ಟಿದೆ.

ಕೌಶಲ್ಯ ಎಂಬುದು ಪ್ರತಿ ಹೆಜ್ಜೆಯಲ್ಲೂ ಹೊಸತನ ಸಾಧಿಸುವುದು, ಚಲನಶೀಲವಾದುದು, ನಿರಂತರ ಪರಿಷ್ಕರಣೆಯಾಗುವಂತಹದ್ದು, ಇಂದಿನ ಕೆಲಸಗಳನ್ನು ನಿನ್ನೆಯ ವಿಧಾನಗಳ ಮೂಲಕ ಮಾಡಿ ನಾಳೆ ವ್ಯವಹಾರ ಮಾಡಲಾಗದು ಎಂಬುದು ಉದ್ಯಮ ಜಗತ್ತಿನ ಮಾರ್ಗದರ್ಶಿ ಸೂತ್ರ. ನಿರಂತರ ಕಲಿಕೆ, ಅನ್ವೇಷಣೆ ಹಾಗೂ ಅಳವಡಿಕೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಶಸ್ಸಿನ ಕೀಲಿಕೈ.

ಯುವ ಜನರಲ್ಲಿ ಕೌಶಲ್ಯವರ್ಧನೆ ಮಾಡುವ ಮೂಲಕ ಜನಸಂಖ್ಯೆಯನ್ನು ಮಾನವ ಸಂಪತ್ತು ಆಗಿ ಪರಿವರ್ತಿಸಿ ಅಭಿವೃದ್ಧಿಯನ್ನು ಹೊಂದಲು ಸಾಧ್ಯ. ಜ್ಞಾನ ಕ್ಷೇತ್ರದಲ್ಲಿ ಪ್ರಪಂಚ ಇಂದು ಅಪಾರ ಬದಲಾವಣೆಗಳಿಗೆ ಒಳಗಾಗುತ್ತಿದೆ. ಕಲ್ಪನೆಗೂ ಎಟುಕದ ರೀತಿಯ ವೈಜ್ಞಾನಿಕ ಹಾಗೂ ತಾಂತ್ರಿಕ ಮುನ್ನಡೆಗಳ ಕಾಲದಲ್ಲಿ ಸಮಕಾಲೀನ ಕೌಶಲ್ಯವರ್ಧನೆ ಒಟ್ಟು ಬೆಳವಣಿಗೆಯ ಅಡಿಪಾಯವಾಗಿದೆ.

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸುವ ಯೋಚನೆ ಹಾಗೂ ಯೋಜನೆಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಅರ್ಥಶಾಸ್ತ್ರ ನಮಗೆ ತಿಳಿಸುತ್ತದೆ. ಭಾರತ ಈಗ ಜನಸಂಖ್ಯಾ ಹೆಚ್ಚಳದೊಂದಿಗೆ ಬಹು ಮುಖ್ಯ ಅವಕಾಶ ಮತ್ತು ಸವಾಲನ್ನು ತನ್ನದಾಗಿಸಿಕೊಂಡಿದೆ. ಕೆಲಸ ಮಾಡುವ ಪ್ರಾಯ ಹಾಗೂ ಸಾಮರ್ಥ್ಯ ಇರುವ ವಿಪುಲ ಯುವಜನತೆಯ ಸದ್ಬಳಕೆ ನಮ್ಮ ದೇಶದ ಅಭಿವೃದ್ಧಿಗಿರುವ ರಹದಾರಿ.

ಸಮಾಚಾರ ಸಣ್ಣದಲ್ಲ

ಆಕ್ಷೇಪಾರ್ಹ ಬರಹ: ವಿದ್ಯಾರ್ಥಿನಿ ಸೆರೆ

ಉಡುಪಿ: ಹಾಸ್ಟೆಲ್ ಶೌಚಾಲಯದ ಗೋಡೆಗಳ ಮೇಲೆ ಆಕ್ಷೇಪಾರ್ಹ ಮತ್ತು ಪ್ರಚೋದನಕಾರಿ ವಿಷಯವನ್ನು ಬರೆಯುತ್ತಿದ್ದ ಆರೋಪದ ಮೇರೆ ವಿದ್ಯಾರ್ಥಿನಿಯನ್ನು ಬಂಧಿಸಲಾಗಿದೆ. ಉಡುಪಿಯ ಕಾರ್ಕಳ ಗ್ರಾಮೀಣ ಪೊಲೀಸರು ವಿದ್ಯಾರ್ಥಿನಿಯನ್ನು ಬಂಧಿಸಿದ್ದು, ಆರೋಪಿ ವಿದ್ಯಾರ್ಥಿನಿ ಖಾಸಗಿ ಕಾಲೇಜಿನ ಫಾತಿಮಾ ಶಬ್ನಾ (21 ವರ್ಷ) ಎಂದು ಗುರುತಿಸಲಾಗಿದೆ. ಆಕೆಯನ್ನು ಸೋಮವಾರ ಬಂಧಿಸಿ ಕಾರ್ಕಳ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೂಲಗಳ ಪ್ರಕಾರ ಮೇ 7 ರಂದು ಸಂಜೆ 6 ಗಂಟೆ ಸುಮಾರಿಗೆ, ಎರಡು ಸಮುದಾಯಗಳ ನಡುವೆ ದ್ವೇಷವನ್ನು ಹರಡುವ ಉದ್ದೇಶದಿಂದ ಹಾಸ್ಟೆಲ್‌ನ ಕೆಲವು ವಿದ್ಯಾರ್ಥಿಗಳು ಹಾಸ್ಟೆಲ್‌ನ ಶೌಚಾಲಯದ ಗೋಡೆಯ ಮೇಲೆ ಎರಡು ಸಾಲುಗಳ ಆಕ್ಷೇಪಾರ್ಹ ಮತ್ತು ಪ್ರಚೋದನಕಾರಿ ವಿಷಯವನ್ನು ಬರೆದಿದ್ದಾರೆ ಎಂದು ಆರೋಪಿಸಲಾಗಿದೆ. ಕಾರ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ನಿಯಂತ್ರಣ ತಪ್ಪಿ ಜಲಪಾತಕ್ಕೆ ಬಿದ್ದ ಕಾರು

ಹಾಸನ: ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಜಲಪಾತಕ್ಕೆ ಬಿದ್ದಿದ್ದು ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಹಾಸನ ಜಿಲ್ಲೆ ಸಕಲೇಶಪುರ ತಾಲೂಕಿನ ಶಿರಾಡಿಘಾಟ್ ರಸ್ತೆಯಲ್ಲಿ ನಡೆದಿದೆ. ಬೆಂಗಳೂರು ಮೂಲದ ಪ್ರವಾಸಿಗರು ಪ್ರಯಾಣಿಸುತ್ತಿದ್ದ ವೇಳೆ ಜಲಪಾತ ವೀಕ್ಷಣೆಗೆ ಕಾರು ನಿಲ್ಲಿಸುವಾಗ ಚಾಲಕನ ನಿಯಂತ್ರಣ ತಪ್ಪಿ ರಾಷ್ಟ್ರೀಯ ಹೆದ್ದಾರಿ ಪಕ್ಕದ ಫಾಲ್ಸ್‌ಗೆ ಕಾರು ಉರುಳಿ ಬಿದ್ದಿದ್ದು, ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮಲೆನಾಡು ಭಾಗದಲ್ಲಿ ಬಾರಿ ಮಳೆಯಿಂದ ಕಿರು ಜಲಪಾತಗಳು ತುಂಬಿ ಹರಿಯುತ್ತಿದ್ದು, ಬಾರಿ ಅನಾಹುತ ತಪ್ಪಿದಂತಾಗಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ

ಬಿಜೆಪಿ ಅಪಪ್ರಚಾರಕ್ಕೆ ಅಭಿವೃದ್ಧಿ ಮೂಲಕ ಉತ್ತರ

ಬರದ ನಾಡಾಗಿದ್ದ ವಿಜಯಪುರವನ್ನು ಹಸಿರು ನಾಡು ಮಾಡಿದ್ದು ನಾವು: ಮುಖ್ಯಮಂತ್ರಿ ಸಿದ್ದರಾಮಯ್ಯ

ವಿಜಯಪುರ: ನಮ್ಮದು ಅಭಿವೃದ್ಧಿ ಪರವಾದ ಸರಕಾರ ಎನ್ನುವುದಕ್ಕೆ, ಒಂದೇ ದಿನ ಇಂಡಿಯಲ್ಲಿ 4,559 ಕೋಟಿ ರುಪಾಯಿಗಳ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆಯನ್ನು ನೆರವೇರಿಸಿದ ಈ ಕ್ಷಣವೇ ಸಾಕ್ಷಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಶಕ್ತಿ ಯೋಜನೆಯಡಿ 500 ಕೋಟಿ ಬಾರಿ ಮಹಿಳೆಯರು ಉಚಿತ ಪ್ರಯಾಣ ನಡೆಸಿದ ಹಿನ್ನೆಲೆಯಲ್ಲಿ ಕೆ.ಕೆ.ಆರ್.ಟಿ.ಸಿ ಬಸ್‌ಗೆ ಪೂಜೆ ನೆರವೇರಿಸಿ, ಮಹಿಳಾ ಪ್ರಯಾಣಿಕರಿಗೆ ಉಚಿತ ಟಿಕೆಟ್ ವಿತರಿಸಿ, ನಂತರ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ, ಲಿಂಬೆ ಅಭಿವೃದ್ಧಿ ಮಂಡಳಿಯ ಲಾಂಛನ ಬಿಡುಗಡೆಗೊಳಿಸಿ ಮಾತನಾಡಿದರು.

ಬಿಜಾಪುರ ಜಿಲ್ಲೆ ಮೊದಲು ಹೇಗಿತ್ತು? ನಮ್ಮ ಸರಕಾರದಲ್ಲಿ ಮತ್ತು ಹಿಂದಿನ ಕಾಂಗ್ರೆಸ್ ಸರಕಾರಗಳ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಕ್ರಮಗಳ ಪಟ್ಟಿಯನ್ನು ಕೈಯಲ್ಲಿ ಹಿಡಿದು ನೋಡಿ. ಬಿಜಾಪುರ ಜಿಲ್ಲೆಯಲ್ಲಿ ನೀರಾವರಿ ಈ ಮಟ್ಟಕ್ಕೆ ಅಭಿವೃದ್ಧಿಗೊಳಿಸಿ, ಬರದ ನಾಡಾಗಿದ್ದ ಬಿಜಾಪುರವನ್ನು ಹಸಿರು ನಾಡು ಮಾಡಿದ್ದು ನಾವು ಎಂದರು.

500 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿರುವುದು, 1.23 ಕೋಟಿ ಕುಟುಂಬಗಳು ಗೃಹಲಕ್ಷ್ಮಿ ಹಣ ಪಡೆದಿರುವುದು, 1.64 ಕೋಟಿ ಮನೆಗಳಿಗೆ ಉಚಿತವಾಗಿ 200 ಯೂನಿಟ್ ಹಣ ಪಡೆಯುತ್ತಿರುವುದು, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಗಳ ಮೂಲಕ ಕೋಟಿ ಕೋಟಿ ಕನ್ನಡಿಗರ ಬದುಕಿಗೆ ನೆರವಾಗಿರುವುದು ಅಭಿವೃದ್ಧಿ ಅಲ್ಲವೇ ? ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು ಗ್ಯಾರಂಟಿಗಳಲ್ಲದೆ 83 ಸಾವಿರ ಕೋಟಿ ರೂಪಾಯಿ ಹಣ ಅಭಿವೃದ್ಧಿಗೆ ತೆಗೆದಿಟ್ಟುರುವುದು ನಮ್ಮ ಅಭಿವೃದ್ಧಿಪರವಾದ ಆಡಳಿತಕ್ಕೆ ಸ್ಪಷ್ಟ ನಿದರ್ಶನ. ಆದ್ದರಿಂದ ಬಿಜೆಪಿ-ಜೆಡಿಎಸ್ ನ ಸುಳ್ಳು ಆರೋಪಗಳನ್ನು ನಂಬಬೇಡಿ. ನಿಮ್ಮ ಕಣ್ಣೆದುರಿಗೇ ಇರುವ ಅಭಿವೃದ್ಧಿ ಯೋಜನೆಗಳನ್ನು ಬಿಜೆಪಿಯವರ ಮುಖಕ್ಕೆ ಹಿಡಿದು ಉತ್ತರಿಸಿ ಎಂದು ಕರೆ ನೀಡಿದರು.

ಸ್ಥಳೀಯ ಶಾಸಕರಾದ ಯಶವಂತರಾಯಗೌಡ ಪಾಟೀಲ್ ಅವರಿಗೆ ಸರಕಾರದಿಂದ ಹಣ ತಂದು ಕ್ಷೇತ್ರದ ಅಭಿವೃದ್ಧಿ ಮಾಡುವುದು ಹೇಗೆ ಎನ್ನುವುದರಲ್ಲಿ ಬಹಳ ಪ್ರಾಮಾಣಿಕರು ಮತ್ತು ಚಾಣಾಕ್ಷರು. ನಮ್ಮದು ಸರ್ವರ ಅಭಿವೃದ್ಧಿಗೆ ಬದ್ಧವಾಗಿರುವ ಸರಕಾರ ಎಂದರು.

ಸ್ಥಳೀಯ ಶಾಸಕರಾದ ಯಶವಂತರಾಯಗೌಡ ಪಾಟೀಲ್

1. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯನ್ನು ನೆರವೇರಿಸಿದರು . ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಸಿ.ಮಹದೇವಪ್ಪ, ದಿನೇಶ್ ಗುಂಡೂರಾವ್, ಎಂ.ಬಿ.ಪಾಟೀಲ್, ಎಚ್.ಕೆ.ಪಾಟೀಲ್, ಶಿವಾನಂದ ಎಸ್.ಪಾಟೀಲ್, ಶರಣ ಪ್ರಕಾಶ ಪಾಟೀಲ್, ಶಾಸಕ ಯಶವಂತರಾಯಗೌಡ ಪಾಟೀಲ್ ಸೇರಿದಂತೆ ಹಲವು ಮಂದಿ ಶಾಸಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು. 2. ನಿಂಬೆ ನಾಡು ಇಂಡಿಯ ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯಮಂತ್ರಿಗಳು, ನಿಂಬೆ ಅಭಿವೃದ್ಧಿ ಮಂಡಳಿ ಯನ್ನು ಉದ್ಘಾಟಿಸಿದ ಬಳಿಕ ಸ್ಥಳೀಯವಾಗಿ ಬೆಳೆದ ನಿಂಬೆ ಹಣ್ಣಿನ ಪರಿಮಳವನ್ನು ಸವಿದ ಕ್ಷಣ.

ಅಭಿವೃದ್ಧಿ ಯೋಜನೆಗಳು ಶಾಶ್ವತವಾಗಿ ಉಳಿಯುತ್ತವೆ

ಉತ್ತಮ ಹಣ್ಣುಗಳಿರುವ ಗಿಡಕ್ಕೆ ಕಲ್ಲುಗಳು ಬೀಳುವುದು ಸಹಜ. ಹೀಗಾಗಿ ಟೀಕೆಗಳು ಸಹಜ, ಬಿಜೆಪಿ ಟೀಕೆಗಳು ಸಾಯುತ್ತವೆ, ನಮ್ಮ ಅಭಿವೃದ್ಧಿ ಯೋಜನೆಗಳು ಶಾಶ್ವತವಾಗಿ ಉಳಿಯುತ್ತವೆ, ರಾಜ್ಯದ ಐದು ಗ್ಯಾರಂಟಿ ಇಡೀ ದೇಶಕ್ಕೆ ಮಾದರಿಯಾಗಿವೆ. ಬಿಜೆಪಿ ಆಡಳಿತವಿರುವ ರಾಜ್ಯಗಳೇ ಈ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತಿವೆ. ವಿವಿಧ ಭಾಗಗಳಲ್ಲಿ ಸಚಿವ ಸಂಪುಟ ಸಭೆ ನಡೆಸಿ ಆಯಾ ಭಾಗಕ್ಕೆ ನ್ಯಾಯ ಒದಗಿಸಲಾಗಿದ್ದು, ವಿಜಯಪುರ ಜಿಲ್ಲೆಯಲ್ಲೂ ಸಚಿವ ಸಂಪುಟ ಸಭೆ ನಡೆಸಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಸ್ತು ಎನ್ನಲು ಸರಕಾರ ಬದ್ಧವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಹಿರಂಗ ಚರ್ಚೆಗೆ ಬರಲಿ

4157 ಕೋಟಿ ರೂಪಾಯಿ ಮೊತ್ತದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ, 401 ಕೋಟಿ ಮೊತ್ತದ ಕಾಮಗಾರಿ ಉದ್ಘಾಟನೆ ಮಾಡಿದ್ದೇನೆ. ಬಿಜೆಪಿಯವರು ಬಹಿರಂಗ ಚರ್ಚೆಗೆ ಬರಲಿ. ಅಭಿವೃದ್ಧಿಯಲ್ಲಿ ನಮ್ಮ ಸರಕಾರದ ಸಾಧನೆ ಮತ್ತು ಬಿಜೆಪಿ ಸರಕಾರದ ಸಾಧನೆ ಬಗ್ಗೆ ಸಾರ್ವಜನಿಕವಾಗಿ ದಾಖಲೆ ಸಮೇತ ಚರ್ಚೆ ನಡೆಸೋಣ. ಜನರೇ ತೀರ್ಮಾನಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಅವರ ಅಧ್ಯಕ್ಷತೆಯ ಸಮಾರಂಭದಲ್ಲಿ ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಸಿ.ಮಹದೇವಪ್ಪ, ದಿನೇಶ್ ಗುಂಡೂರಾವ್, ಎಂ.ಬಿ.ಪಾಟೀಲ್, ಎಚ್.ಕೆ.ಪಾಟೀಲ್, ಶಿವಾನಂದ ಎಸ್.ಪಾಟೀಲ್, ಶರಣ ಪ್ರಕಾಶ ಪಾಟೀಲ್ ಸೇರಿದಂತೆ ಹಲವು ಮಂದಿ ಶಾಸಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಹಿಂದೆ ಬರಗಾಲ ಬಂದಾಗ ಜನ ನಿಂಬೆ ಗಿಡ ಕಿತ್ತು ಹಾಕುತ್ತಿದ್ದರು. ಅದೇ ದಿನ ನಾನು ಇಂಡಿಗೆ ಬಂದಿದ್ದೆ. ನಿಂಬೆ ಬೆಳೆಗಾರರಿಗೆ ಭರವಸೆ ನೀಡಿದ್ದೆ. ನಿಂಬೆ ಅಭಿವೃದ್ಧಿ ಮಂಡಳಿಯ ಲಾಂಛನ ಬಿಡುಗಡೆ ಮಾಡಿ ನುಡಿದಂತೆ ನಡೆಯುವ ಕಾಂಗ್ರೆಸ್ಸಿನ ಪರಂಪರೆಯನ್ನು ಮುಂದುವರಿಸಿದ್ದೇವೆ. ಬಿಜೆಪಿ-ಜೆಡಿಎಸ್ ಇಬ್ಬರೂ ರಾಜ್ಯ ಸರಕಾರದ ಬಳಿ ಹಣ ಇಲ್ಲ ಎನ್ನುವ ಅಪಪ್ರಚಾರ ಮಾಡಿ ಜನರಿಂದಲೇ ತಿರಸ್ಕಾರಕ್ಕೆ ಒಳಗಾಗಿದ್ದಾರೆ.

-ಸಿದ್ದರಾಮಯ್ಯ ಮುಖ್ಯಮಂತ್ರಿ

ಇಂಡಿ ಕ್ಷೇತ್ರಕ್ಕೆ ಮಾತ್ರ ದೊಡ್ಡ ಮೊತ್ತದ ಅನುದಾನವನ್ನು ನೀರಾವರಿ ವಲಯಕ್ಕೆ ನೀಡಲಾಗಿದೆ. ನನಗೇನೂ ಬೇಡ, ಕೇವಲ ರೈತರಿಗೆ ಸಹಾಯ ಮಾಡಿ ಎಂದು ಹೇಳುವ ಶಾಸಕ ಯಶವಂತರಾಯ ಗೌಡರ ಕಳಕಳಿಗಾಗಿ ಈ ಅನುದಾನ ಬಿಡುಗಡೆ ಮಾಡಿದ್ದೇವೆ. ಉಳಿದ ಅನೇಕ ಶಾಸಕರು 5 ಕೋಟಿ ಕೊಡಿ, 30 ಕೋಟಿ ಕೊಡಿ ಎಂದು ಕೇಳುತ್ತಿದ್ದಾರೆ. ಗೌಡರ ಮೇಲಿನ ವಿಶೇಷ ಕಾಳಜಿ ಅವರು ಜನರ ಮೇಲೆ ಇರಿಸಿರುವ ಕಾಳಜಿಗಾಗಿ ಅನುದಾನ ನೀಡಲಾಗಿದೆ.

ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಬಿ. ಸರೋಜಾ ದೇವಿ ನಿಧನ

← ಮೊದಲಪುಟದಿಂದ

ಆರು ದಶಕಗಳ ಸಿನಿಮಾ ಪಯಣದಲ್ಲಿ ಅವರಿಗೆ ಹಲವಾರು ಗೌರವಗಳು ಸಂದಿವೆ. 1965ರಲ್ಲಿ ಅಭಿನಯ ಸರಸ್ವತಿ ಗೌರವ, 1969ರಲ್ಲಿ ಪದ್ಮಶ್ರೀ, 1992ರಲ್ಲಿ ಪದ್ಮಭೂಷಣ, 1988ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2006ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ.

ಕರ್ನಾಟಕ ಸರಕಾರದಿಂದ ರಾಜ್‌ಕುಮಾರ್ ಜೀವಮಾನ ಸಾಧನೆ ಪ್ರಶಸ್ತಿ, ತಮಿಳುನಾಡು ಸರಕಾರದಿಂದ ಕಲೈಮಾಮಣಿ ಜೀವಮಾನ ಸಾಧನೆ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ನೀರಿಗೆ ವಿಷ: 12 ಮಕ್ಕಳು ಅಸ್ವಸ್ಥ

ಬೆಳಗಾವಿ: ಶಾಲಾ ಆವರಣದಲ್ಲಿದ್ದ ಕುಡಿಯುವ ನೀರಿನ ಟ್ಯಾಂಕರ್‌ಗೆ ಕಿಡಿಗೇಡಿಗಳು ಕೀಟನಾಶಕ ಬೆರೆಸಿದ್ದು, ನೀರು ಸೇವಿ 12 ಮಕ್ಕಳು ಅಸ್ವಸ್ಥರಾದ ಘಟನೆ ಸವದತ್ತಿ ತಾಲೂಕಿನ ಹೂಲಿಕಟ್ಟಿಯಲ್ಲಿ ನಡೆದಿದೆ. ನೀರು ಕುಡಿದ ವಿದ್ಯಾರ್ಥಿಗಳಲ್ಲಿ ಹೊಟ್ಟೆ ನೋವು, ವಾಂತಿ ಭೇದಿ ಕಾಣಿಸಿಕೊಂಡಿದ್ದು, 12ಕ್ಕೂ ಹೆಚ್ಚು ಮಕ್ಕಳಿಗೆ ತಾಲೂಕಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಶಾಲೆಗೆ ತೆರಳಿ ಸ್ಥಳ ಪರಿಶೀಲನೆ ನಡೆಸಿದ ತಹಸೀಲ್ದಾರ್ ಹೆಗ್ಗನವರ ತನಿಖೆ ನಡೆಸಿ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲು ಪೊಲೀಸರಿಗೆ ಸೂಚನೆ ಕೊಟ್ಟಿದ್ದಾರೆ. ಒಟ್ಟು 41 ವಿದ್ಯಾರ್ಥಿಗಳಿದ್ದಾರೆ. ಅಲ್ಲದೆ ಈ ಶಾಲೆಯ ಪಕ್ಕದಲ್ಲೇ ಹಲವಾರು ಮನೆಗಳಿವೆ. ಈ ಮನೆಯರು ಕೂಡಾ ಈ ಶಾಲೆಯ ಟ್ಯಾಂಕಿನ ನೀರನ್ನೇ ಉಪಯೋಗಿಸುತ್ತಿದ್ದಾರೆ ಎನ್ನಲಾಗಿದೆ. ಶಾಲೆಯ ಆವರಣದಲ್ಲಿರುವ ಟ್ಯಾಂಕಿಗೆ ಅಪರಿಚಿತ ವ್ಯಕ್ತಿಗಳು ಕೀಟನಾಶಕ ಬೆರೆಸಿದ್ದಾರೆ ಎಂದು ತಿಳಿದು ಬಂದಿದೆ.

ವಿದ್ಯಾರ್ಥಿನಿಯರ ಆರೋಗ್ಯದಲ್ಲಿ ಏರುಪೇರು

ಯಾದಗಿರಿ: ಹಾಸ್ಟೇಲ್‌ನಲ್ಲಿ ವಿಷ ಆಹಾರ ಸೇವಿಸಿ 10 ವಿದ್ಯಾರ್ಥಿನಿಯರು ಅಸ್ವಸ್ಥರಾಗಿರುವ ಘಟನೆ ಸುರಪುರ ತಾಲೂಕಿನ ದೇವಾಪುರ ಗ್ರಾಮದ ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾರ್ಥಿನಿಯರ ವಸತಿ ನಿಲಯದಲ್ಲಿ ನಡೆದಿದೆ. ಸೋಮವಾರ ಬೆಳಗಿನ ಉಪಹಾರ ಸೇವಿಸಿದ ಬಳಿಕ ಇಬ್ಬರು ಕುಸಿದು ಬಿದ್ದಿದ್ದಾರೆ. ಬಳಿಕ ಹಲವರಿಗೆ ಹೊಟ್ಟೆ ನೋವು ಕಾಣಿಸಿಕೊಂಡು ಅಸ್ವಸ್ಥಗೊಂಡಿದ್ದಾರೆ. ಸದ್ಯ ತಾಲೂಕು ಆಸ್ಪತ್ರೆಯಲ್ಲಿ ವಿದ್ಯಾರ್ಥಿನಿಯರಿಗೆ ಚಿಕಿತ್ಸೆ ನೀಡಲಾಗಿದ್ದು, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ತಿಪ್ಪಾರೆಡ್ಡಿ ಆಸ್ಪತ್ರೆಗೆ ಭೇಟಿ ನೀಡಿ, ವಿದ್ಯಾರ್ಥಿನಿಯರ ಆರೋಗ್ಯ ವಿಚಾರಿಸಿದ್ದಾರೆ.

ಕಲಬುರಗಿ: ಚಿನ್ನ ದರೋಡೆ ಸಂಚಿನ ರೂವಾರಿ ಮುಂಬೈನಲ್ಲಿ ವಶಕ್ಕೆ

ಹೈದರಾಬಾದ್‌ನಲ್ಲಿ ಇಬ್ಬರ ಬಂಧನ, ತಲೆಮರೆಸಿಕೊಂಡವರಿಗೆ ತಲಾಶ್

ಕಲಬುರಗಿ: ಹಾಡಹಗಲೇ ಚಿನ್ನದಂಗಡಿಗೆ ನುಗ್ಗಿ ಕಳೆದ ಶುಕ್ರವಾರ ನಗರದ ಸರಾಫ್ ಬಜಾರ್‌ನಲ್ಲಿ ಮಾಲೀಕನ ಕೈಕಾಲು ಕಟ್ಟಿ, ಗನ್ ತೋರಿಸಿ ಬೆದರಿಕೆ ಹಾಕಿದ ಚಿನ್ನಾಭರಣ ದರೋಡೆ ಮಾಡಿ ಪರಾರಿ ಆಗಿದ್ದ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುಳಿವು ಹಿಡಿದು ಮುಂಬೈಗೆ ತೆರಳಿದ ಪೊಲೀಸರು, ದರೋಡೆ ಗ್ಯಾಂಗ್‌ನ ರೂವಾರಿ ಎನ್ನಲಾದ ಪಶ್ಚಿಮ ಬಂಗಾಳದ ನಿವಾಸಿ ಫಾರುಕ್ ಮಲಿಕ್ ಎಂಬಾತನನ್ನು ವಶಕ್ಕೆ ಪಡೆದಿರುವ ಮಾಹಿತಿ ಇದೆ. ಆರೋಪಿ ಮಲಿಕ್‌ನನ್ನು ಪೊಲೀಸರು ಕಲಬುರಗಿ ಕರೆತಂದು ವಿಚಾರಣೆ ನಡೆಸಲಾಗುತ್ತದೆ.

ಸುಪಾರಿ ನೀಡಿರುವ ಶಂಕೆ: ಚಿನ್ನದ ಅಂಗಡಿ ದರೋಡೆ ಪ್ರಕರಣಕ್ಕೆ ತಿರುವೊಂದು ಲಭಿಸಿದ್ದು, ಕೃತ್ಯ ನಡೆಸಲು ಕಲಬುರಗಿಯಲ್ಲಿ ನೆಲೆಸಿದ ಪಶ್ಚಿಮ ಬಂಗಾಳ ನಿವಾಸಿಯೊಬ್ಬರು ಸುಪಾರಿ ನೀಡಿರುವ ಅಂಶ ಬೆಳಕಿಗೆ ಬಂದಿದೆ. ಆದರಿಂದ, ಐದನೇ ವ್ಯಕ್ತಿಗಾಗಿ ಪೊಲೀಸರು ತೀವ್ರ ಶೋಧ ನಡೆಸಿದ್ದಾರೆ. ಅಲ್ಲದೇ, ಘಟನೆಯ ಬಳಿಕ ತೆಲಂಗಾಣ ಮೂಲಕ ದರೋಡೆಕೋರರು ಪರಾರಿಯಾಗಿರುವ ಮಾಹಿತಿ ಸಹ ಪೊಲೀಸರಿಗೆ ಸಿಕ್ಕಿದೆ ಎನ್ನಲಾಗಿದೆ.

ದರೋಡೆಕೋರರ ಸಂಪರ್ಕಿತರ ವಶಕ್ಕೆ: ನಾಲ್ವರು ದರೋಡೆಕೋರರ ಜತೆಗೆ ನಿಕಟ ಸಂಪರ್ಕದಲ್ಲಿದ್ದ

ಹೈದರಾಬಾದ್ ಮೂಲದ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ನಾಲ್ವರು ದರೋಡೆಕೋರರು ಲೂಟಿ ಮಾಡಿದ ಚಿನ್ನಾಭರಣದ ವಸ್ತುಗಳನ್ನು ಇವರಿಬ್ಬರೇ ಮಾರಾಟ ಮಾಡುತ್ತಿದ್ದರು ಎನ್ನಲಾಗಿದೆ. ಮಾರಾಟ ಮಾಡಿದ ಹಣವನ್ನ ದರೋಡೆಕೋರರಿಗೆ ನೀಡುತ್ತಿದ್ದರು. ಈಗ ಈ ಇಬ್ಬರನ್ನು ವಶಕ್ಕೆ ಪಡೆದು ಉಳಿದ ನಾಲ್ವರು ಆರೋಪಿಗಳಿಗಾಗಿ ಪೊಲೀಸರು ಬಲೆ ಬಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ-1, ಕೆಐಎಡಿಬಿ(ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೆಲಮಂಗಲ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-560001.
ದೂ: 080-22236840, ಇ-ಮೇಲ್: slao1bmicp@kiadb.in

ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಬೆಂ.ಗ್ರಾ.ನೆ/503/2025-26 ದಿನಾಂಕ: 14.07.2025

ಸಾರ್ವಜನಿಕ ನೋಟೀಸ್

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(4)ರ ಅನ್ವಯ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ದೊಡ್ಡಚೆನ್ನೋಹಳ್ಳಿ ಗ್ರಾಮದಲ್ಲಿ ಈ ಕೆಳಕಂಡ ಸರ್ವೆ ನಂಬರ್ ಜಮೀನುಗಳನ್ನು ಕೈಗಾರಿಕಾ ಸ್ಥಾಪನೆಗಾಗಿ ಕೆಐಎಡಿ ಕಾಯ್ದೆ ಕಲಂ 28(4)ರಡಿ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 242 ಎಸ್‌ಪಿಕ್ಯೂ 2020 ದಿ:16.06.2025 ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆ ದಿನಾಂಕ:24.06.2025 ರಂದು ಹೊರಡಿಸಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(4)ರ ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರಗಳು:-

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನ್ ಎ-ಗು	ಖರಾಬು ಎ-ಗು	ಬಾಕಿ ಎ-ಗು
1	2	3	4	5	6	7
ಗ್ರಾಮ: ದೊಡ್ಡಚೆನ್ನೋಹಳ್ಳಿ, ತಾಲ್ಲೂಕು: ನೆಲಮಂಗಲ				ಹೋಬಳಿ: ತ್ಯಾಮಗೊಂಡ್ಲು, ಜಿಲ್ಲೆ:- ಬೆಂಗಳೂರು ಗ್ರಾಮಾಂತರ		
1	ಆರ್.ಟಿ.ಸಿ ಲಭ್ಯವಿಲ್ಲ	ಮೂಲ ಸ.ನಂ.7 ರಲ್ಲಿ ಖಾತೆದಾರರಾದ ಶ್ರೀಮತಿ ಪುಟ್ಟಮ್ಮ ಕೋಂ ಅರಸಯ್ಯ ಜೆಎಂಸಿಯಂತೆ ಅನುಭವ ಹೊಸ ಸ.ನಂ.44	ದುರಸ್ತಿ ಯಂತೆ 44(ಮೂಲ ಸ.ನಂ.7)	0-38	-	0-38
2	ಆರ್.ಟಿ.ಸಿ ಲಭ್ಯವಿಲ್ಲ	ಮೂಲ ಸ.ನಂ.7 ರಲ್ಲಿ ಖಾತೆದಾರರಾದ ಶ್ರೀ ಕೃಷ್ಣಪ್ಪ ಬಿನ್ ತಿಮ್ಮಯ್ಯ ಜೆಎಂಸಿ ಯಂತೆ ಅನುಭವ ಹೊಸ ಸ.ನಂ.51	ದುರಸ್ತಿ ಯಂತೆ 51(ಮೂಲ ಸ.ನಂ.7)	0-20	-	0-20
3	ಆರ್.ಟಿ.ಸಿ ಲಭ್ಯವಿಲ್ಲ	ಮೂಲ ಸ.ನಂ.7 ರಲ್ಲಿ ಖಾತೆದಾರರಾದ ಶ್ರೀ ಗಂಗಯ್ಯ ಬಿನ್ ಜವರಯ್ಯ ಜೆಎಂಸಿ ಯಂತೆ ಅನುಭವ ಹೊಸ ಸ.ನಂ.53	ದುರಸ್ತಿ ಯಂತೆ 53(ಮೂಲ ಸ.ನಂ.7)	0-21	-	0-21
4	ಆರ್.ಟಿ.ಸಿ ಲಭ್ಯವಿಲ್ಲ	ಮೂಲ ಸ.ನಂ.7 ರಲ್ಲಿ ಖಾತೆದಾರರಾದ ಶ್ರೀ ಪುಟ್ಟನರಸಯ್ಯ ಬಿನ್ ಕುಂಬನರಸಯ್ಯ ಜೆಎಂಸಿ ಯಂತೆ ಅನುಭವ ಹೊಸ ಸ.ನಂ.55	ದುರಸ್ತಿ ಯಂತೆ 55(ಮೂಲ ಸ.ನಂ.7)	0-37	-	0-37
5	ಆರ್.ಟಿ.ಸಿ ಲಭ್ಯವಿಲ್ಲ	ಮೂಲ ಸ.ನಂ.7 ರಲ್ಲಿ ಖಾತೆದಾರರಾದ ಶ್ರೀಮತಿ ಮುನಿಯಮ್ಮ ಕೋಂ ಗಂಗಯ್ಯ ಜೆಎಂಸಿ ಯಂತೆ ಅನುಭವ ಹೊಸ ಸ.ನಂ.56	ದುರಸ್ತಿ ಯಂತೆ 56(ಮೂಲ ಸ.ನಂ.7)	0-37	-	0-37
6	ಆರ್.ಟಿ.ಸಿ ಲಭ್ಯವಿಲ್ಲ	ಮೂಲ ಸ.ನಂ.7 ರಲ್ಲಿ ಖಾತೆದಾರರಾದ ಶ್ರೀಮತಿ ಗಂಗಮ್ಮ ಕೋಂ ವೆಂಕಟಶಾಮಯ್ಯ ಜೆಎಂಸಿ ಯಂತೆ ಅನುಭವ ಹೊಸ ಸ.ನಂ.57	ದುರಸ್ತಿ ಯಂತೆ 57(ಮೂಲ ಸ.ನಂ.7)	0-30	-	0-30
7	ಸರ್ಕಾರ	ಸರ್ಕಾರ	ದುರಸ್ತಿ ಯಂತೆ 58ರ ಪೈಕಿ(ಮೂಲ ಸ.ನಂ.7)	0-26	0-26	-
		ಒಟ್ಟು		5-09	0-26	4-23

-:: ಘೋಷ್ವಾರೆ ::-

ಕ್ರ.ಸಂ.	ಗ್ರಾಮದ ಹೆಸರು	ವಿಸ್ತೀರ್ಣ ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
1	ದೊಡ್ಡಚೆನ್ನೋಹಳ್ಳಿ	5-09	0-26	4-23
	ಒಟ್ಟು	5-09	0-26	4-23

ಸಹಿ/-ವಿಶೇಷ ಭೂಸ್ವಾಧೀನಾಧಿಕಾರಿ-1, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂ.ಗ್ರಾಂ, ನೆಲಮಂಗಲ ತಾಲ್ಲೂಕು, ಬೆಂಗಳೂರು.

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18. ದೂರವಾಣಿ: 26709689/ 26706775,
Email: endowmentcommissioner@gmail.com

ಸಂಖ್ಯೆ: HRICE-CDMS0CD/7/2025-CDMSEND-1762289 ದಿನಾಂಕ: 14.07.2025.

ಪತ್ರಿಕಾ ಪ್ರಕಟಣೆ

2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಚಾರ್‌ಧಾಮ್ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.20,000/-ಗಳಂತೆ ಸರ್ಕಾರದ ಸಹಾಯಧನವನ್ನು ನೀಡುವ ಕುರಿತು ದಿನಾಂಕ: 15.07.2025ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರತಕ್ಕದ್ದು.
2. 45 ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಬಹುದು.
3. ಯಾತ್ರಾರ್ಥಿಯು ಕಡ್ಡಾಯವಾಗಿ, ಬದರೀನಾಥ್, ಕೇದಾರ್‌ನಾಥ್, ಯಮುನೋತ್ರಿ ಮತ್ತು ಗಂಗೋತ್ರಿ ಕ್ಷೇತ್ರಗಳಿಗೆ ಭೇಟಿ ನೀಡಿರಬೇಕು.
4. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **15.11.2025 ಸಂಜೆ 4:00 ಗಂಟೆಯೊಳಗೆ.**
5. ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ವಿತರಿಸಲಾಗುವುದು.
6. ಯಾತ್ರಾರ್ಥಿಯು ಆನ್‌ಲೈನ್ ಮೂಲಕವೇ ಅರ್ಜಿಯನ್ನು https://sevasindhuservices.karnataka.gov.in ನಲ್ಲಿ ಸಲ್ಲಿಸಬೇಕಾಗಿರುತ್ತದೆ.

ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು	
1.	ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ)
2.	ಆಧಾರ್ ಕಾರ್ಡ್‌ನ ಎರಡೂ ಕಡೆ (both sides) ತಪ್ಪದೇ ಅಪ್‌ಲೋಡ್ ಮಾಡತಕ್ಕದ್ದು.
3.	ಚುನಾವಣಾ ಗುರುತಿನ ಚೀಟಿ/ರೇಷನ್ ಕಾರ್ಡ್
4.	ಯಾತ್ರಾರ್ಥಿಯು ರೂ.100/-ಗಳ ಛಾಪಾ ಕಾಗದ (E-Stamp Paper) ದಲ್ಲಿ ಈ ಹಿಂದೆ ಸಹಾಯಧನವನ್ನು ಪಡೆದಿಲ್ಲವೆಂದು ಸ್ವದೃಢೀಕರಿಸಿ ನೋಟರಿ ಮೊಹರು ಮತ್ತು ಸಹಿಯೊಂದಿಗೆ ದೃಢೀಕರಣವನ್ನು ಅಪ್‌ಲೋಡ್ ಮಾಡತಕ್ಕದ್ದು.
5.	ಯಾತ್ರೆ ಕೈಗೊಳ್ಳುವ ಮುನ್ನ ಯಾತ್ರೆಗೆ ನೋಂದಾಯಿಸಿಕೊಂಡ ಪ್ರತಿ
6.	ಯಾತ್ರೆ ಮುಗಿದ ನಂತರ ಉತ್ತರಖಂಡ್ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನೀಡಲಾದ ಪ್ರಮಾಣ ಪತ್ರ (**ಕಡ್ಡಾಯವಾಗಿ 4 ಧಾಮಗಳು ನಮೂದಾಗಿರತಕ್ಕದ್ದು**).
7.	ಯಾತ್ರಾರ್ಥಿಯು ಅರ್ಜಿ ಸಲ್ಲಿಸುವ ಮುನ್ನ ಅವರ **ಬ್ಯಾಂಕ್ ಖಾತೆಯು ಚಾಲ್ತಿಯಲ್ಲಿರಬೇಕು, ಸದರಿ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active** ಮಾಡಿಸಿರತಕ್ಕದ್ದು. (ಸರ್ಕಾರದ ಮಾರ್ಗಸೂಚಿಯನ್ವಯ **ಆಯಾಯಾ ವರ್ಷದ ಅನುದಾನವನ್ನು ಆಯಾಯಾ ವರ್ಷ ಪಾವತಿಸಲು ಅವಕಾಶವಿರುವುದರಿಂದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ಆಧಾರ್ ಕಾರ್ಡ್ ಅನ್ನು ತಪ್ಪದೇ Seed ಹಾಗೂ NPCI Active ಮಾಡಿಸಿರತಕ್ಕದ್ದು.** ನಿಗದಿತ ದಿನಾಂಕದೊಳಗೆ ಮಾಡಿಸದಿದ್ದಲ್ಲಿ ತಾವೇ ನೇರ ಜವಾಬ್ದಾರರು) ಅವಧಿ ಮುಗಿದ ನಂತರ ಸಹಾಯಧನ ಕೋರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ:- ಹೆಚ್ಚಿನ ವಿವರಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ **https://itms.kar.nic.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
(ಕ.ಟಿ.ಆ.ಮೇ.)

ಸಹಿ/-
ಆಯುಕ್ತರ ಪರವಾಗಿ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/1772/ಆಕಾರ್/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-3 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು - 560052.

ಸಂಖ್ಯೆ: ಉಪ್ರವ್ಯ-3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/06/2025-26 ದಿನಾಂಕ: 14-07-2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು-3, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯೂಎಂಎಂ) ರವರು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ರವರ ಪರವಾಗಿ, ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾದ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ **(https://kppp.karnataka.gov.in)** ಮೂಲಕ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ದಾರರಿಗೆ ಒಪ್ಪಂದದ ಪ್ರಧಾನಕ್ಕೆ ಅರ್ಹತೆ ಪಡೆಯಲು ಟೆಂಡರ್‌ದಾರರಿಗೆ ನೀಡುವ ಸೂಚನೆಗಳಲ್ಲಿ ಸ್ಟಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್‌ಗಳ ಕೆಸಿ-7 ರ ಪ್ರಕಾರ ನಿರ್ದಿಷ್ಟಪಡಿಸಲಾದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಇತರೆ ವಿವರಗಳನ್ನು ಬಿಡ್ಡಿಂಗ್ ಡಾಕ್ಯೂಮೆಂಟ್‌ಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ನಿಗದಿತ ಅವಧಿ ಮಳೆಗಾಲ ಸೇರಿದಂತೆ)
1	ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳಿಂದ ಮತ್ತು ಸಂಸ್ಕರಣಾ ಘಟಕಗಳಿಂದ Refused Derived Fuel (RDF) ಅನ್ನು ಬಿಡದಿಯ ತ್ಯಾಜ್ಯದಿಂದ ಇಂಧನ ಉತ್ಪಾದಿಸುವ ಸ್ಥಾವರಕ್ಕೆ ಸಾಗಿಸುವ ಹಾಗೂ ಸ್ಥಾವರದಲ್ಲಿ ಉತ್ಪತ್ತಿಯಾದ ಬೂದಿಯನ್ನು ಭೂ ಭರ್ತಿ ಸ್ಥಳಕ್ಕೆ ಸಾಗಿಸುವ 2ನೇ ಹಂತದ ಕಾಮಗಾರಿಗೆ ಯೋಜನಾ ನಿರ್ವಹಣಾ ಸಮಾಲೋಚಕರನ್ನು ನೇಮಿಸುವ ಕಾಮಗಾರಿ.	990.00	25,000.00	220 ದಿನಗಳು

ಸೂಚನೆ: 1) ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆ.ಪಿ.ಪಿ. ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್ ಇ-ಮೇಲ್ ವಿಳಾಸ **hphelpdesk.blr@intarvo.com** ಕೆ.ಪಿ.ಪಿ. ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: **080 - 22371090 / 22373788**. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆ.ಪಿ.ಪಿ. ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. **2)** ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. **3) ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ.**

ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪೂರ್ವ ಬಿಡ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	**18-07-2025 ರಂದು 17.30 ಗಂಟೆಯವರೆಗೆ**
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	**18-07-2025 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ಟೆಕ್) ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು - 560052.**
ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ	**23-07-2025 ರಂದು 16.00 ಗಂಟೆಯವರೆಗೆ**
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	**24-07-2025 ರಂದು 16.30 ಗಂಟೆಗೆ**
ಆರ್ಥಿಕ ಬಿಡ್ ತೆರೆಯುವ ದಿನಾಂಕ	**ತಾಂತ್ರಿಕವಾಗಿ ಅರ್ಹ ಬಿಡ್ಡುದಾರರಿಗೆ ತಿಳಿಸಲಾಗುವುದು.**

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-3
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/1797/ಅಡ್ವಟೋರ್/2025-26

ಸಮಾಚಾರ ಸಣ್ಣದಲ್ಲ

ಫಿಡೆ ಮಹಿಳಾ ಚೆಸ್ ದಿವ್ಯಾ, ಹಂಪಿಗೆ ಮುನ್ನಡೆ

ಬಟುಮಿ (ಜಾರ್ಜಿಯಾ): ಭಾರತದ ದಿವ್ಯಾ ದೇಶಮುಖ್ ಮತ್ತು ಕೋನೇರು ಹಂಪಿ ಅವರು ಫಿಡೆ ಮಹಿಳಾ ವಿಶ್ವಕಪ್ ಚೆಸ್ ಟೂರ್ನಿಯ ಅಂತಿಮ 16ರ ಘಟ್ಟ ಪ್ರವೇಶಿಸಿದರು. ವಿಮೆನ್ ಗ್ರಾಂಡ್‌ಮಾಸ್ಟರ್ ದಿವ್ಯಾ ಅವರು ಸರ್ಬಿಯಾದ ತಿಯೊಡೊರ ಇಂಜಾಕ್ ವಿರುದ್ಧ ಮೊದಲ ಪಂದ್ಯ ಗೆದ್ದಿದ್ದು, ಮುಂದಿನ ಹಂತಕ್ಕೆ ಮುನ್ನಡೆಯಲು ಡ್ರಾ ಅಗತ್ಯವಿತ್ತು, ಅದನ್ನು ಸಾಧಿಸಿದರು. ಗ್ರಾಂಡ್ ಮಾಸ್ಟರ್ ಪಟ್ಟಕ್ಕೇರಿದ ದೇಶದ ಮೊದಲ ಆಟಗಾರ್ತಿ ಕೋನೇರು ಹಂಪಿ ಇನ್ನೊಂದು ಪಂದ್ಯದಲ್ಲಿ ಪೋಲೆಂಡ್‌ನ ಕುಲೊನ್ ಕ್ಲಾಡಿಯಾ ಅವರನ್ನು ಸೋಲಿಸಲು ಹೆಚ್ಚು ಶ್ರಮ ಹಾಕಬೇಕಾಯಿತು.

ಹರಿಕೃಷ್ಣ 87ನೇ ಚೆಸ್ ಗ್ರ್ಯಾಂಡ್ ಮಾಸ್ಟರ್



ದೆಹಲಿ: ಆಂಧ್ರಪ್ರದೇಶದ ಗುಂಟೂರಿನ ಹರಿಕೃಷ್ಣ ಎ.ಆರ್. ದೇಶದ 87ನೇ ಚೆಸ್ ಗ್ರ್ಯಾಂಡ್ ಮಾಸ್ಟರ್ ಎನಿಸಿದರು. ಫ್ರಾನ್ಸ್‌ನಲ್ಲಿ ಲಾ ಪ್ಲಾನ್ಯ ಚೆಸ್ ಫೆಸ್ಟಿವಲ್‌ನಲ್ಲಿ ಅವರು 3ನೇ ಜಿಎಂ ನಾರ್ಮ್ ಪಡೆದರು. ಹರಿಕೃಷ್ಣ 2018ರಲ್ಲಿ ಇಂಟರ್‌ನ್ಯಾಷನಲ್ ಮಾಸ್ಟರ್ ಆಗಿದ್ದರು. ಸ್ವಿಜರ್ಲೆಂಡ್‌ನಲ್ಲಿ 2023ರಲ್ಲಿ ನಡೆದ ಬೀಲ್ ಚೆಸ್ ಫೆಸ್ಟಿವಲ್‌ನಲ್ಲಿ ಮೊದಲ ಜಿಎಂ ನಾರ್ಮ್ ಪಡೆದ ಅವರು ಸ್ಪೇನ್‌ಲೆನ್ಸ್ ಅಂದುಜಾರ್ ಓಪನ್ ಟೂರ್ನಿಯಲ್ಲಿ ಎರಡನೇ ನಾರ್ಮ್ ಪಡೆದಿದ್ದರು.

ರವೀಂದ್ರ ಜಡೇಜಾ ಪ್ರಯತ್ನ ವಿಫಲ | ಇಂಗ್ಲೆಂಡ್‌ಗೆ 22 ರನ್‌ಗಳ ರೋಚಕ ಗೆಲುವು

ಭಾರತಕ್ಕೆ ವೀರೋಚಿತ ಸೋಲು

ಲಾರ್ಡ್ಸ್: ಇಲ್ಲಿ ನಡೆದ ಭಾರತ ಮತ್ತು ಇಂಗ್ಲೆಂಡ್ ನಡುವಿನ ಮೂರನೇ ಟೆಸ್ಟ್ ಪಂದ್ಯದಲ್ಲಿ ಸೋಮವಾರದಂದು ಭಾರತ ತಂಡವು 22 ರನ್‌ಗಳ ವೀರೋಚಿತ ಸೋಲೊಪ್ಪಿಕೊಂಡಿತು. 193 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾಕ್ಕೆ, ಆಲ್‌ರೌಂಡರ್ ರವೀಂದ್ರ ಜಡೇಜಾ ಗೆಲುವನ್ನು ತಂದುಕೊಡಲು ಪ್ರಯತ್ನಿಸಿದರೂ, ಕೊನೆಯಲ್ಲಿ ಮೊಹಮ್ಮದ್ ಸಿರಾಜ್ ಅವರು ವಿಕೆಟ್ ಕಳೆದುಕೊಳ್ಳುವ ಭಾರತದ ಎರಡನೇ ಇನ್ನಿಂಗ್ಸ್ 170 ರನ್‌ಗೆ ಅಂತ್ಯಗೊಂಡಿತು. ಈ ಗೆಲುವಿನ ಮೂಲಕ 5 ಪಂದ್ಯಗಳ ಸರಣಿಯಲ್ಲಿ ಇಂಗ್ಲೆಂಡ್ ತಂಡವು ಭಾರತದ ವಿರುದ್ಧ 2–1 ಅಂತರದ ಮುನ್ನಡೆಯನ್ನು ಕಾಯ್ದುಕೊಳ್ಳುವಲ್ಲಿ ಸಫಲವಾಯಿತು.

4ನೇ ದಿನ 58ಕ್ಕೆ 4 ವಿಕೆಟ್ ಕಳೆದುಕೊಂಡಿದ್ದ ಟೀಮ್ ಇಂಡಿಯಾ ಐದನೇ ದಿನದ ಆರಂಭದಿಂದಲೇ ಸಂಪೂರ್ಣ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಸೋಮವಾರ ಕ್ರೀಸ್‌ಗೆ ಆಗಮಿಸಿದ ರಿಷಭ್ ಪಂತ್ ಕೇವಲ 9 ರನ್ ಗಳಿಸಿ ಆರ್ಚರ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಆ ವಿಕೆಟ್ ಬೀಳುತ್ತಿದ್ದಂತೆ ಟೀಮ್ ಇಂಡಿಯಾ ಗೆಲುವಿನ ಆಸೆ ಅರ್ಧದಷ್ಟು ಕುಸಿಯಿತು. ಆದರೂ ರಾಹುಲ್ ಇದ್ದಿದ್ದರಿಂದ ಗೆಲ್ಲುವ ಭರವಸೆಯಿತ್ತು. ಆದರೆ ಕೇವಲ 10 ರನ್‌ಗಳ ಅಂತರದಲ್ಲಿ ಬೆನ್ ಕಾರ್ಸ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದು 39 ರನ್ ಗಳಿಸಿ ರಾಹುಲ್ ಔಟ್ ಆಗುತ್ತಿದ್ದಂತೆ ಭಾರತದ ಸೋಲು ಖಚಿತವಾಯಿತು. ನಂತರ ಬಂದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ 4 ಎಸೆತ ಎದುರಿಸಿ ಯಾವುದೇ ರನ್ ಗಳಿಸದೆ ಪೆವಿಲಿಯನ್ ಸೇರಿದರು.

ಬಳಿಕ ಕೆಲವೇ ಓವರ್‌ಗಳಲ್ಲಿ ಭಾರತ ಆಲೌಟ್ ಆಗಬಹುದು ಎನ್ನುವ ಸಂದರ್ಭದಲ್ಲಿ ನಿತೀಶ್ ಕುಮಾರ್ ಹಾಗೂ ರವೀಂದ್ರ ಜಡೇಜಾ 90 ಎಸೆತ ಎದುರಿಸಿ ಕ್ರೀಸ್‌ನಲ್ಲಿ ನೆಲೆ ನಿಂತು 30 ರನ್ ಸೇರಿಸಿದರು. ಆದರೆ ಊಟದ ವಿರಾಮಕ್ಕೆ ಕೆಲವೇ ಎಸೆತಗಳು ಬಾಕಿ ಇರುವಾಗ ನಿತೀಶ್, ಕ್ರಿಸ್ ವೋಕ್ಸ್ ಬೌಲಿಂಗ್‌ನಲ್ಲಿ ವಿಕೆಟ್‌ಕೀಪರ್ ಜೇಮಿ ಸ್ಮಿತ್‌ಗೆ ಕ್ಯಾಚ್ ನೀಡಿ ಔಟ್ ಆದರು. 10ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಬುಮ್ರಾ, ಜಡೇಜಾ ಜತೆಗೂಡಿ 132 ಎಸೆತಗಳನ್ನು ಎದುರಿಸಿ ಕ್ರೀಸ್‌ನಲ್ಲಿ ಬಹಳ ಹೊತ್ತು ಉಳಿದುಕೊಂಡರು. ಬುಮ್ರಾ 54 ಎಸೆತಗಳನ್ನು ಎದುರಿಸಿ 4 ರನ್ ಗಳಿಸಿ ಔಟ್ ಆದರು. 22 ಓವರ್‌ಗಳ ಕಾಲ ತಾಳ್ಮೆಯಿಂದ ಕ್ರೀಸ್‌ನಲ್ಲೇ ಇದ್ದ ಬುಮ್ರಾ, ಕೊನೆಗೂ ಬೆನ್ ಸ್ಟೋಕ್ಸ್ ಎಸೆದ ಶಾಟ್‌ಬಾಲ್‌ನಲ್ಲಿ ಬೌಂಡರಿ ಬಾರಿಸುವ ಯತ್ನಕ್ಕೆ ಕೈ ಹಾಕಿ ಕ್ಯಾಚ್ ಔಟ್ ಆದರು.

ಕೊನೆಯ ವಿಕೆಟ್ ಜತೆಯಾಟದಲ್ಲಿ ಮೊಹಮ್ಮದ್ ಸಿರಾಜ್ ಹಾಗೂ ಜಡೇಜಾ ಇಂಗ್ಲೆಂಡ್ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿ 23 ರನ್ ಸೇರಿಸಿದ್ದರು. 75ನೇ ಓವರ್‌ನಲ್ಲಿ ಸಿರಾಜ್, ಸ್ಪಿನ್ನರ್ ಬಶೀರ್ ಎಸೆತವನ್ನು ಡಿಫೆಂಡ್ ಮಾಡಿದರು, ಆದರೆ ಚೆಂಡ್ ಸ್ಪಿನ್ ಆಗಿ ಸಿರಾಜ್ ಲೆಗ್‌ಸೈಡ್‌ನಲ್ಲಿ ಹೋಗಿ ಸ್ಟಂಪ್ ಹಾರಿಸಿತು. ಆ ಮೂಲಕ ಭಾರತ ತಂಡ 22 ರನ್‌ಗಳ ವೀರೋಚಿತ ಸೋಲು ಕಂಡಿತು. ರವೀಂದ್ರ ಜಡೇಜಾ 181 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ 61 ರನ್ ಗಳಿಸಿ ಅಜೇಯರಾಗಿ ಉಳಿದುಕೊಂಡರು.

ಇಂಗ್ಲೆಂಡ್ ಪರ ಜೋಫ್ರಾ, ಆರ್ಚರ್ 55 ರನ್‌ಗೆ 3 ವಿಕೆಟ್, ಬೆನ್ ಸ್ಟೋಕ್ಸ್ 48 ರನ್ ನೀಡಿ 3 ವಿಕೆಟ್, ಬ್ರೈಡನ್ ಕಾರ್ಸ್ 30 ರನ್ ನೀಡಿ 2 ವಿಕೆಟ್, ಕ್ರಿಸ್ ವೋಕ್ಸ್ ಹಾಗೂ ಬಶೀರ್ ತಲಾ ಒಂದು ವಿಕೆಟ್ ಪಡೆದು ಇಂಗ್ಲೆಂಡ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಜಡೇಜಾ–ಕಾರ್ಸ್ ಚಕಮಕಿ

ಪಂದ್ಯದ ಐದನೇ ದಿನವಾದ ಸೋಮವಾರದ ಆಟ ಉಭಯ ತಂಡಗಳ ನಡುವೆ ಭಾರಿ ಪೈಪೋಟಿ ನಡೆದಿತ್ತು. 35ನೇ ಓವರ್‌ನ ಕೊನೆಯ ಎಸೆತದ ನಂತರ ರವೀಂದ್ರ ಜಡೇಜಾ ಹಾಗೂ ಬ್ರೈಡನ್ ಕಾರ್ಸ್ ನಡುವೆ ಜಗಳ ನಡೆದಿತ್ತು. ಜಡೇಜಾ ಶಾಟ್ ಹೊಡೆದು, ರನ್ ತೆಗೆದುಕೊಳ್ಳಲು ಓಡಿದರು. ಅದೇ ಸಮಯದಲ್ಲಿ, ಕಾರ್ಸ್ ಕೂಡ ಚೆಂಡಿನತ್ತ ಓಡಿದಾಗ ಇಬ್ಬರೂ ಡಿಕ್ಕಿ ಹೊಡೆದರು. ಸಮತೋಲನ ಕಳೆದುಕೊಂಡ ಕಾರಣ ಕಾರ್ಸ್ ಕೋಪಗೊಂಡರು, ಜಡೇಜಾ ಕೂಡ ದಿಟ್ಟ ಪ್ರತ್ಯುತ್ತರ ನೀಡಿದರು. ಇಬ್ಬರ ನಡುವೆ ಮಾತಿನ ಚಕಮಕಿ ನಡೆದಾಗ ಇಂಗ್ಲೆಂಡ್ ತಂಡದ ನಾಯಕ ಸ್ಟೋಕ್ಸ್ ಮಧ್ಯಪ್ರವೇಶಿಸಿ ಇಬ್ಬರನ್ನೂ ಸಮಾಧಾನಗೊಳಿಸಿದರು.

ಫೈನಲ್‌ನಲ್ಲಿ ವಾಷಿಂಗ್ಟನ್ ಫ್ರೀಡಂ ಕ್ರಿಕೆಟ್ ತಂಡಕ್ಕೆ ಸೋಲು

ಮೇಜರ್ ಲೀಗ್: ಮುಂಬೈಗೆ ಜಯ

ಟೆಕ್ಸಾಸ್: ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್ ತಂಡವು ತನ್ನ ಜಾಗತಿಕ ಕ್ರಿಕೆಟ್ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಮಂಗಳವಾರದಂದು, ಎಂ.ಐ ನ್ಯೂಯಾರ್ಕ್ ತಂಡವು ಮೇಜರ್ ಲೀಗ್ ಕ್ರಿಕೆಟ್–2025ರ ಫೈನಲ್‌ನಲ್ಲಿ ವಾಷಿಂಗ್ಟನ್ ಫ್ರೀಡಂ ವಿರುದ್ಧ 5 ರನ್‌ಗಳ ರೋಚಕ ಗೆಲುವಿನೊಂದಿಗೆ ಚಾಂಪಿಯನ್‌ಶಿಪ್ ಗೆದ್ದುಕೊಂಡಿತು. ಇದು ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯ 13ನೇ ಜಾಗತಿಕ ಟಿ20 ಟ್ರೋಫಿಯಾಗಿದ್ದು, 2025ರಲ್ಲಿ ಗಳಿಸಿದ ಮೂರನೇ ಟ್ರೋಫಿ ಆಗಿದೆ.

ಇಲ್ಲಿನ ಗ್ರ್ಯಾಂಡ್ ಪ್ರೇರಿ ಸ್ಟೇಡಿಯಂನಲ್ಲಿ ನಡೆದ ಫೈನಲ್‌ನಲ್ಲಿ, ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ನ್ಯೂಯಾಕ್‌ತಂಡವು ಕ್ವಿಂಟನ್ ಡಿ ಕಾಕ್‌ರ 77 ರನ್ (46 ಎಸೆತ, 6 ಬೌಂಡ, 4 ಸಿಕ್ಸರ್ಸ್) ಆಕರ್ಷಕ ಇನ್ನಿಂಗ್ಸ್, ಮೊನಾಂಕ್ ಪಟೇಲ್ ಬಾರಿಸಿದ 28 ರನ್ ಮತ್ತು ನಾಯಕ ನಿಕೋಲಸ್ ಪೂರನ್‌ರ 21 ರನ್‌ಗಳ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿತು.

ಈ ಗುರಿಯನ್ನು ಬೆಂಬತ್ತಿದ ವಾಷಿಂಗ್ಟನ್ ಫ್ರೀಡಂ ತಂಡವು ರಚಿನ್ ರವೀಂದ್ರ (70 ರನ್, 41 ಎಸೆತ) ಮತ್ತು ಗ್ಲೆನ್ ಫಿಲಿಪ್ಸ್ (48 ಅಜೇಯ ರನ್‌ಗಳು) ಸ್ಫೋಟಕ ಆಟದ ಹೋರತಾಗಿಯೂ 5 ವಿಕೆಟ್ ನಷ್ಟಕ್ಕೆ 175 ರನ್‌ಗಳಿಗೆ ಸೀಮಿತವಾಯಿತು.

ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್‌ನ ಬೌಲರ್‌ಗಳು, ಅತ್ಯುತ್ತಮವಾಗಿ ಬೌಲಿಂಗ್ ಮಾಡಿ ಕೊನೆಯ ಓವರ್‌ಗಳಲ್ಲಿ ಎದುರಾಳಿ ತಂಡದ ಮೇಲೆ ಒತ್ತಡವನ್ನು ಏರಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ಕೊನೆಯ ಓವರ್‌ನಲ್ಲಿ ವಾಷಿಂಗ್ಟನ್ ತಂಡಕ್ಕೆ ಗೆಲ್ಲಲು 12 ರನ್‌ಗಳ ಅಗತ್ಯವಿತ್ತು. ಕ್ರೀಸ್‌ನಲ್ಲಿ ಗ್ಲೆನ್ ಫಿಲಿಫ್ ಹಾಗೂ ಮ್ಯಾಕ್ಸ್‌ವೆಲ್ ಇದ್ದರೂ ಕೇವಲ 7 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯು ಆ ಮೂಲಕ ಮೇಜರ್ ಲೀಗ್ ಟ್ರೋಫಿಯನ್ನು ಜಯಿಸಿ, ಜಾಗತಿಕ ಟಿ20 ಕ್ರಿಕೆಟ್‌ನಲ್ಲಿ ಅತ್ಯಂತ ಯಶಸ್ವಿ ತಂಡ ಎಂದೆನಿಸಿತು.

ಮೂರನೇ ಟೆಸ್ಟ್: ಐಸಿಸಿ ನಿಯಮ ಉಲ್ಲಂಘನೆ ಆರೋಪಕ್ಕೆ ಶಿಕ್ಷೆ ಪ್ರಕಟ

ಮೊಹಮ್ಮದ್ ಸಿರಾಜ್‌ಗೆ ಸಂಭಾವನೆ ಕಡಿತ

ಲಂಡನ್: ಇಲ್ಲಿನ ಲಾರ್ಡ್ಸ್ ಮೈದಾನದಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಭಾನುವಾರ ಐಸಿಸಿಯ ಮೊದಲ ಹಂತದ ನಿಯಮವನ್ನು ಉಲ್ಲಂಘಿಸಿದ ಭಾರತದ ವೇಗಿ ಮೊಹಮ್ಮದ್ ಸಿರಾಜ್‌ಗೆ ಪಂದ್ಯದ ಸಂಭಾವನೆಯಲ್ಲಿ ಶೇ.15ರಷ್ಟು ದಂಡ ಹಾಗೂ ಒಂದು ಡಿಮೆರಿಟ್ ಅಂಕವನ್ನು ವಿಧಿಸಲಾಗಿದೆ.

ನಾಲ್ಕನೇ ದಿನ ಮೊದಲನೇ ಸೆಷನ್ ವೇಳೆ ಮೊಹಮ್ಮದ್ ಸಿರಾಜ್ ಅವರು, ಇಂಗ್ಲೆಂಡ್ ಆರಂಭಿಕ ಬೆನ್ ಡಕೆಟ್ ಅವರನ್ನು ಔಟ್ ಮಾಡಿದ್ದರು. ಆ ವೇಳೆ ಸಿರಾಜ್, ಡಕೆಟ್ ಅವರ ಸನಿಹ ತೆರಳಿ ಆಕ್ರಮಣಕಾರಿಯಾಗಿ ಸಂಭ್ರಮಿಸಿದ್ದರಲ್ಲದೆ ಅನಿರೀಕ್ಷಿತವಾಗಿ ಡಕೆಟ್‌ಗೆ ಭುಜಕ್ಕೆ ತಾಗಿದ್ದರು.

ಘಟನೆಯು ಐಸಿಸಿ ಸಂಹಿತೆಯ ಆರ್ಟಿಕಲ್ 2.5 ರ ಉಲ್ಲಂಘನೆ ಎಂದು ಪರಿಗಣಿಸಲಾಗಿದೆ.

ಅಂತಾರಾಷ್ಟ್ರೀಯ ಪಂದ್ಯದ ಸಮಯದಲ್ಲಿ ಬ್ಯಾಟ್ಸ್‌ಮನ್ ಔಟ್ ಆದಾಗ ಆಕ್ರಮಣಕಾರಿ ಪ್ರತಿಕ್ರಿಯೆಯನ್ನು ಉಂಟುಮಾಡುವ ಅಥವಾ ಅವಮಾನಿಸುವ ಭಾಷೆ, ಕ್ರಿಯೆಗಳು ಅಥವಾ ಸನ್ನೆಗಳನ್ನು ಬಳಸುವುದನ್ನು ಈ ನಿಯಮ ನಿಷೇಧಿಸುತ್ತದೆ.

ಈ ಆರೋಪವನ್ನು ಆನ್ ಫೀಲ್ಡ್ ಅಂಪೈರ್‌ಗಳಾದ ಪಾಲ್ ರೀಫೆಲ್ ಮತ್ತು ಶರ್ಫುದ್ದೌಲಾ ಇಬ್ನೆ ಶಾಹಿದ್, ಮೂರನೇ ಅಂಪೈರ್ ಅಹ್ಸಾನ್ ರಾಜಾ ಮತ್ತು ನಾಲ್ಕನೇ ಅಂಪೈರ್ ಗ್ರಹಾಂ ಲಾಯ್ಡ್ ಜಂಟಿಯಾಗಿ ಪ್ರಕಟಿಸಿದರು. ಸಿರಾಜ್ ಈ ಪ್ರಮಾದವನ್ನು ಒಪ್ಪಿಕೊಂಡು, ಶಿಕ್ಷೆಯನ್ನು ಸ್ವೀಕರಿಸಿದರು, ಆ ಮೂಲಕ ಔಪಚಾರಿಕ ವಿಚಾರಣೆಯನ್ನು ತಪ್ಪಿಸಿದರು.

ಸಿರಾಜ್ ಪಾಲಿಗೆ 24 ತಿಂಗಳ ಅವಧಿಯಲ್ಲಿ ಎರಡನೇ ಡಿಮೆರಿಟ್ ಪಾಯಿಂಟ್ ಇದಾಗಿದೆ. ಕಳೆದ ವರ್ಷ ಅಡಿಲೇಡ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ 2ನೇ ಟೆಸ್ಟ್ ಪಂದ್ಯದಲ್ಲಿಯೂ ಒಂದು ಡಿಮೆರಿಟ್ ಪಾಯಿಂಟ್ ಪಡೆದಿದ್ದರು. ಎರಡು ವರ್ಷಗಳಲ್ಲಿ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಡಿಮೆರಿಟ್ ಪಾಯಿಂಟ್‌ಗಳನ್ನು ಗಳಿಸಿದ ಆಟಗಾರರು ಅಮಾನತನ್ನು ಎದುರಿಸಬೇಕಾಗುತ್ತದೆ.

ಸನ್‌ರೈಸರ್ಸ್ ಹೈದರಾಬಾದ್‌ಗೆ ನೂತನ ಬೌಲಿಂಗ್ ತರಬೇತುದಾರ

ಆರೋನ್ ಎಸ್‌ಆರ್‌ಎಚ್ ಕೋಚ್

ದೆಹಲಿ: ಸನ್‌ರೈಸರ್ಸ್ ಹೈದರಾಬಾದ್ ತಂಡ (ಎಸ್‌ಆರ್‌ಎಚ್) ತನ್ನ ನೂತನ ಕೋಚ್ ಅನ್ನು ನೇಮಿಸುವ ಮೂಲಕ 2026ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗೆ ತಯಾರಿಯನ್ನು ಆರಂಭಿಸಿದೆ. ಹತ್ತೊಂಬತ್ತನೇ ಆವೃತ್ತಿಯ ಟೂರ್ನಿಗಾಗಿ ಹೈದರಾಬಾದ್ ಫ್ರಾಂಚೈಸಿಯು ನೂತನ ಬೌಲಿಂಗ್ ಕೋಚ್ ಆಗಿ ವರುಣ್ ಆರೋನ್ ಅವರನ್ನು ನೇಮಿಸಿದೆ. ಭಾರತದ ಪರ ಅತ್ಯಂತ ವೇಗದ ಬೌಲಿಂಗ್ ಮಾಡಿರುವ ವರುನ್ ಆರೋನ್ ಇದೇ ಮೊದಲ ಬಾರಿ ಕೋಚಿಂಗ್ ಜವಾಬ್ದಾರಿಯನ್ನು ನಿರ್ವಹಿಸಲಿದ್ದಾರೆ.

2025ರ ಜನವರಿಯಲ್ಲಿ ವರುಣ್ ಆರೋನ್ ಎಲ್ಲಾ ಸ್ವರೂಪದ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಭಾರತ ತಂಡದ ಪರ 9 ಟೆಸ್ಟ್ ಪಂದ್ಯಗಳು ಹಾಗೂ ಏಕದಿನ ಪಂದ್ಯಗಳನ್ನೂ ಆಡಿದ್ದಾರೆ. ವೃತ್ತಿ ಜೀವನಕ್ಕೆ ವಿದಾಯ ಹೇಳಿದ ಬಳಿಕ ವರುಣ್ ಆರೋನ್ ವೀಕ್ಷಕ ವಿವರಣೆಯ ವೃತ್ತಿ ಬದುಕನ್ನು ಆರಂಭಿಸಿದ್ದರು.

ವರುಣ್ ಆರೋನ್ ಅವರು 2011ರಲ್ಲಿ ಇಂಗ್ಲೆಂಡ್ ಸರಣಿಯಲ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಅದಾಗಿ ಒಂದು ತಿಂಗಳ ನಂತರ ಅವರು ವೆಸ್ಟ್ ಇಂಡೀಸ್ ವಿರುದ್ಧ ಟೆಸ್ಟ್ ಕ್ರಿಕೆಟ್‌ಗೂ ಪದಾರ್ಪಣೆ ಮಾಡಿದ್ದರು. 2015ರಲ್ಲಿ ಅವರು ದಕ್ಷಿಣ ಆಫ್ರಿಕಾ ವಿರುದ್ಧ ತಮ್ಮ ಕೊನೆಯ ಟೆಸ್ಟ್ ಪಂದ್ಯವನ್ನು ಆಡಿದ್ದು, 2014ರಲ್ಲಿ ಶ್ರೀಲಂಕಾ ವಿರುದ್ಧ ಕೊನೆಯ ಏಕದಿನ ಪಂದ್ಯ ಆಡಿದ್ದರು.

ಆರೋನ್ ಹಿಂದೊಮ್ಮೆ ಐಪಿಎಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಹಾರ್ದಿಕ್ ಪಾಂಡ್ಯ ನೇತೃತ್ವದ ಗುಜರಾತ್ ಟೈಟನ್ಸ್ ತಂಡದ ಭಾಗವಾಗಿದ್ದರು, ಬಳಿಕ ರಾಜಸ್ಥಾನ ರಾಯಲ್ಸ್, ಪಂಜಾಬ್ ಕಿಂಗ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಪರವೂ ಆಡಿದ್ದರು.

ಇನ್‌ಸ್ಟಾಗ್ರಾಮ್ ಮೂಲಕ ಬೇರ್ಪಡುವ ನಿರ್ಧಾರ ಪ್ರಕಟ

ಸೈನಾ ನೆಹ್ವಾಲ್–ಕಶ್ಯಪ್ ವಿಚ್ಛೇದನ

ಹೈದರಾಬಾದ್: ಬ್ಯಾಡ್ಮಿಂಟನ್ ತಾರೆ, ಒಲಿಂಪಿಕ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಮತ್ತು ಮತ್ತು ಪರುಪಳ್ಳಿ ಕಶ್ಯಪ್ ದಂಪತಿ ದಾಂಪತ್ಯ ಜೀವನದಲ್ಲಿ ಪರಸ್ಪರ ಬೇರ್ಪಡುವ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಈ ಕುರಿತು ಅವರು ಸಾಮಾಜಿಕ ಜಾಲತಾ ಣಗಳಲ್ಲಿ ಹಂಚಿಕೊಂಡಿದ್ದಾರೆ. 2018ರಲ್ಲಿ ಈ ಜೋಡಿ ವೈವಾಹಿಕ ಜೀವನಕ್ಕೆ ಕಾಲಿಟ್ಟಿತ್ತು. ಇದೀಗ 7 ವರ್ಷಗಳ ದಾಂಪತ್ಯವನ್ನು ಕೊನೆಗೊ ಳಿಸುವ ನಿರ್ಧಾರವನ್ನು ಇವರು ತೆಗೆದುಕೊಂಡಿದ್ದಾರೆ.

ಸೈನಾ ನೆಹ್ವಾಲ್ ಇನ್‌ಸ್ಟಾಗ್ರಾಮ್‌ನಲ್ಲಿ ಈ ವಿಚಾರ ಹಂಚಿಕೊಂಡಿದ್ದು, ಕೆಲವೊಮ್ಮೆ ಜೀವನವು ನಮ್ಮನ್ನು ವಿಭಿನ್ನ ದಿಕ್ಕುಗಳಲ್ಲಿ ಕರೆದೊಯ್ಯುತ್ತದೆ. ಸಾಕಷ್ಟು ಚಿಂತನೆ ಮತ್ತು ಪರಿಗಣನೆಯ ನಂತರ ಪರುಪಳ್ಳಿ ಕಶ್ಯಪ್ ಮತ್ತು ನಾನು ಬೇರೆಯಾಗಲು ನಿರ್ಧರಿಸಿದ್ದೇವೆ. ನಾವು, ನಮ್ಮಿಬ್ಬರಿಗಾಗಿ ಈ ಮಾರ್ಗವನ್ನು ಆರಿಸಿಕೊಳ್ಳುತ್ತಿದ್ದೇವೆ. ನಮ್ಮ ನೆನಪುಗಳಿಗೆ ಕೃತಜ್ಞನಾಗಿದ್ದೇನೆ, ನಮ್ಮ ಗೌಪ್ಯತೆಯನ್ನು ಅರ್ಥಮಾಡಿಕೊಂಡಿದ್ದಕ್ಕಾಗಿ ಮತ್ತು ಗೌರವಿಸಿದ್ದಕ್ಕಾಗಿ ಧನ್ಯವಾದಗಳು' ಎಂದು ಸೈನಾ ಹೇಳಿದ್ದಾರೆ.

ವೃತ್ತಿ ಜೀವನದ ಆರಂಭದಿಂದಲೂ ಇಬ್ಬರೂ ಒಟ್ಟಿಗೆ ಬೆಳೆದಿದ್ದರು. ನೆಹ್ವಾಲ್ ಒಲಿಂಪಿಕ್ಸ್ ಕಂಚಿನ ಪದಕ ಮತ್ತು ವಿಶ್ವದ ನಂ. 1 ಶ್ರೇಯಾಂಕ ಪಡೆದಿದ್ದರೆ ಪರುಪಳ್ಳಿ ಕಶ್ಯಪ್ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದರು. ಕ್ರೀಡೆಯಿಂದ ನಿವೃತ್ತರಾಗಿ, ಈಗ ತರಬೇತಿ ನೀಡುತ್ತಿದ್ದಾರೆ. 2019ರ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ನೆಹ್ವಾಲ್, ಪಿ.ವಿ ಸಿಂಧು ಅವರನ್ನು ಸೋಲಿಸಿದಾಗ ಕಶ್ಯಪ್ ಕೋಚ್ ಆಗಿದ್ದರು.

ಸೈನಾ ನೆಹ್ವಾಲ್ ಅವರು ಕರ್ಣಂ ಮಲ್ಲೇಶ್ವರಿ ನಂತರ ಒಲಿಂಪಿಕ್ ಪದಕ ಗೆದ್ದ ಎರಡನೇ ಭಾರತೀಯ ಮಹಿಳೆ ಎನಿಸಿದ್ದರು. 2015ರಲ್ಲಿ, ಮಹಿಳಾ ಸಿಂಗಲ್ಸ್ ನಲ್ಲಿ ವಿಶ್ವದ ನಂ.1 ಶ್ರೇಯಾಂಕ ಗಳಿಸಿದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ವಿಟಾಕೀಸ್

ಜೂನಿಯರ್‌ಗೆ ತಾರೆಯರ ಸಾಥ್

ಕಿರೀಟಿ ನಟನೆಯ ಚೊಚ್ಚಲ ಸಿನಿಮಾ ಈ ವಾರ ತೆರೆಗೆ ಬರುತ್ತಿದೆ. ರಾಧಾಕೃಷ್ಣ ರೆಡ್ಡಿ ನಿರ್ದೇಶನದಲ್ಲಿ ಸಿದ್ಧವಾಗಿರುವ ಈ ಚಿತ್ರಕ್ಕೆ ತಾರೆಯರು ಸಾಥ್ ನೀಡಿದ್ದಾರೆ. ಶಿವರಾಜ್ ಕುಮಾರ್ ನಟ ಕಿರೀಟಿಯ ಡ್ಯಾನ್ಸ್ ನೋಡಿ ಮೆಚ್ಚಿ ಕೊಂಡಾಡಿದ್ದಾರೆ. ಕಿರೀಟಿ ಡ್ಯಾನ್ಸ್ ನೋಡಿದರೆ ಅಪ್ಪು ಡ್ಯಾನ್ಸ್ ನೋಡಿದಂತೆ ಅನಿಸುತ್ತದೆ. ಮುಂದೆ ಒಳ್ಳೆಯ ನಟನಾಗುವ ಲಕ್ಷಣ ಇದೆ ಎಂದು ಶಿವರಾಜ್ ಕುಮಾರ್ ಹೇಳಿದರು.

ಈ ಸಿನಿಮಾ ಮೂರು ವರ್ಷದ ಜರ್ನಿ, ಅಷ್ಟು ಸಿಂಪಲ್ ಆಗಿ ನಡೆದ ಸಿನಿಮಾವಲ್ಲ. ಪ್ರತಿ ಕುಟುಂಬದಲ್ಲಿ ನಡೆದ ಎಮೋಷನ್, ನೋವು ಇದೆ. ನಾನು ಈ ಚಿತ್ರದಲ್ಲಿ ತಂದೆ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ, ಸಿನಿಮಾ ನೋಡಿದಾಗ ನನಗೆ ಮಾಣಿಕ್ಯ ನೆನಪಾಯ್ತು. ತಂದೆ ಮಗನ ಎಮೋಷನ್ ಎಲ್ಲರನ್ನೂ ಸೆಳೆಯುತ್ತದೆ ಎಂದು ರವಿಚಂದ್ರನ್ ಹೇಳಿದರು.

ಅಪ್ಪು ಅವರ ಜಾಕಿ ಸಿನಿಮಾ ನೋಡಿದೆ ಅಲ್ಲಿಂದ ನನಗೂ ನಟನಾಗಬೇಕು ಎಂದು ಅನ್ನಿಸಿತು, ಅಲ್ಲಿಂದ ನಟನೆಯ ತರಬೇತಿ ಪಡೆದೆ. ಜೋಗಿ ಸಿನಿಮಾದ ಹೊಡಿ ಮಗ ಹಾಡಿಗೆ ನಾನು ಮೊದಲು ಡಾನ್ಸ್ ಮಾಡಿದ್ದು, ಆ ಹಾಡು ನನಲ್ಲಿ ಹೊಸತನ ತುಂಬಿತು. ಚಿತ್ರಕ್ಕಾಗಿ ಸಾಕಷ್ಟು ಶ್ರಮಿಸಿದ್ದೇನೆ. ಒಳ್ಳೆಯ ಕಥೆಯ ಸಿನಿಮಾವನ್ನು ಪ್ರೇಕ್ಷಕರು ಕೈ ಹಿಡಿಯುತ್ತಾರೆ ಎಂಬ ನಂಬಿಕೆ ನನಗಿದೆ ಎಂದು ಕಿರೀಟಿ ವಿಶ್ವಾಸ ವ್ಯಕ್ತಪಡಿಸಿದರು. ಬಾಹುಬಲಿ, ಆರ್‌ಆರ್‌ಆರ್ ಅಂತಹ ಸಿನಿಮಾಗೆ ಛಾಯಾ ಗ್ರಹಣ ನಿರ್ವಹಿಸಿರುವ ಕೆ.ಕೆ ಸೆಂಥಿಲ್ ಕುಮಾರ್ ಈ ಚಿತ್ರಕ್ಕೂ ಛಾಯಾಗ್ರಹಣ ಮಾಡಿದ್ದಾರೆ. ಪೀಟರ್ ಹೆನ್ಸ್ ಸಾಹಸ ನಿರ್ದೇಶನ, ದೇವಿಶ್ರೀ ಪ್ರಸಾದ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಕನ್ನಡ, ತೆಲುಗು, ತಮಿಳು, ಮಲೆಯಾಳಂನಲ್ಲಿ ಜೂನಿಯರ್ ನಿರ್ಮಾಣವಾಗಿದೆ.

ನನ್ನ ಮೊದಲ ಕನ್ನಡ ಸಿನಿಮಾದಲ್ಲಿ ಶಿವರಾಜ್ ಕುಮಾರ್ ಅವರ ಜತೆಗೆ ನಟಿಸಿದ್ದೆ. ಈಗ ಹದಿಮೂರು ವರ್ಷದ ಬಳಿಕ ಕನ್ನಡ ಸಿನಿಮಾ ಮಾಡಿದ್ದೀನಿ. ಕನ್ನಡ ಚಿತ್ರರಂಗ ಇಂದು ಬಹಳ ವಿಸ್ತಾರವಾಗಿ ಬೆಳೆದಿದೆ. ಮತ್ತೆ ಕನ್ನಡ ಸಿನಿಮಾದಲ್ಲಿ ನಟಿಸಿರುವುದು ಖುಷಿಯಾಗಿದೆ, ಮತ್ತಷ್ಟು ಸಿನಿಮಾಗಳಲ್ಲಿ ನಟಿಸುವ ಆಸೆಯಿದೆ. ಚಿತ್ರದಲ್ಲಿ ನನಗೆ ಒಳ್ಳೆಯ ಪಾತ್ರವೂ ಸಿಕ್ಕಿದೆ.

–ಜೆನೀಲಿಯಾ ನಟಿ

ನಾನು ಮೊದಲ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಆಗಿದ್ದಾಗ ಈ ಸಿನಿಮಾದ ಚಿತ್ರೀಕರಣ ಪ್ರಾರಂಭವಾಯಿತು. ಈಗ ನಾನು ಡಾಕ್ಟರ್ ಆಗಿದ್ದೇನೆ. ಈಗ ಚಿತ್ರ ಬಿಡುಗಡೆಯಾಗುತ್ತಿದೆ. ಸಿನಿಮಾದ ನಿರ್ದೇಶಕರು ನಿಧಾನವಾಗಿ ಒಳ್ಳೆ ಸಿನಿಮಾ ಮಾಡಿದ್ದಾರೆ. ಆರು ತಿಂಗಳಿಗೆ ಒಂದಾದರೂ ಕನ್ನಡ ಸಿನಿಮಾ ಆಫರ್‌ಗಳು ನನಗೆ ಸಿಗಲಿ ಎಂಬುದು ನನ್ನ ಆಸೆ. ಮುಂದೆ ಶಿವರಾಜ್ ಕುಮಾರ್ ಅವರ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆ ಇದೆ.

–ಶ್ರೀಲೀಲಾ ನಟಿ

ನಾಲ್ಕು ಶೇಡ್‌ನಲ್ಲಿ ಅಲ್ಲು

ಪುಷ್ಪ 2 ಯಶಸ್ಸಿನ ಖುಷಿಯಲ್ಲಿರುವ ಅಲ್ಲು ಅರ್ಜುನ್ ಈಗ ತಮಿಳು ನಿರ್ದೇಶಕ ಆಟ್ಲಿ ಜತೆಗೆ ಕೈಜೋಡಿಸಿದ್ದಾರೆ. ಆಟ್ಲಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಚಿತ್ರದಲ್ಲಿ ಅಲ್ಲು ನಟಿಸುತ್ತಿದ್ದು, ಈ ಚಿತ್ರದಲ್ಲಿ ನಾಲ್ಕು ಶೇಡ್‌ನಲ್ಲಿ ಕಂಗೊಳಿಸಲಿದ್ದಾರೆ. ಇದು ಮೂರು ತಲೆಮಾರಿನ ಕಥೆಯನ್ನು ಹೊತ್ತು ಬಂದಿದ್ದು. ಇದರಲ್ಲಿ ತಾತ ಮಗ ಮತ್ತು ಮೊಮ್ಮಕ್ಕಳ ಸುತ್ತ ಕಥೆ ಸಾಗಲಿದೆ. ಇದರನ್ನು ಕುತೂಹಲಭರಿತವಾಗಿ ತೆರೆಯಲ್ಲಿ ಹೇಳಲು ಆಟ್ಲಿ ಸಿದ್ಧವಾಗಿದ್ದಾರೆ. ಮೊದಲು ತಾತ ಹಾಗೂ ಮಗನ ಪಾತ್ರಕ್ಕೆ ಹಿರಿಯ ನಟರನ್ನು ಕರೆತರಲು ನಿರ್ಧರಿಸಲಾಗಿತ್ತು. ಆದರೆ ಲುಕ್ ಟೆಸ್ಟ್ ಬಳಿಕ ಅಲ್ಲು ಅರ್ಜುನ್ ನಾಲ್ಕು ಶೇಡ್‌ಗೂ ಹೊಂದಿಕೊಳ್ಳುತ್ತಾರೆ ಎಂಬುದು ತಿಳಿದಿದ್ದು, ಈಗ ಎಲ್ಲಾ ಪಾತ್ರಗಳಲ್ಲೂ ಅಲ್ಲು ಮಿಂಚಲಿದ್ದಾರೆ. ಪ್ರತಿ ಪಾತ್ರಕ್ಕೂ ವಿಭಿನ್ನ ಗೆಟಪ್ ಇದ್ದು, ಅದಕ್ಕೆ ತಕ್ಕಂತೆ ಅಲ್ಲು ಅರ್ಜುನ್ ತಯಾರಿಯನ್ನು ಆರಂಭಿಸಿದ್ದಾರೆ. ರಶ್ಮಿಕಾ, ದೀಪಿಕಾ, ಮೃಣಾಲ್ ಠಾಕೂರ್ ಮತ್ತು ಜಾನ್ವಿ ಕಪೂರ್ ನಾಯಕಿಯರಾಗಿ ಬಣ್ಣಹಚ್ಚುತ್ತಿದ್ದಾರೆ.

ಆಟ್ಲಿ ಸಿನಿಮಾಗಳು ಎಂದರೆ ಒಂದಷ್ಟು ಆ್ಯಕ್ಷನ್ ಅಂಶಗಳೂ ಜಾಸ್ತಿ ಇರುತ್ತವೆ.

ಅಂತೆಯೇ ಇಲ್ಲಿಯೂ ಭರ್ಜರಿ ಸಾಹಸ ದೃಶ್ಯಗಳಿದ್ದು ಬಹುತೇಕ ದೃಶ್ಯವನ್ನು ಸಿಜಿ ಮೂಲಕ ಕಟ್ಟಿಕೊಡಲಾಗುತ್ತಿದೆ. ಹಾಲಿವುಡ್ ತಂತ್ರಜ್ಞರು ಈ ಚಿತ್ರಕ್ಕೆ ಸಿಜಿ ಕೆಲಸ ಮಾಡಿಕೊಡುತ್ತಿದ್ದಾರೆ. ಇನ್ನೇನು ಚಿತ್ರೀಕರಣವೂ ಆರಂಭವಾಗಲಿದ್ದು, 2027ರ ಜನವರಿಯಲ್ಲಿ ಚಿತ್ರವನ್ನು ತೆರೆಗೆ ತರಬೇಕು ಎಂಬುದು ಚಿತ್ರತಂಡದ ಯೋಜನೆಯಾಗಿದೆ.

45ನಲ್ಲಿ ಯುದ್ಧ ಸಾರಿದ ಶಿವಣ್ಣ

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ 45 ಚಿತ್ರವನ್ನು ನಿರ್ದೇಶಿಸಿದ್ದು ಈ ಚಿತ್ರದ ಮೂಲಕ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. 45 ಮಲ್ಟಿಸ್ಟಾರ್ ಸಿನಿಮಾವಾಗಿದ್ದು ಆರಂಭದಿಂದಲೂ ಕುತೂಹಲ ಮೂಡಿಸಿದೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ಉಪೇಂದ್ರ, ರಾಜ್ ಬಿ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಹಾಗಾಗಿ ಚಿತ್ರದಲ್ಲಿ ಗಟ್ಟಿ ಕಂಟೆಂಟ್ ಇದೆ ಎಂಬುದು ಇದರಿಂದ ತಿಳಿಯುತ್ತದೆ. ಈ ಹಿಂದೆಯೇ ಈ ಚಿತ್ರದಲ್ಲಿ ಶಿವಣ್ಣ ಅವರ ಲುಕ್ ಹೇಗಿರಲಿದೆ ಎಂಬುದನ್ನು ಪೋಸ್ಟರ್ ಮೂಲಕ ಚಿತ್ರತಂಡ ಅನಾವರಣ ಮಾಡಿತ್ತು. ಈಗ ಮತ್ತೊಂದು ಪೋಸ್ಟರ್ ಬಿಡುಗಡೆಯಾಗಿದೆ. ಇದರಲ್ಲಿ ಶಿವಣ್ಣ, ಬಿಲ್ಲು ಬಾಣ ಹಿಡಿದು ಯುದ್ಧ ಸಾರಿದ ರೀತಿಯಲ್ಲಿ ಕಾಣಿಸಿಕೊಂಡಿದ್ದಾರೆ. ಈ ಪೋಸ್ಟರ್ ನೋಡಿದರೆ 45 ಚಿತ್ರದಲ್ಲಿ ಭರ್ಜರಿ ಆ್ಯಕ್ಷನ್ ಬೆರೆತಿರುವುದು ತಿಳಿಯುತ್ತದೆ. ಉಪೇಂದ್ರ ಹಾಗೂ ಶಿವಣ್ಣ ಬಹು ದಿನಗಳ ಬಳಿಕ ಒಂದೇ ಚಿತ್ರದಲ್ಲಿ ಕಾಣಿಸಿಕೊಂಡಿರುವುದು ಸಿನಿಮಾದ ಬಗ್ಗೆ ಮತ್ತಷ್ಟು ನಿರೀಕ್ಷೆ ಹೆಚ್ಚಿಸಿದೆ. ಈ ಹಿಂದೆ ಗಾಳಿಪಟ 2 ಚಿತ್ರವನ್ನು ನಿರ್ಮಿಸಿದ್ದ ಎಂ. ರಮೇಶ್ ರೆಡ್ಡಿ ತಮ್ಮ ಸೂರಜ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಹಾಡು ಹಾಗೂ ಟೀಸರ್ ಪ್ರೇಕ್ಷಕರ ಮನಗೆದ್ದಿದೆ. ಚಿತ್ರೀಕರಣ ಮುಗಿಸಿರುವ 45 ಚಿತ್ರತಂಡ ಸಿಜಿ ವರ್ಕ್ ನಲ್ಲಿ ಬ್ಯುಸಿಯಾಗಿದೆ. ಆಗಸ್ಟ್ 15ರಂದು 45 ಅದ್ದೂರಿಯಾಗಿ ತೆರೆಗೆ ಬರಲಿದೆ.

ಬೆಳ್ಳಿತೆರೆಗೆ ವಿಜಯನಗರ ಸಾಮ್ರಾಜ್ಯದ ಕಥೆ

ಬಾಲಿವುಡ್ ಖ್ಯಾತ ನಿರ್ದೇಶಕ ಅಶುತೋಷ್ ಗೋವಾರಿಕರ್ ಲಗಾನ್, ಮೋಹೆಜೋದಾರೊ ಅಂತಹ ಅದ್ಭುತ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಹಲವು ಬಯೋಪಿಕ್ ಸಿನಿಮಾಗಳನ್ನು ನಿರ್ದೇಶಿಸಿ ತೆರೆಗೂ ತಂದಿದ್ದಾರೆ. ಅವರ ಸಿನಿಮಾಗಳು ಎಂದರೆ ಬಲು ರೋಚಕವಾಗಿ ನೈಜತೆಗೆ ಹತ್ತಿರವಾಗಿರುತ್ತವೆ. ಅದರಲ್ಲಿಯೂ ಅವರ ಐತಿಹಾಸಿಕ ಸಿನಿಮಾಗಳು ಎಂದರೆ ಸತ್ಯಕ್ಕೆ ಹತ್ತಿರವಾಗಿರುತ್ತವೆ. ಹಾಗಾಗಿಯೇ ಬಾಲಿವುಡ್ ಮಂದಿಗೆ ಅಶುತೋಷ್ ಸಿನಿಮಾಗಳು ಎಂದರೆ ಅಚ್ಚುಮೆಚ್ಚು. ಗೋವಾರಿಕರ್ ಸಿನಿಮಾಗಳೂ ಗಲ್ಲಾ ಪೆಟ್ಟಿಗೆಯಲ್ಲಿ ಭರ್ಜರಿ ಕಲೆಕ್ಷನ್ ಮಾಡಿವೆ. ಈಗ ಅದೇ ಅಶುತೋಷ್ ಮತ್ತೊಂದು ಐತಿಹಾಸಿಕ ಕಥೆಯ ಸಿನಿಮಾವನ್ನು ನಿರ್ದೇಶನ ಮಾಡಲು ಸಿದ್ಧತೆ ನಡೆಸಿದ್ದಾರೆ. ಹೌದು ಕನ್ನಡದ ಹೆಮ್ಮೆಯ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ತೆರೆಗೆ ತರಲಿದ್ದಾರೆ. ಈ ಚಿತ್ರದಲ್ಲಿ ರಿಷಬ್ ಶೆಟ್ಟಿ ಕೃಷ್ಣದೇವರಾಯನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಕಾಂತಾರ ಚಿತ್ರ ಭರ್ಜರಿ ಯಶಸ್ಸು ಕಂಡ ಸಂದರ್ಭದಲ್ಲಿಯೇ ಅಶುತೋಷ್, ರಿಷಬ್ ಜತೆಗೆ ಸಿನಿಮಾ ಮಾಡುವುದಾಗಿ ಹೇಳಿದ್ದರು. ಆದರೆ ಯಾವ ಕಥೆ ಎಂಬುದನ್ನು ಬಹಿರಂಗಪಡಿಸಿರಲಿಲ್ಲ. ರಿಷಬ್‌ಗಾಗಿ ಐತಿಹಾಸಿಕ ಕಥೆಯನ್ನು ಹೆಣೆದಿರುವುದು ರಿವಿಲ್ ಆಗಿದೆ. ಅದು ಕರುನಾಡಿನ ಹೆಮ್ಮೆಯ ವಿಜಯನಗರ ಸಾಮ್ರಾಜ್ಯದ ಕಥೆ ಎಂಬುದು ಖಚಿತವಾಗಿದೆ.

ವಿಜಯನನಗರ ಸಾಮ್ರಾಜ್ಯದ ಕಥನವನ್ನು ತೆರೆಯಲ್ಲಿ ಕಟ್ಟಿಕೊಡಲು ಎರಡು ವರ್ಷಗಳಿಂದಲೂ ಸಂಶೋಧನೆ ಮಾಡಿ ಹಲವು ವಿಚಾರಗಳನ್ನು ಕಲೆ ಹಾಕಿರುವ ಅಶುತೋಷ್, ಕಥೆ ಬರೆಯುವಲ್ಲಿ ಬ್ಯುಸಿಯಾಗಿದ್ದು ಇನ್ನೇನು ಸ್ಕ್ರಿಪ್ಟ್ ಕೆಲಸ ಮುಗಿಯುವ ಹಂತದಲಿದ್ದೆ, ಆ ಬಳಿಕ ಪ್ರೀ

ಪ್ರೊಡಕ್ಷನ್ ಕೆಲಸಗಳು ಆರಂಭವಾಗಲಿವೆ. ಈ ಐತಿಹಾಸಿಕ ಚಿತ್ರ ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದ್ದು ಎರಡು ಭಾಗದಲ್ಲಿ ಮೂಡಿಬರಲಿದೆ ಎಂಬ ಮಾಹಿತಿಯೂ ಇದೆ.

ಸದ್ಯ ರಿಷಬ್ ಶೆಟ್ಟಿ ಕಾಂತಾರ ಚಾಪ್ಟರ್ 1 ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಚಿತ್ರೀಕರಣ ಮುಗಿಸಿರುವ ಕಾಂತಾರ, ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿದೆ. ಇದು ಪೌರಾಣಿಕ ಕಥೆಯ ಜತೆಗೆ ಕಂದಂಬರ ಕಾಲದ ಕಥೆಯನ್ನು ಒಳಗೊಂಡಿದ್ದು ರೋಚಕವಾಗಿ ಮೂಡಿಬರುತ್ತಿದೆ. ರಿಷಬ್ ಈ ಚಿತ್ರದಲ್ಲಿ ಹೊಸ ಲುಕ್‌ನಲ್ಲಿ ಮಿಂಚಿದ್ದಾರೆ. ಅಕ್ಟೋಬರ್ 2ರಂದು ಕಾಂತಾರ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ಈ ಚಿತ್ರದ ಬಳಿಕ ರಿಷಬ್ ಬಾಲಿವುಡ್ ಅಂಗಳಕ್ಕೂ ಜಿಗಿಯಲಿದ್ದು ಛತ್ರಪತಿ ಶಿವಾಜಿ ಪಾತ್ರದಲ್ಲಿ ನಟಿಸಲಿದ್ದಾರೆ. ಅದರ ಜತೆಗೆ ತೆಲುಗು ಸಿನಿಮಾದಲ್ಲಿಯೂ ಅಭಿನಯಿಸಲಿದ್ದಾರೆ. ಈ ಎರಡೂ ಸಿನಿಮಾಗಳು ಐತಿಹಾಸಿಕ ಹಿನ್ನೆಲೆಯ ಕಥೆಯನ್ನು ಒಳಗೊಂಡಿರುವುದು ವಿಶೇಷವಾಗಿದೆ. ಈ ಎರಡು ಸಿನಿಮಾಗಳ ಬಳಿಕ ರಿಷಬ್, ಅಶುತೋಷ್ ಗೋವಾರಿಕರ್ ಜತೆಯಾಗಲಿದ್ದಾರೆ.